ಗುರುವಾರ, ನವೆಂಬರ್ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 308 | ಪುಟ 14

www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಲೋಕಲ್ ಬ್ಯಾಂಕ್ ಆಫೀಸರ್ಸ್ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನ



ಆಳ–ಅಗಲ
ವಕ್ಫ್ ಆಸ್ತಿಗಳ ಪಹಣಿ ಬದಲಾವಣೆ ಏನು, ಎತ್ತ?
ಮಿಥುನ್ ಚಕ್ರವರ್ತಿ ವಿರುದ್ಧ ಎಫ್‌ಐಆರ್ 7
ಅಳುವುದೇ ಗೌಡರ ಪರಂಪರೆ: ಸಿ.ಎಂ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,378 ▲	24,484 ▲	₹82,860 (ಬೆಂಗಳೂರು) ▼	₹99,300 (ಬೆಂಗಳೂರು) ▼	84.31 ▼

ಶ್ವೇತಭವನದ ಗದ್ದುಗೆಗೆ 2ನೇ ಬಾರಿಗೆ ಏರಿದ ನಾಯಕ • ಉಪಾಧ್ಯಕ್ಷೆ ಕಮಲಾ ಹ್ಯಾರಿಸ್‌ಗೆ ನಿರಾಸೆ

ಟ್ರಂಪ್‌ಗೆ ಮತ್ತೆ ಅಮೆರಿಕ ಪಟ್ಟ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅಭೂತಪೂರ್ವ ಜಯ ಗಳಿಸಿದ್ದು 47ನೇ ಅಧ್ಯಕ್ಷರಾಗುವುದು ಖಚಿತವಾಗಿದೆ. ಬುಧವಾರ ಮತ ಎಣಿಕೆ ನಡೆದಿದ್ದು ಗೆಲುವಿಗೆ ಅಗತ್ಯವಿರುವ 270 ಎಲೆಕ್ಟರ್‌ಗಳ ಬೆಂಬಲವನ್ನು ಪಡೆಯುವಲ್ಲಿ ಟ್ರಂಪ್ ಯಶಸ್ವಿಯಾಗಿದ್ದಾರೆ.

ಆರ್ಥಿಕ ಮತ್ತು ಮಿಲಿಟರಿ ಶಕ್ತಿಯಲ್ಲಿ ವಿಶ್ವದ ಬಲಾಢ್ಯ ರಾಷ್ಟ್ರವಾಗಿರುವ ಅಮೆರಿಕದ ಚುಕ್ಕಾಣಿಯನ್ನು 78ರ ಹರೆಯದ ಟ್ರಂಪ್ ಎರಡನೇ ಬಾರಿಗೆ ಹಿಡಿಯುವ ಮೂಲಕ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಟ್ರಂಪ್ ಅವರ ಈ ಗೆಲುವನ್ನು ಅಮೆರಿಕದ ಇತಿಹಾಸದಲ್ಲಿ ಅತಿದೊಡ್ಡ ರಾಜಕೀಯ ಪುನರಾಗಮನವೆಂದು ವಿಶ್ಲೇಷಿಸಲಾಗುತ್ತಿದೆ.

ಈ ಬಾರಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಏರ್ಪಟ್ಟಿದ್ದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ತಮ್ಮ ಪ್ರಬಲ ಪ್ರತಿಸ್ಪರ್ಧಿಯಾಗಿದ್ದ ಹಾಲಿ ಉಪಾಧ್ಯಕ್ಷೆ, ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್ ಎದುರು ಟ್ರಂಪ್ ಗೆಲುವಿನ ನಗೆ ಬೀರಿದ್ದಾರೆ. ಟ್ರಂಪ್‌ಗೆ 292 ಎಲೆಕ್ಟರ್‌ಗಳು ಹಾಗೂ ಕಮಲಾ ಅವರಿಗೆ 224 ಎಲೆಕ್ಟರ್‌ಗಳ ಬೆಂಬಲ ದೊರೆತಿದೆ. ಅಧ್ಯಕ್ಷರಾಗಿ ಆಯ್ಕೆಯಾಗಲು ಒಟ್ಟು 538 ಎಲೆಕ್ಟರ್‌ಗಳ ಪೈಕಿ 270 ಎಲೆಕ್ಟರ್‌ಗಳ ಬೆಂಬಲದ ಅಗತ್ಯವಿತ್ತು.

2016ರಲ್ಲಿ ಹಿಲರಿ ಕ್ಲಿಂಟನ್ ವಿರುದ್ಧ ಗೆಲುವು ಸಾಧಿಸಿ 45ನೇ ಅಧ್ಯಕ್ಷರಾಗಿ ಆಡಳಿತ ನಡೆಸಿದ್ದ ಟ್ರಂಪ್, 2020ರ ಚುನಾವಣೆಯಲ್ಲಿ ಜೋ ಬೈಡನ್ ಎದುರು ಪರಾಭವಗೊಂಡಿದ್ದರು.

50 ರಾಜ್ಯಗಳ ಪೈಕಿ ಚುನಾವಣಾ ಫಲಿತಾಂಶ ನಿರ್ಧರಿಸುವಲ್ಲಿ ನಿರ್ಣಾಯಕವಾಗಿದ್ದ ರಾಜ್ಯಗಳಲ್ಲಿ ಫ್ಲಾರಿಡಾ, ಇಂಡಿಯಾನಾ, ಕೆಂಟುಕಿ ಸೇರಿದಂತೆ 9 ರಾಜ್ಯಗಳಲ್ಲಿ ಟ್ರಂಪ್ ಗೆಲುವು ಸಾಧಿಸಿದರೆ, ಕಮಲಾ ಹ್ಯಾರಿಸ್ ಅವರಿಗೆ ನ್ಯೂಯಾರ್ಕ್, ವರ್ಮೊಂಟ್ ಸೇರಿ 5 ರಾಜ್ಯಗಳಲ್ಲಿ ಗೆಲುವು ದಕ್ಕಿತು.

ಪೆನ್ಸಿಲ್ವೇನಿಯಾ, ಜಾರ್ಜಿಯಾ ಮತ್ತು ಉತ್ತರ ಕೆರೊಲಿನಾ ರಾಜ್ಯಗಳಲ್ಲೂ ಟ್ರಂಪ್ ಗೆಲುವಿನ ಹತ್ತಿರದ-ಲ್ಲಿದ್ದು, ಅರಿಜೋನಾ, ಮಿಷಿಗನ್, ವಿಸ್ಕಾನ್ಸಿನ್ ಮತ್ತು ನೆವಾಡಾದಲ್ಲಿ ಮತ ಎಣಿಕೆ ಕಾರ್ಯ ಪತ್ರಿಕೆ ಮುದ್ರಣಕ್ಕೆ ಹೋಗುವವರೆಗೂ ಮುಂದುವರಿದಿತ್ತು.

ಮತ ಎಣಿಕೆ ಕಾರ್ಯ ಆರಂಭವಾಗುತ್ತಿದ್ದಂತೆ ಟ್ರಂಪ್ ಅವರು ಮುನ್ನಡೆ ಪಡೆದರು. ಇದರಿಂದ ನಿರಾಶೆಗೊಂಡ ಕಮಲಾ ಹ್ಯಾರಿಸ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಡೆಸಬೇಕಿದ್ದ ರ್‍ಯಾಲಿಯನ್ನು ರದ್ದುಪಡಿಸಿದರು.

> ಅಭ್ಯರ್ಥಿಯೊಬ್ಬರು ಒಮ್ಮೆ ಸೋತು, ಮತ್ತೊಂದು ಅವಧಿಗೆ ಸ್ಪರ್ಧಿಸಿ ಗೆದ್ದ ಇತಿಹಾಸ 132 ವರ್ಷಗಳಿಂದ ಅಮೆರಿಕದಲ್ಲಿ ಇರಲಿಲ್ಲ
>
> ಅಧ್ಯಕ್ಷ ಗಾದಿಗೆ ಇದುವರೆಗೆ ಏರಿದವರಲ್ಲಿ ಅತ್ಯಂತ ಹಿರಿಯ ನಾಯಕ ಎನ್ನುವ ಶ್ರೇಯ ಟ್ರಂಪ್‌ಗೆ

> ಗಂಭೀರ ಅಪರಾಧ ಪ್ರಕರಣದಲ್ಲಿ ತಪ್ಪಿತಸ್ಥನಾದ ವ್ಯಕ್ತಿಗೆ ಮೊದಲ ಬಾರಿಗೆ ಅಧ್ಯಕ್ಷ ಸ್ಥಾನ



> ಸ್ನೇಹಿತ ಟ್ರಂಪ್ ಅವರಿಗೆ ಅಭಿನಂದನೆ. ನಮ್ಮ ಜನರಿಗಾಗಿ, ಜಾಗತಿಕ ಶಾಂತಿ, ಸಮೃದ್ಧಿ, ದೃಢತೆಗಾಗಿ ಒಟ್ಟಾಗಿ ಕೆಲಸ ಮಾಡೋಣ
> **ನರೇಂದ್ರ ಮೋದಿ,** ಭಾರತದ ಪ್ರಧಾನಿ

> ಜಾಗತಿಕ ಶಾಂತಿ ಮತ್ತು ಸಮೃದ್ಧಿಗಾಗಿ ನಾವು ಅಮೆರಿಕದ ಜತೆಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

11ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 11

ಎಸ್‌ಸಿ ವಿದ್ಯಾರ್ಥಿಗಳಿಗೆ ₹ 25 ಲಕ್ಷ

ವೈದ್ಯಕೀಯ ಸೀಟು



ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 95 ಮತ್ತು ಅದಕ್ಕಿಂತ ಹೆಚ್ಚಿನ ಅಂಕ ಪಡೆದು ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಸಿಗದೆ, ಆಡಳಿತ ಮಂಡಳಿಯ ಕೋಟಾದಡಿ ಎಂಬಿಬಿಎಸ್ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿ ₹25 ಲಕ್ಷ ಕಾಲೇಜು ಶುಲ್ಕ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಅಲ್ಲದೆ, ಹೀಗೆ ಪ್ರವೇಶ ಪಡೆದ ವಿದ್ಯಾರ್ಥಿ ಎಂಬಿಬಿಎಸ್ ಮೊದಲ ವರ್ಷದಲ್ಲಿ ಶೇ 60ಕ್ಕೂ ಹೆಚ್ಚು ಅಂಕ ಪಡೆದರೆ ಮತ್ತೆ ₹25 ಲಕ್ಷ ಪ್ರೋತ್ಸಾಹಧನ ಸಿಗಲಿದೆ.

ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

5ನೇ ಪುಟ ನೋಡಿ

ತವರು ಮೈಸೂರಿನಲ್ಲಿ ಎರಡು ತಾಸು ವಿಚಾರಣೆಗೊಳಗಾದ ಸಿದ್ದರಾಮಯ್ಯ

ವಿಚಾರಣೆ ಎದುರಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಡಾ ನಿವೇಶನ ಅಕ್ರಮ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು.

ಅಧಿಕಾರದಲ್ಲಿ ಇದ್ದಾಗಲೇ ಲೋಕಾಯುಕ್ತ ವಿಚಾರಣೆ ಎದುರಿಸಿದ ಮೊದಲ ಮುಖ್ಯಮಂತ್ರಿ ಅವರಾಗಿದ್ದಾರೆ. ಅಲ್ಲದೇ, ನಾಲ್ಕು ದಶಕಗಳ ತಮ್ಮ ಸುದೀರ್ಘ ರಾಜಕೀಯ ಬದುಕಿನಲ್ಲಿ ಎದುರಿಸಿದ ಮೊದಲ ವಿಚಾರಣೆಯೂ ಇದಾಗಿದೆ.

ಎರಡು ತಾಸು ವಿಚಾರಣೆ: ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಜೊತೆ ಖಾಸಗಿ ಕಾರಿನಲ್ಲಿ ಬೆಳಿಗ್ಗೆ 10.10ಕ್ಕೆ ಕಚೇರಿಗೆ ಬಂದ ಸಿದ್ದರಾಮಯ್ಯ, ಮಧ್ಯಾಹ್ನ 12.07ರ ಸುಮಾರಿಗೆ ಅಲ್ಲಿಂದ ನಿರ್ಗಮಿಸಿದರು.

> **'ಮತ್ತೆ ವಿಚಾರಣೆ ಸಾಧ್ಯತೆ'**
> 'ಪ್ರಕರಣದ ನಾಲ್ವರು ಆರೋಪಿಗಳಾದ ಸಿದ್ದರಾಮಯ್ಯ, ಬಿ.ಎಂ. ಪಾರ್ವತಿ, ಮಲ್ಲಿಕಾರ್ಜುನಸ್ವಾಮಿ ಹಾಗೂ ದೇವರಾಜು ಅವರ ವಿಚಾರಣೆ ಮುಗಿದಿದೆ. ನಾಲ್ವರು ನೀಡಿರುವ ಹೇಳಿಕೆಗಳನ್ನು ತನಿಖಾಧಿಕಾರಿಗಳು ದಾಖಲೆಗಳ ಜೊತೆ ತಾಳೆ ಹಾಕಲಿದ್ದಾರೆ. ಒಂದು ವೇಳೆ ಎಲ್ಲರ ಹೇಳಿಕೆಗಳು ಭಿನ್ನವಾಗಿದ್ದಲ್ಲಿ, ಸ್ಪಷ್ಟನೆಗಾಗಿ ಮತ್ತೊಮ್ಮೆ ಆರೋಪಿಗಳನ್ನು ವಿಚಾರಣೆಗೆ ಕರೆಯುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಲೋಕಾಯುಕ್ತ ಕಚೇರಿಯ ಮೊದಲ ಮಹಡಿಯಲ್ಲಿನ ಕಾನ್ಫರೆನ್ಸ್ ಸಭಾಂಗಣದಲ್ಲಿ ವಿಚಾರಣೆಯಲ್ಲಿ ಮೈಸೂರು ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್, ಚಾಮರಾಜನಗರ ಡಿವೈಎಸ್‌ಪಿ ಥಾಮಸ್ ಮ್ಯಾಥ್ಯೂ ಹಾಗೂ ಕೊಡಗು ಇನ್‌ಸ್ಪೆಕ್ಟರ್ ಲೋಕೇಶ್ ಅವರನ್ನು ಒಳಗೊಂಡ ತಂಡವು, ಪ್ರಕರಣದ ಮೊದಲ ಆರೋಪಿ ಆಗಿರುವ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿತು.

ಒಟ್ಟು 3-4 ಪುಟಗಳ ಪ್ರಶ್ನಾವಳಿ ಸಿದ್ಧಪಡಿಸಿದ್ದ ಅಧಿಕಾರಿಗಳು, 25ರಿಂದ 30 ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು. ಇಡೀ ವಿಚಾರಣೆಯನ್ನು ವಿಡಿಯೊ ರೆಕಾರ್ಡ್ ಮಾಡಿಕೊಳ್ಳಲಾಯಿತು. ಪ್ರತಿ ಪ್ರಶ್ನೆಗೂ ಸಿದ್ದರಾಮಯ್ಯ ನಗುಮೊಗದಿಂದ, ತಾಳ್ಮೆಯಿಂದ ಉತ್ತರಿಸಿದರು ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಅರಣ್ಯ ಒತ್ತುವರಿ ಹೆಚ್ಚಳ; ಕ್ರಮಕ್ಕೆ ಕೇಂದ್ರ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳಗಾವಿ, ಧಾರವಾಡ ವೃತ್ತ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಹೆಚ್ಚುತ್ತಿರುವ ಅರಣ್ಯ ಒತ್ತುವರಿ ಪ್ರಕರಣಗಳ ಕುರಿತು ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ನಿರ್ದೇಶನ ನೀಡಿದೆ.

ಕಳೆದೆರಡು ವರ್ಷಗಳಿಂದ ಬೆಳಗಾವಿ ಹಾಗೂ ಧಾರವಾಡ ವೃತ್ತ ಸೇರಿದಂತೆ ರಾಜ್ಯದಾದ್ಯಂತ ಹೊಸ ಅರಣ್ಯ ಒತ್ತುವರಿ ಪ್ರಕರಣಗಳು ವ್ಯಾಪಕ ಪ್ರಮಾಣದಲ್ಲಿ ಹೆಚ್ಚಾಗಿವೆ ಎಂದು ಆರೋಪಿಸಿ ಧಾರವಾಡದ ನಿವಾಸಿ ಹಣಮಂತ ಎಂಬುವರು ಸಚಿವಾಲಯಕ್ಕೆ ದೂರು ಸಲ್ಲಿಸಿದ್ದರು.

ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಸಚಿವಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಸಚಿವಾಲಯದ ಉಪ ಮಹಾನಿರ್ದೇಶಕರು (ಅರಣ್ಯ) ಸೂಚಿಸಿದ್ದಾರೆ.

5ನೇ ಪುಟ ನೋಡಿ

'ರಾತ್ರೋರಾತ್ರಿ ಕಟ್ಟಡ ನೆಲಸಮ ಮಾಡುವಂತಿಲ್ಲ'

ನವದೆಹಲಿ (ಪಿಟಿಐ): ರಸ್ತೆ ವಿಸ್ತರಣೆ, ಒತ್ತುವರಿ ತೆರವಿನ ವೇಳೆ ಮುಂಚಿತವಾಗಿ ನೋಟಿಸ್ ನೀಡದೇ, ಕಟ್ಟಡಗಳನ್ನು 'ರಾತ್ರೋರಾತ್ರಿ ನೆಲಸಮಗೊಳಿಸುವಂತಿಲ್ಲ' ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ವಿಚಾರವಾಗಿ ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬುಧವಾರ ನಿರ್ದೇಶನ ನೀಡಿದೆ. 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನಗರದಲ್ಲಿ ಇಂದು

ನುಡಿ ತರಂಗ: ಅತಿಥಿಗಳು: ಗುರುರಾಜ ಕರಜಗಿ, ಶ್ರೀಮುರಳಿ, ಅರುಣ್ ಸಾಗರ್, ಶಾಲಿನಿ ಬಿ. ರೆಡ್ಡಿ, ಅಧ್ಯಕ್ಷತೆ: ಗುರುರಾಜ್ ಎಸ್. ದಾವಣಗೆರೆ, ಆಯೋಜನೆ ಮತ್ತು ಸ್ಥಳ: ಆಚಾರ್ಯ ವಿದ್ಯಾಸಂಸ್ಥೆಗಳು, ಸೋಲದೇವನಹಳ್ಳಿ, ಬೆಳಿಗ್ಗೆ 11



ಶ್ರೀಮುರಳಿ

ಸಮರ್ಥನಂ ಕಲಾ ಕೇಂದ್ರದ ಉದ್ಘಾಟನೆ: ಅತಿಥಿಗಳು: ಸಂಜಯ್ ಸಿಂಗ್, ಜಯಶ್ರೀ ಬಾಲಕೃಷ್ಣ, ಅವೀಕ್ ಸಿನ್ಹಾ, ನಾಗಭೂಷಣ ರೆಡ್ಡಿ, ರವಿ ಕುಮಾರ್, ಕುನಾಲ್ ಗಾಂಜಾವಾಲಾ, ಮಹಾಂತೇಶ್ ಜಿ. ಕಿವಡಸಣ್ಣವರ್, ಆಯೋಜನೆ: ಸಮರ್ಥನಂ ಅಂಗವಿಕಲರ ಸಂಸ್ಥೆ, ಸ್ಥಳ: ಸಮರ್ಥನಂ ಕಲಾಕೇಂದ್ರ, ಎಚ್‌ಎಸ್‌ಆರ್ ಲೇಔಟ್, ಮಧ್ಯಾಹ್ನ 12

'ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅರಿಯುವುದು, ಅನುಸರಿಸುವುದು ಹೇಗೆ?' ವಿಚಾರ ಮಂಡನೆ: ಸಿ.ಜಿ. ಲಕ್ಷ್ಮೀಪತಿ, ಆಯೋಜನೆ ಮತ್ತು ಸ್ಥಳ: ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 5

ಹಿರಿಯ ಸಂಗೀತ ವಿದ್ವಾಂಸರ, ಯುವ ಸಂಗೀತ ವಿದ್ವಾಂಸರ ಸಂಗೀತ ಸಮ್ಮೇಳನ: ವಿದ್ವತ್ ಗೋಷ್ಠಿ: ಮೀರಾ ರಾಜಾರಾಮ್ ಪ್ರಾಣೇಶ್, 'ಬಿವಿಕೆ ಒಂದು ನೆನಪು': ಎಚ್.ಎಸ್. ಅನಸೂಯ, 'ಮಿದುಳು–ಶಾಸ್ತ್ರೀಯ ಸಂಗೀತ ಒಂದು ಅಧ್ಯಯನ': ಶಾಂತಲಾ ಹೆಗ್ಡೆ, 'ಯೋಗ ಪದ್ಧತಿ ಮತ್ತು ನಾದ ಯೋಗ–ಒಂದು ಚಿಂತನೆ': ಶಿಲ್ಪಾ ಶಶಿಧರ್, ಗಾಯನ: ಕೆ.ಟಿ. ಉದಯ್ ಕಿರಣ್, ಪಿಟೀಲು: ಮತ್ತೂರು ಆರ್. ಶ್ರೀನಿಧಿ, ಮೃದಂಗ: ಜಿ.ಎಸ್. ರಾಮಾನುಜನ್, ಘಟ: ಎಸ್. ಮಂಜುನಾಥ್, ಮೋರ್ಚಿಂಗ್: ವಿ.ಎಸ್. ರಮೇಶ್, ಕೊಳಲು: ಎಂ.ಕೆ. ಪ್ರಾಣೇಶ್, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಕೆ.ಯು. ಜಯಚಂದ್ರ ರಾವ್, ಘಟ: ರಂಗನಾಥ್ ವಿ. ಚಕ್ರವರ್ತಿ, ಆಯೋಜನೆ: ಕರ್ನಾಟಕ ಗಾನಕಲಾ ಪರಿಷತ್ತು, ಸ್ಥಳ: ಪತ್ತಿ ಸಭಾಂಗಣ, ರಾಮ ಮಂದಿರ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

ಕನ್ನಡ ಪುಸ್ತಕ ಹಬ್ಬ 'ಕನಕಜಾನಕಿ' ಏಕವ್ಯಕ್ತಿ ತಾಳಮದ್ದಳೆ: ಪ್ರಸ್ತುತಿ: ದಿವಾಕರ ಹೆಗಡೆ ಕೆರೆಹೊಂಡ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ –ಪರಿಷತ್, ಕೆಂಪೇಗೌಡನಗರ, ಸಂಜೆ 6

'ಪು.ತಿ. ನರಸಿಂಹಾಚಾರ್ ವಿರಚಿತ ಶ್ರೀಹರಿ ಚರಿತೆ' ವಾಚನ ಮತ್ತು ವ್ಯಾಖ್ಯಾನ: ಜಲಜಾರಾಜು, ಎಂ.ಸುಷ್ಮಾ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಅತಿಥಿ: ಎಂ.ಸಿ. ನರೇಂದ್ರ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡರ ನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕ್ಯಾನ್ಸರ್: 86 ಸಾವಿರ ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ 86,563 ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ವರದಿಯಾಗಿವೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ ನಿಮಿತ್ತ ಸಂಸ್ಥೆಯು ಗುರುವಾರ ಬೆಳಿಗ್ಗೆ 10.45ಕ್ಕೆ ಜಾಗೃತಿ ಕಾರ್ಯಕ್ರಮ ಹಾಗೂ ಕಾರ್ಯಾಗಾರ ಹಮ್ಮಿಕೊಂಡಿದೆ ಆಡಳಿತಾಧಿಕಾರಿ ಡಾ.ನವೀನ್ ಭಟ್ ತಿಳಿಸಿದ್ದಾರೆ.

2023ರಲ್ಲಿ ಮಹಿಳೆಯರೇ (47,959) ಅಧಿಕ ಸಂಖ್ಯೆಯಲ್ಲಿ ಕ್ಯಾನ್ಸರ್ ಪೀಡಿತರಾಗಿದ್ದಾರೆ. ಬೆಂಗಳೂರಿನಲ್ಲಿ (18,125), ಬೆಳಗಾವಿ (6,601), ಮೈಸೂರು (4,166), ಬಳ್ಳಾರಿ (3,941), ಕಲಬುರಗಿಯಲ್ಲಿ (3,709) ಹೆಚ್ಚು ಪ್ರಕರಣಗಳಿವೆ.

ರಾಜ್ಯದಲ್ಲಿ ಪ್ರತಿ ವರ್ಷ ಸರಾಸರಿ 975 ಮಕ್ಕಳಲ್ಲಿ ಕ್ಯಾನ್ಸರ್ ದೃಢ ಪಡುತ್ತಿವೆ. ಬೆಂಗಳೂರಿನಲ್ಲಿ ಸರಾಸರಿ 280ರಿಂದ 300 ಪ್ರಕರಣಗಳು ವರದಿ ಯಾಗುತ್ತಿವೆ ಎಂದು ತಿಳಿಸಿದೆ.

ವ್ಯಾಪ್ತಿ ಮೀರಿ ಸುಂಕ ವಸೂಲಿಗೆ ರೈತರು ಮತ್ತು ವ್ಯಾಪಾರಿಗಳ ಆಕ್ರೋಶ

ಗುತ್ತಿಗೆದಾರರ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಕೆ.ಆರ್‌.ಪುರ ಬಿಬಿಎಂಪಿ ಕಚೇರಿ ಮುಂಭಾಗದಲ್ಲಿ ರೈತರು ಮತ್ತು ವ್ಯಾಪಾರಿಗಳು ಪ್ರತಿಭಟನೆ ನಡೆಸಿದರು

ಕೆ.ಆರ್.ಪುರ: ಇಲ್ಲಿನ ಕೆ.ಆರ್.ಪುರ ಮಾರುಕಟ್ಟೆಯಲ್ಲಿ ಸುಂಕ ವಸೂಲಾತಿಗೆ ಟೆಂಡರ್ ಗುತ್ತಿಗೆ ಪಡೆದವರು ಗಡಿ ಮೀರಿ ಸುಂಕ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿ ಅಖಿಲ ಕರ್ನಾಟಕ ರೈತರು ಮತ್ತು ವ್ಯಾಪಾರಿಗಳ ಒಕ್ಕೂಟದ ನೂರಾರು ಕಾರ್ಯಕರ್ತರು ಕೆ.ಆರ್.ಪುರ ಬಿಬಿಎಂಪಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪುರ ಮಾರುಕಟ್ಟೆಯ ಟೆಂಡರ್ ಅವಧಿ ಮುಗಿದ ನಂತರ ಹೊಸದಾಗಿ 1 ಎಕರೆ 14 ಗುಂಟೆ ವ್ಯಾಪ್ತಿಯಲ್ಲಿ ಸುಂಕ ವಸೂಲಾತಿಗೆ ಇ-ಟೆಂಡರ್ ಕರೆಯಲಾಗಿತ್ತು. ಟೆಂಡರ್ ಪಡೆದ ಗುತ್ತಿಗೆದಾರ ಅಂಜನ್ ಮೂರ್ತಿ ಎಂಬುವವರು ವ್ಯಾಪ್ತಿ ಮೀರಿ ಹೆಚ್ಚುವರಿ ಪ್ರದೇಶದಲ್ಲಿ ಸುಂಕ ವಸೂಲಾತಿ ಮಾಡುತ್ತಿದ್ದಾರೆ ಎಂದು ಒಕ್ಕೂಟದ ಅಧ್ಯಕ್ಷ ಎಲೆ ಶ್ರೀನಿವಾಸ್ ಆರೋಪಿಸಿದರು.

ಹೆಚ್ಚಿನ ಸುಂಕ ವಸೂಲಾತಿ ಸಂಬಂಧ ಸಹಾಯಕ ಪೊಲೀಸ್ ಆಯುಕ್ತರು, ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕೆ.ಆರ್.ಪುರ ಠಾಣೆ ಇನ್‌ಸ್ಪೆಕ್ಟರ್ ಸಮ್ಮುಖದಲ್ಲಿ ಸಭೆ ನಡೆಸಿ ಗುತ್ತಿಗೆದಾರರಾದ ಅಂಜನ್ ಮೂರ್ತಿಯವರಿಗೆ ಟೆಂಡರ್ ಪಡೆದಿರುವಷ್ಟು ವ್ಯಾಪ್ತಿಯಲ್ಲಷ್ಟೇ ಸುಂಕ ವಸೂಲಾತಿ ಮಾಡುವಂತೆ ಆದೇಶಿಸಿದ್ದರು. ನಂತರ, ಮೂರು ದಿನಗಳಲ್ಲಿ ಗಡಿ ಗುರುತಿಸಿ ಕೊಡುವುದಾಗಿ ಎಂದೂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಭರವಸೆ ನೀಡಿದ್ದರು. ಈವರೆಗೂ ಗಡಿ ಗುರುತಿಸಿಲ್ಲ ಎಂದು ದೂರಿದರು.

'ಗಡಿ ಗುರುತಿಸದಿದ್ದರಿಂದ, ಸಂತೆ ಮೈದಾನ ಮತ್ತು ಐಟಿಐ ಗೇಟ್‌ನಿಂದ ವೆಂಗಯ್ಯನ ಕೆರೆಯವರೆಗೂ(ಅರ್ಧ ಕಿ.ಮೀವರೆಗೂ) ಕೆಲವರು ಅಕ್ರಮ ಸುಂಕ ವಸೂಲಿಗೆ ಇಳಿದಿದ್ದಾರೆ. ಕೆಲವು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವ ಪುಂಡರು ದೌರ್ಜನ್ಯ– ದಬ್ಬಾಳಿಕೆಯಿಂದ ರೈತರು ವ್ಯಾಪಾರಸ್ಥರಲ್ಲಿ ಹಫ್ತಾ ವಸೂಲಿಗೆ ಇಳಿದಿದ್ದಾರೆ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದರೆ, ಪೊಲೀಸರು, ಬಿಬಿಎಂಪಿಯವರು ನಮಗೆ ಪತ್ರ ಬರೆದರೆ ಮಾತ್ರ ಕ್ರಮ ಕೈಗೊಳ್ಳುತ್ತೇವೆ ಎನ್ನುತ್ತಾರೆ' ಎಂದು ಆರೋಪಿಸಿದರು.

ಪ್ರತಿಭಟನಕಾರರ ಮನವಿ ಸ್ವೀಕರಿಸಿದ ಬಿಬಿಎಂಪಿ ಮಹದೇವಪುರ ವಲಯ ಆಯುಕ್ತ ರಮೇಶ್, 'ಸರ್ಕಾರಿ ಜಾಗಗಳಲ್ಲಿ ಅಕ್ರಮವಾಗಿ ವಸೂಲಾತಿ ಮಾಡಲು ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ. ಸುಂಕ ವಸೂಲಾತಿಗೆ ಸಂಬಂಧಿಸಿದಂತೆ ಸುಮಾರು 5 ಎಕರೆ ಜಾಗದಲ್ಲಿ 1 ಎಕರೆ 14 ಗುಂಟೆ ಜಾಗಕ್ಕೆ ಟೆಂಡರ್ ನೀಡಲಾಗಿದೆ. ತಹಶೀಲ್ದಾರ್, ಎಡಿಎಲ್‌ಆರ್‌ಗೂ ಪತ್ರ ಬರೆಯಲಾಗಿದೆ ನಾಲ್ಕೈದು ದಿನಗಳ ಒಳಗೆ ಬೌಂಡರಿ ಗುರುತಿಸಲಾಗುವುದು' ಎಂದು ಭರವಸೆ ನೀಡಿದರು.

ಜಲಮಂಡಳಿ ಅಧ್ಯಕ್ಷರ 'ಫೋನ್ ಇನ್' ನಾಳೆ

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅವರು ನವೆಂಬರ್ 8ರಂದು(ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ–080-22945119 ಮತ್ತು 080-22229639.

ಅನುದಾನಿತ ಪಿಯು ಉಪನ್ಯಾಸಕರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಯಭಾರದ ಕೊರತೆಯುಳ್ಳ ಅನುದಾನಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಸರ್ಕಾರಿ ಪಿಯು ಕಾಲೇಜುಗಳಿಗೆ ನೇಮಿಸಬೇಕು ಎಂದು ಕರ್ನಾಟಕ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಮನವಿ ಮಾಡಿದೆ.

ಕಾರ್ಯಭಾರದ ಕೊರತೆ ಇರುವ ಅನುದಾನಿತ ಕಾಲೇಜುಗಳ ಸುಮಾರು 400 ಉಪನ್ಯಾಸಕರಿಗೆ 4 ತಿಂಗಳಿನಿಂದ ವೇತನ ತಡೆ ಹಿಡಿಯಲಾಗಿದೆ. ಶಾಲಾ ಶಿಕ್ಷಣ ಇಲಾಖೆ ಆದೇಶದಂತೆ ಅವರನ್ನು ಸರ್ಕಾರಿ ಪಿಯು ಕಾಲೇಜುಗಳಿಗೆ ನಿಯೋಜನೆಯನ್ನೂ ಮಾಡುವಂತಿಲ್ಲ. ತಕ್ಷಣ ನಿಯಮಕ್ಕೆ ತಿದ್ದುಪಡಿ ತರಬೇಕು ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಶಿವರಾಮ್ ಬಿ. ಮಾಲೀಪಾಟೀಲ ಮನವಿ ಮಾಡಿದ್ದಾರೆ.

ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವಾರಕ್ಕೆ ಮೂರು ದಿನ ನಿಯೋಜಿಸಬೇಕು ಎಂದು ಕೋರಿದ್ದಾರೆ

ಪ್ರಬಂಧ ಸ್ಪರ್ಧೆ

ಬೆಂಗಳೂರು:- ಸಂವಿಧಾನ ಓದು ಅಭಿಯಾನ–ಕರ್ನಾಟಕವು ಪದವಿ ವಿದ್ಯಾರ್ಥಿಗಳಿಗೆ ಸಂವಿಧಾನದ ಬಗ್ಗೆ ಇದೇ 16ರಂದು ಇಲ್ಲಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಹಮ್ಮಿಕೊಂಡಿದೆ.

ಪ್ರಥಮ ಬಹುಮಾನ ₹15 ಸಾವಿರ, ದ್ವಿತೀಯ ಬಹುಮಾನ ₹10 ಸಾವಿರ, ತೃತೀಯ ಬಹುಮಾನ ₹5 ಸಾವಿರ ಹಾಗೂ 30 ಸಮಾಧಾನಕರ ಬಹುಮಾನ ತಲಾ ₹1 ಸಾವಿರ ನಗದು ಒಳಗೊಂಡಿವೆ. ಪ್ರಾಂಶುಪಾಲರು, ಸರ್ಕಾರಿ ಕಲಾ ಕಾಲೇಜು, ಡಾ.ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01 ವಿಳಾಸ ಸಂಪರ್ಕಿಸಿ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: 9448324727, 7483950580

ಎಸಿಎಸ್‌ಗೆ ಪಿಸಿಸಿಎಫ್ ಪತ್ರ ● ಪೂರಕ ವರದಿ ನೀಡಿದ ಡಿಸಿಎಫ್‌ಗಳು

ಜೋಗ: ತಾರಾ ಹೋಟೆಲ್‌ಗೆ ಅನುಮತಿ

● ಎಸ್ ರವಿಪ್ರಕಾಶ್

ಬೆಂಗಳೂರು: ಶಿವಮೊಗ್ಗ ಜಿಲ್ಲೆ ಜೋಗ ಜಲಪಾತದ ಬಳಿ ಅರಣ್ಯ ಭೂಮಿಯಲ್ಲಿ ಪಂಚತಾರಾ ಹೋಟೆಲ್ ಮತ್ತು ರೋಪ್‌ವೇ ನಿರ್ಮಿಸಲು ಅರಣ್ಯ ಇಲಾಖೆ ಕೊನೆಗೂ ಅನುಮೋದನೆ ನೀಡಿದೆ.

ಈ ಕುರಿತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ ಬ್ರಿಜೇಶ್ ಕುಮಾರ್ ಅವರು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ಈ ವಿಷಯವಾಗಿ ಕೇಂದ್ರಕ್ಕೆ ಶಿಫಾರಸು ಮಾಡಬಹುದು ಎಂದೂ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಅರಣ್ಯ ಕಾಯ್ದೆಗೆ ಹೊಸ ತಿದ್ದುಪಡಿ ಆದ ಬಳಿಕ ಐದು ಹೆಕ್ಟೇರ್ ಒಳಗಿನ ಅರಣ್ಯ ಭೂಮಿ ಪರಿವರ್ತನೆ ಯೋಜನೆಗಳಿಗೆ ಅರಣ್ಯ ಪಡೆ ಮುಖ್ಯಸ್ಥರ ಶಿಫಾರಸು ಇಲ್ಲದೆಯೇ ರಾಜ್ಯ ಸರ್ಕಾರಕ್ಕೆ ನೇರವಾಗಿ ಶಿಫಾರಸು ಮಾಡುವ ಅಧಿಕಾರ ನೋಡಲ್ ಅಧಿಕಾರಿಗೆ ಲಭಿಸಿದೆ.

ಜೋಗ ಪ್ರದೇಶದಲ್ಲಿ ಹೋಟೆಲ್ ಮತ್ತು ರೆಸಾರ್ಟ್ ಪ್ರಸ್ತಾವವನ್ನು ಅರಣ್ಯ ಸಂರಕ್ಷಣೆಯ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ 2014ರಲ್ಲಿ ಮೊದಲ ಬಾರಿಗೆ ತಿರಸ್ಕರಿಸಿತ್ತು. ಆ ಬಳಿಕ ರಾಜ್ಯ ಸರ್ಕಾರ 2021ರಲ್ಲಿ ಮತ್ತೊಮ್ಮೆ ಪ್ರಯತ್ನ ಮಾಡಿತ್ತು.

ಪಂಚತಾರಾ ಹೋಟೆಲ್ ಮತ್ತು ರೋಪ್‌ವೇ ನಿರ್ಮಿಸುವುದರ ಪರವಾಗಿ ಸಾಗರ ಮತ್ತು ಶಿರಸಿ ಡಿಸಿಎಫ್‌ಗಳು ವರದಿ ನೀಡಿದ್ದಾರೆ. ಸಾಗರ ರಕ್ಷಿತ ಅರಣ್ಯ ಪ್ರದೇಶದ ತಳಕಳಲೆ ಮತ್ತು ಶಿರಸಿ ರಕ್ಷಿತ ಅರಣ್ಯ ಪ್ರದೇಶದ ಕೋಡ್ಕಣಿ ಪ್ರದೇಶದಲ್ಲಿ ಹೋಟೆಲ್ ಮತ್ತು ರೋಪ್‌ವೇ ನಿರ್ಮಾಣಕ್ಕೆ ಯಾವುದೇ ಸಮಸ್ಯೆ ಇಲ್ಲ. ಅರಣ್ಯ, ವನ್ಯಜೀವಿ ಸಂಪತ್ತಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗುವುದಿಲ್ಲ. ಹೆಚ್ಚು ಮರಗಳ ಹನನವೂ ಆಗುವುದಿಲ್ಲ ಎಂದು ಈ ವರದಿ ಹೇಳಿದೆ.

ತಳಕಳಲೆಯಲ್ಲಿ ನಿರ್ಮಾಣಕ್ಕೆ ಉದ್ದೇಶಿಸಿರುವ ಪ್ರದೇಶದಲ್ಲಿ 35 ಮರಗಳು ಮಾತ್ರ ಇವೆ. ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಯಾವುದೇ ಸಸ್ಯ ಪ್ರಭೇದಗಳಿಲ್ಲ. ಅಲ್ಲದೆ, ಈ ಸ್ಥಳವು ಯಾವುದೇ ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಧಾಮ, ಹುಲಿಸಂರಕ್ಷಿತ, ಆನೆ ಕಾರಿಡಾರ್ ಮತ್ತು ವನ್ಯಜೀವಿ ಸಂಚಾರದ ಕಾರಿಡಾರ್ ವ್ಯಾಪ್ತಿಯಲ್ಲಿ ಬರುವುದಿಲ್ಲ. 1980ರ ಅರಣ್ಯ ಸಂರಕ್ಷಣೆ ಮತ್ತು ಸಮೃದ್ಧಿ ನಿಯಮದ ಅಡಿ ಯಾವುದೇ ಉಲ್ಲಂಘನೆ ಆಗಿಲ್ಲ ಎಂಬ ಅಂಶ ಡಿಸಿಎಫ್ ವರದಿಯಲ್ಲಿದೆ. ಶಿರಸಿ ಡಿಸಿಎಫ್ ನೀಡಿರುವ ವರದಿಯೂ ಬಹುತೇಕ ಅದೇ ರೀತಿ ಇದೆ. ಕೋಡ್ಕಣಿಯಲ್ಲಿ 5 ಮರಗಳು ಮಾತ್ರ ಉದ್ದೇಶಿತ ಪ್ರದೇಶದಲ್ಲಿವೆ ಎಂದು ವರದಿ ಉಲ್ಲೇಖಿಸಿದೆ.

‘ಈ ಪ್ರದೇಶ ಶರಾವತಿ ಕಣಿವೆಯಲ್ಲಿದೆ. ಜಲ ವಿದ್ಯುತ್, ಜಲಾಶಯ, ಹೆದ್ದಾರಿ, ರೈಲು ಮತ್ತಿತರ ಯೋಜನೆಗಳಿಂದ ಶರಾವತಿ ಕಣಿವೆಯಲ್ಲಿ ಈಗಾಗಲೇ ಒತ್ತಡ ಸೃಷ್ಟಿಯಾಗಿದೆ. ಈಗ ಅಲ್ಲಿ ಪಂಚತಾರಾ ಹೋಟೆಲ್ ಅಗತ್ಯವೇನಿದೆ. ಒಂದು ವೇಳೆ ಅಗತ್ಯ ಇದೇ ಎಂದಾಗಿದ್ದರೆ ತಾಳಗುಪ್ಪದಲ್ಲಿ ನಿರ್ಮಿಸಬಹುದು. ಕೇಂದ್ರ ಸರ್ಕಾರ ಒಂದು ಬಾರಿ ಪ್ರಸ್ತಾವವನ್ನು ತಿರಸ್ಕರಿಸಿದೆ. ಹೀಗಿದ್ದರೂ ರಾಜ್ಯ ಅರಣ್ಯ ಇಲಾಖೆ ಮತ್ತೆ ಶಿಫಾರಸು ಮಾಡಿರುವುದು ಅಚ್ಚರಿ ತರಿಸಿದೆ’ ಎಂದು ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರಿಧರ ಕುಲಕರ್ಣಿ ಪ್ರತಿಕ್ರಿಯಿಸಿದ್ದಾರೆ.

ಕೇಂದ್ರಕ್ಕೆ ಪರಿಷ್ಕೃತ ಪ್ರಸ್ತಾವ ಸಲ್ಲಿಕೆ

‘ಈ ಹಿಂದೆ ಕೇಂದ್ರಕ್ಕೆ ಸಲ್ಲಿಸಿದ್ದ ಪ್ರಸ್ತಾವದಲ್ಲಿನ ಮಾಹಿತಿ ಅಪೂರ್ಣವಾಗಿತ್ತು. ಹೆಚ್ಚುವರಿ ಮಾಹಿತಿ ನೀಡಬೇಕು ಎಂದು ಪ್ರಸ್ತಾವವನ್ನು ತಿರಸ್ಕರಿಸಿತ್ತು. ಅದರಲ್ಲಿ ರೋಪ್‌ವೇಗೆ ಬಳಸುವ ಸಾಧನಗಳ ಮಾಹಿತಿಯನ್ನು ಬಹಿರಂಗಪಡಿಸಿರಲಿಲ್ಲ. ಈಗ ಎಲ್ಲ ಅಂಶಗಳನ್ನು ಒಳಗೊಂಡ ಪರಿಷ್ಕೃತ ಪ್ರಸ್ತಾವವನ್ನು ಸಿದ್ಧಪಡಿಸಲಾಗುವುದು. ಹಳೆಯ ಪ್ರಸ್ತಾವ ಹಿಂದಕ್ಕೆ ಪಡೆಯಲಾಗುವುದು’ ಎಂದು ಬ್ರಿಜೇಶ್ ಕುಮಾರ್ ಹೇಳಿದ್ದಾರೆ.

ಪಂಚತಾರಾ ಹೋಟೆಲ್ ಏಕೆ?

ಜೋಗಕ್ಕೆ ಪ್ರತಿ ವರ್ಷ ಲಕ್ಷಗಟ್ಟಲೆ ಪ್ರವಾಸಿಗರು ಬರುತ್ತಾರೆ. ಜೂನ್‌ನಿಂದ ಡಿಸೆಂಬರ್ ಅವಧಿಯಲ್ಲಿ ಪ್ರತಿ ದಿನ 40 ಸಾವಿರದಿಂದ 50 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ಇಲ್ಲಿ ಅತ್ಯುತ್ತಮ ಹೋಟೆಲ್‌ನ ಅಗತ್ಯವಿರುವುದರಿಂದ ಪಿಪಿಪಿ ಮಾದರಿಯಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸಲು ಉದ್ದೇಶಿಸಲಾಗಿದೆ. ಜಲಪಾತದ ಸಮೀಪವೇ ಶರಾವತಿ ನದಿಗೆ ಒಂದು ತಟದಿಂದ ಇನ್ನೊಂದು ತಟಕ್ಕೆ ರೋಪ್‌ವೇ ಹಾಕಲಾಗುವುದು. ಇವೆರಡರ ನಿರ್ಮಾಣದ ಅಂದಾಜು ವೆಚ್ಚ ₹100 ಕೋಟಿ.

ಸಂಚಾರ ನಿಯಮ ಉಲ್ಲಂಘನೆ: ಒಂದೇ ದಿನ 1,980 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಚಾಲಕರು ಹಾಗೂ ಬೈಕ್ ಸವಾರರ ವಿರುದ್ಧ ನಗರ ಸಂಚಾರ ವಿಭಾಗದ ಪೊಲೀಸರು ಕಾರ್ಯಾಚರಣೆ ಮುಂದುವರೆಸಿದ್ದು, ಬುಧವಾರ ಒಂದೇ ದಿನ 1,980 ಪ್ರಕರಣ ದಾಖಲಿಸಿದ್ದಾರೆ.

ಬುಧವಾರ ಬೆಳಿಗ್ಗೆ 11ರಿಂದ ಸಂಜೆ 4 ಗಂಟೆವರೆಗೆ ನಡೆದ ಕಾರ್ಯಾಚರಣೆಯಲ್ಲಿ ಒಟ್ಟು ₹9.96 ಲಕ್ಷ ದಂಡ ಸಂಗ್ರಹಿಸಲಾಗಿದೆ.

ನಿರ್ಬಂಧಿತ ರಸ್ತೆಯಲ್ಲಿ ಸಂಚರಿಸಿದ ವಾಹನ ಸವಾರರ ವಿರುದ್ಧ 471 ಪ್ರಕರಣ ದಾಖಲಿಸಿಕೊಂಡು, ₹2.39 ಲಕ್ಷ ದಂಡ ಸಂಗ್ರಹಿಸಲಾಗಿದೆ. ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ ಮಾಡಿದ್ದ 352 ಮಂದಿಯಿಂದ ₹1.77 ಲಕ್ಷ ದಂಡ ಸಂಗ್ರಹಿಸಲಾಗಿದೆ. ದ್ವಿಚಕ್ರ ವಾಹನದಲ್ಲಿ ಮೂವರು ಕುಳಿತು ಸವಾರಿ ಮಾಡಿದ್ದ 60 ಮಂದಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ₹30 ಸಾವಿರ ದಂಡ ಸಂಗ್ರಹಿಸಲಾಗಿದೆ.

ನಿರ್ಬಂಧಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡುತ್ತಿದ್ದವರ ವಿರುದ್ಧ 178 ಪ್ರಕರಣ ದಾಖಲಿಸಿಕೊಂಡು, ₹90 ಸಾವಿರ ದಂಡ ಸಂಗ್ರಹಿಸಲಾಗಿದೆ.

ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಹಾಗೂ ಹೆಲ್ಮೆಟ್ ಧರಿಸದೇ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಒಟ್ಟು 919 ಪ್ರಕರಣ ದಾಖಲಿಸಿಕೊಂಡು, ಒಟ್ಟು ₹4.50 ಲಕ್ಷ ದಂಡ ಸಂಗ್ರಹ ಮಾಡಲಾಗಿದೆ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

‘ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಕಾರ್ಯಾಚರಣೆ ಮುಂದುವರೆಸಲಾಗುವುದು’ ಎಂದೂ ಅವರು ಎಚ್ಚರಿಸಿದ್ದಾರೆ.



ಶುಭಾಶಯ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಜನ್ಮ ದಿನದ ಪ್ರಯುಕ್ತ ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ.ರುದ್ರೇಶ್, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಮತ್ತಿಕೆರೆ ಎಸ್‌ಎಲ್‌ವಿ ಫೈನಾನ್ಸ್ ಅಂಡ್ ಕನ್‌ಸ್ಟ್ರಕ್ಷನ್ ವ್ಯವಸ್ಥಾಪಕ ನಿರ್ದೇಶಕ ಸುನಿಲ್‌ಗೌಡ ಮತ್ತು ದೀಪಕ್ ಅವರು ವಿಜಯೇಂದ್ರ ದಂಪತಿಗೆ ಶುಭಕೋರಿದರು.

‘ಸಾಹಿತ್ಯ ಹಬ್ಬ’ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕವು ಇದೇ 8 ಮತ್ತು 9 ರಂದು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ‘ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ’ ಹಮ್ಮಿಕೊಂಡಿದೆ.

‘ಪ್ರಜಾವಾಣಿ’ ಸಹಯೋಗದಲ್ಲಿ ನಡೆಯುವ ಈ ಹಬ್ಬವನ್ನು ಸಾಹಿತಿ ಚಂದ್ರಶೇಖರ ಕಂಬಾರ ಅವರು ಉದ್ಘಾಟಿಸುತ್ತಾರೆ. ಎರಡು ದಿನಗಳ ಸಾಹಿತ್ಯ ಹಬ್ಬದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ವಿಚಾರಗೋಷ್ಠಿಗಳು ನಡೆಯುತ್ತವೆ.

‘ಜನಪದ ಸಾಹಿತ್ಯ ಚರಿತ್ರೆ ಮತ್ತು ತತ್ವಗಳು’ ವಿಷಯದ ಬಗ್ಗೆ ಲೇಖಕಿ ಕೆ.ಆರ್.ಸಂಧ್ಯಾರೆಡ್ಡಿ, ‘ವಚನಗಳ ಹೊಸ ಓದಿನ ಅವಶ್ಯಕತೆ’ ಬಗ್ಗೆ ವಿಮರ್ಶಕರಾದ ಓ.ಎಲ್. ನಾಗಭೂಷಣಸ್ವಾಮಿ, ‘ಜೆಯಮೋಹನ್‌ರವರ ಕಥಾ ಸಾಹಿತ್ಯ’ದ ಬಗ್ಗೆ ಟಿ.ಪಿ.ಅಶೋಕ, ‘ದಲಿತ ಬಂಡಾಯ ಸಾಹಿತ್ಯ ಅವಲೋಕನ’ ವಿಷಯದ ಬಗ್ಗೆ ಬಂಜಗೆರೆ ಜಯಪ್ರಕಾಶ್ ಹಾಗೂ ‘ಜೈನ ಸಾಹಿತ್ಯ ಚರಿತ್ರೆ ಮತ್ತು ತತ್ವಗಳು’ ವಿಷಯದ ಬಗ್ಗೆ ಲಲಿತಾಂಬ ಮಾತನಾಡುತ್ತಾರೆ ಎಂದು ‘ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ’ದ ಅಧ್ಯಕ್ಷ ಎಚ್.ಎನ್. ಸುಬ್ರಮಣ್ಯ ತಿಳಿಸಿದ್ದಾರೆ.

ಈ ನೆಲದ ಮೌಖಿಕ ಪರಂಪರೆಯ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಸಹ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಮಂಟೇಸ್ವಾಮಿ ಜನಪದ ಹಾಡುಗಳನ್ನು ಮೈಸೂರಿನ ತಂಬೂರಿ ಶಿವಣ್ಣ ಹಾಡಲಿದ್ದಾರೆ. ನೀನಾಸಂ ಕಲಾವಿದರಿಂದ ‘ಆನೆ ಡಾಕ್ಟರ್’ ಕಥಾ ಪ್ರಸಂಗ ಪ್ರಸ್ತುತಿ, ಸುಧಾಕರ್ ಜೈನ್ ತಂಡದಿಂದ ತಾಳ ಮದ್ದಳೆ, ಎನ್‌ಇಎಸ್ ಸಂಸ್ಥೆಯ ವಿದ್ಯಾರ್ಥಿಗಳಿಂದ ಕಂಸಾಳೆ ಮತ್ತು ಜನಪದ ನೃತ್ಯಗಳ ಪ್ರದರ್ಶನ ಇರಲಿದೆ ಎಂದಿದ್ದಾರೆ.

‘ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಜೊತೆಗೆ ಜಾನಪದ ಕಲೆಯ ಬಗ್ಗೆ ಹೊಸ ತಲೆಮಾರಿನ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ನಮ್ಮ ಆಶಯ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಪ್ರವೇಶ ಉಚಿತ ಇರಲಿದ್ದು, ಭಾಗವಹಿಸುವವರು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಂದಣಿಗೆ ಸಂಪರ್ಕ ಸಂಖ್ಯೆ: 9900999078, 8197414821

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ₹86 ಲಕ್ಷ ವಂಚಿಸಿದ ಸೈಬರ್ ಕಳ್ಳರು

ಉದ್ಯಮಿಯಂತೆ ಧ್ವನಿ: ವಂಚಕರ ಕರಾಮತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಟ್ರೇಡಿಂಗ್ ಹೆಸರಿನಲ್ಲಿ ಉದ್ಯಮಿಗಳ ಹೆಸರು ಹಾಗೂ ಅವರದ್ದೇ ಶೈಲಿಯ ಧ್ವನಿ ಬಳಸಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸೈಬರ್ ವಂಚಕರು ಮಹಿಳೆ ಮತ್ತು ನಿವೃತ್ತ ನೌಕರರೊಬ್ಬರಿಗೆ ₹86 ಲಕ್ಷ ವಂಚಿಸಿದ್ದಾರೆ.

ಈ ಸಂಬಂಧ ಸೈಬರ್ ಅಪರಾಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಇನ್ಫೋಸಿಸ್ ಸಂಸ್ಥಾಪಕ ಎನ್. ಆರ್. ನಾರಾಯಣ ಮೂರ್ತಿ ಹಾಗೂ ರಿಲಯನ್ಸ್ ಕಂಪನಿಯ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ‘ಎಫ್‌ಎಕ್ಸ್ ರೋಡ್.ಕಾಂ’ ಟ್ರೇಡಿಂಗ್ ಬಗ್ಗೆ ಮಾಹಿತಿ ನೀಡಿದಂತೆ ಫೇಸ್‌ಬುಕ್‌ನಲ್ಲಿ ಸೈಬರ್ ಕಳ್ಳರು ಪೋಸ್ಟ್ ಪ್ರಕಟಿಸಿದ್ದರು. ಅದನ್ನು ಗಮನಿಸಿದ್ದ ನಿವೃತ್ತ ನೌಕರರೊಬ್ಬರು ಹಣ ಕಳೆದುಕೊಂಡಿದ್ದಾರೆ.

‘ವ್ಯವಸ್ಥಾಪಕರೊಬ್ಬರ ಸೋಗಿನಲ್ಲಿ ಸೈಬರ್ ವಂಚಕನೊಬ್ಬ ಮೇ 30ರಂದು ಕರೆ ಮಾಡಿ ಲಿಂಕ್ ಕಳುಹಿಸಿದ್ದ. ಆ ಲಿಂಕ್ ಮೂಲಕ ನಿವೃತ್ತ ನೌಕರರೊಬ್ಬರು ಹೂಡಿಕೆ ಖಾತೆ ತೆರೆದಿದ್ದರು. ಲಾಭದ ಆಸೆಯಿಂದ ಅವರು ಮೂರು ಬ್ಯಾಂಕ್ ಖಾತೆಗಳಿಂದ ಮೇ 30ರಿಂದ ಅಕ್ಟೋಬರ್ 3ರ ಮಧ್ಯೆ ಒಟ್ಟು ₹19 ಲಕ್ಷ ಹೂಡಿಕೆ ಮಾಡಿದ್ದರು. ಹೂಡಿಕೆ ಮಾಡಿದ್ದ ಹಣಕ್ಕೆ ಯಾವುದೇ ಕಮಿಷನ್ ನೀಡಿಲ್ಲ. ಅಲ್ಲದೇ ಅಸಲು ಸಹ ನೀಡದೇ ಮೋಸ ಮಾಡಲಾಗಿದೆ’ ಎಂದು ದೂರು ನೀಡಲಾಗಿದೆ.

₹67 ಲಕ್ಷ ವಂಚನೆ: ಮಹಿಳೆಯೊಬ್ಬರಿಗೆ ಸೆಪ್ಟೆಂಬರ್ 23ರಂದು ಫೇಸ್‌ಬುಕ್‌ನಲ್ಲಿ ‘ಎಫ್‌ಎಕ್ಸ್ ರೋಡ್ ಪ್ಲಾಟ್‌ಫಾರಂ’ ಟ್ರೇಡಿಂಗ್ ಬಗ್ಗೆ ಎನ್.ಆರ್. ನಾರಾಯಣ ಮೂರ್ತಿ ಅವರು ಮಾತನಾಡಿದಂತೆಯೇ ಮಾಹಿತಿ ನೀಡಲಾಗಿತ್ತು. ನಂತರ, ಅಪರಿಚಿತ ವ್ಯಕ್ತಿಯೊಬ್ಬ ದೂರುದಾರರಾದ ಕೆ.ಜಿ.ವೀಣಾ ಅವರಿಗೆ ಇ–ಮೇಲ್ ಮೂಲಕ ಮಾಹಿತಿ ನೀಡಿ, ಪ್ಲಾಟ್‌ಫಾರಂನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದೆಂದು ಆಮಿಷವೊಡ್ಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ಸೈಬರ್ ವಂಚಕರ ಮಾತು ನಂಬಿದ್ದ ವೀಣಾ ಅವರು ಕೆನರಾ ಬ್ಯಾಂಕ್ ಖಾತೆಯಿಂದ ₹1.39 ಲಕ್ಷ ಹೂಡಿಕೆ ಮಾಡಿದ್ದರು. ಆ ಹಣಕ್ಕೆ ಆರಂಭದಲ್ಲಿ ₹8,363 ಲಾಭಾಂಶವನ್ನು ವಂಚಕರು ನೀಡಿದ್ದರು. ಇದನ್ನೇ ನಂಬಿದ್ದ ಮಹಿಳೆ ಹಂತಹಂತವಾಗಿ ₹67 ಲಕ್ಷ ಹೂಡಿಕೆ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹೂಡಿಕೆ ಮಾಡಿದ ಹಣಕ್ಕೆ ₹55,997 ಮಾತ್ರ ವಾಪಸ್ ನೀಡಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಬಿಎನ್‌ಎಸ್ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ತಿಳಿಸಿದರು.

ಬ್ಯಾಂಕ್ ಹೆಸರಲ್ಲಿ ಲಿಂಕ್: ₹18 ಲಕ್ಷ ವಂಚನೆ

ತುಮಕೂರು: ‘ಆಧಾರ್ ಅಪ್‌ಡೇಟ್’ ಎಂದು ಬ್ಯಾಂಕ್ ಹೆಸರಿನಲ್ಲಿ ಲಿಂಕ್ ಕಳುಹಿಸಿ ನಿವೃತ್ತ ನೌಕರರೊಬ್ಬರಿಗೆ ₹18.50 ಲಕ್ಷ ವಂಚಿಸಲಾಗಿದೆ.

ನಗರ ಹೊರವಲಯದ ಸಿದ್ಧಾರ್ಥ ನಗರದ ಕಾಂತರಾಜು ಸೈಬರ್ ಕಳ್ಳರ ಬಲೆಗೆ ಸಿಲುಕಿ ಹಣ ಕಳೆದುಕೊಂಡವರು. ನ.5ರಂದು ಆರೋಪಿಗಳು ‘ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ’ ಎಂಬ ಹೆಸರಿನ ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ. ಸದರಿ ‘ಗ್ರೂಪ್‌ನಲ್ಲಿ ಯೂನಿಯನ್ ಬ್ಯಾಂಕ್ ಆಧಾರ್ ಅಪ್‌ಡೇಟ್ ಎಪಿಕೆ’ ಹೆಸರಿನಲ್ಲಿ ಫೈಲ್ ಕಳುಹಿಸಿದ್ದು, ಕಾಂತರಾಜು ಆ ಫೈಲ್ ಡೌನ್‌ಲೋಡ್ ಮಾಡಿದ್ದಾರೆ.

ಮಂಗಳವಾರ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಅಪರಿಚಿತರೊಬ್ಬರು ಕರೆ ಮಾಡಿ ‘ನಿಮ್ಮ ಬ್ಯಾಂಕ್ ಖಾತೆಗೆ ಆಧಾರ್ ಅಪ್‌ಡೇಟ್ ಆಗಿದೆ. ಚೆಕ್ ಮಾಡಿಕೊಳ್ಳಿ’ ಎಂದು ತಿಳಿಸಿದ್ದಾರೆ. ಇದಾದ ನಂತರ ಅವರ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ಒಟ್ಟು ₹18,50,010 ಹಣ ವರ್ಗಾವಣೆಯಾಗಿದೆ. ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೈಂಗಿಕ ದೌರ್ಜನ್ಯ: ಅಳಲು ತೋಡಿಕೊಂಡ ಯುವತಿ

ಬೆಂಗಳೂರು: ಬಿಟಿಎಂ ಲೇಔಟ್‌ನಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ಉತ್ತರ ಭಾರತ ಮೂಲದ ಯುವತಿಯ ಜತೆಗೆ ಸೈಕಲ್‌ನಲ್ಲಿ ಹೋಗುತ್ತಿದ್ದ ಯುವಕನೊಬ್ಬ ಅಸಭ್ಯವಾಗಿ ವರ್ತಿಸಿದ್ದಾನೆ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಯುವತಿ, ಬಿಟಿಎಂ ಲೇಔಟ್‌ನಲ್ಲಿ ವಾಸವಾಗಿದ್ದಾರೆ.

ಲೇಔಟ್‌ನ ಮುಖ್ಯರಸ್ತೆಯಲ್ಲಿ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಸೆಲ್ಫಿ ವಿಡಿಯೊ ಮಾಡಿಕೊಂಡು ಯುವತಿ ನಡೆದು ತೆರಳುತ್ತಿದ್ದರು. ಅದೇ ವೇಳೆ ಸೈಕಲ್‌ನಲ್ಲಿ ಬಂದ ಯುವಕ, ಆಕೆಯ ಎದೆಯ ಭಾಗ ಮುಟ್ಟಿ ಲೈಂಗಿಕ ಕಿರುಕುಳ ನೀಡಿ ಪರಾರಿಯಾಗಿದ್ದಾನೆ ಎನ್ನಲಾಗಿದೆ. ‘ಸೈಕಲ್‌ನಲ್ಲಿ ಹೋಗುತ್ತಿದ್ದ ಯುವಕನೊಬ್ಬ ನನ್ನ ಜತೆ ಅಸಭ್ಯವಾಗಿ ವರ್ತಿಸಿದ್ದಾನೆ. ನಗರದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲವೇ’ ಎಂದು ಪ್ರಶ್ನಿಸಿ ಯುವತಿ ವಿಡಿಯೊ ಮಾಡಿ ಅದನ್ನು ಇನ್‌ಸ್ಟಾಗ್ರಾಂನಲ್ಲಿ ಹಾಕಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ನಗರ ಪೊಲೀಸರು, ಸಮೀಪದ ಪೊಲೀಸ್ ಠಾಣೆಗೆ ದೂರು ನೀಡುವಂತೆ ಸಲಹೆ ನೀಡಿದ್ದಾರೆ. ದೂರು ನೀಡಿದರೆ ತಕ್ಷಣವೇ ಕ್ರಮ ಕೈಗೊಳ್ಳುವುದಾಗಿಯೂ ಪೊಲೀಸರು ಭರವಸೆ ನೀಡಿದ್ದಾರೆ.

ಅಪರಾಧ ಸುದ್ದಿ

ಪತ್ನಿ ಕೊಲೆ ಮಾಡಿ ಆತ್ಮಹತ್ಯೆಗೆ ಯತ್ನಿಸಿದ ಪತಿ

ಬೆಂಗಳೂರು: ಕೌಟುಂಬಿಕ ಕಲಹದ ಕಾರಣಕ್ಕೆ ಪತ್ನಿಯನ್ನು ಕೊಲೆ ಮಾಡಿ ಪತಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಜೀವನ್ ಬಿಮಾ ನಗರದಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ.


ಚೆಲ್ಲಘಟ್ಟದ ನಿವಾಸಿ ಸಂಗೀತಾ (30) ಕೊಲೆಯಾದ ಗೃಹಿಣಿ. ಕೃತ್ಯದ ಬಳಿಕ ಪತಿ ನಾಗರಾಜ್ ಆತ್ಮಹತ್ಯೆಗೆ ಯತ್ನಿಸಿದ್ದ.

‘ಸಂಗೀತಾ ಅವರು ತರಕಾರಿ ವ್ಯಾಪಾರ ಮಾಡುತ್ತಿದ್ದರು. ಆರು ವರ್ಷಗಳ ಹಿಂದೆ ನಾಗರಾಜ್ ಅವರನ್ನು ಮದುವೆ ಆಗಿದ್ದರು. ದಂಪತಿಗೆ ನಾಲ್ಕು ವರ್ಷದ ಮಗುವಿದೆ. ಮಂಗಳವಾರ ರಾತ್ರಿ ಕುಳ್ಳಪ್ಪ ಗಾರ್ಡನ್‌ನಲ್ಲಿರುವ ಸಂಬಂಧಿ ಮನೆಗೆ ದಂಪತಿ ಬಂದಿದ್ದರು. ಮನೆಯಿಂದ ಹೊರಗೆ ಹೋಗಿದ್ದ ನಾಗರಾಜ್, ಮದ್ಯ ಸೇವಿಸಿ ವಾಪಸ್ ಬಂದಿದ್ದ. ಆಗ ದಂಪತಿ ಮಧ್ಯೆ ಗಲಾಟೆ ನಡೆದಿತ್ತು. ಗಲಾಟೆ ವಿಕೋಪಕ್ಕೆ ಹೋಗಿ ಪತ್ನಿಯನ್ನು ತಳ್ಳಿ ಕತ್ತು ಕೊಯ್ದು ಪತಿ ಕೊಲೆ ಮಾಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ನಂತರ ಪತಿಯೂ ಆತ್ಮಹತ್ಯೆಗೆ ಯತ್ನಿಸಿದ್ದ. ಆರೋಪಿಯನ್ನು ಸಂಬಂಧಿಕರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

ನಾಡಿನ 50 ಸಾಧಕಿಯರ ಬಗ್ಗೆ ಪುಸ್ತಕ

ಪ್ರಜಾವಾಣಿ ವಾರ್ತೆ



ಮುಕುಂದ ರಾಜ್

ಬೆಂಗಳೂರು: ‘ಕರ್ನಾಟಕ ಸುವರ್ಣ ಸಂಭ್ರಮ–50ರ ಭಾಗವಾಗಿ ರಾಜ್ಯದ 50 ಮಹಿಳಾ ಸಾಧಕರ ಬಗ್ಗೆ ಪುಸ್ತಕಗಳನ್ನು ಹೊರತರಲಾಗುತ್ತಿದೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪುಸ್ತಕಗಳನ್ನು ಹೊರತರಲು ಸರ್ಕಾರವು ₹30 ಲಕ್ಷ ಅನುದಾನ ನೀಡಿದೆ. 50 ಲೇಖಕರಿಂದ ಈ ಪುಸ್ತಕಗಳನ್ನು ಬರೆಸಲಾಗುತ್ತಿದೆ. ‘ಕನ್ನಡ ಭಾರತಿ’ ಯೋಜನೆಯಡಿ 100 ಪುಸ್ತಕಗಳು ಹೊರಬರಲಿವೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿನ ವಿವಿಧ ಕ್ಷೇತ್ರಗಳ 100 ಸಾಧಕರನ್ನು ಗುರುತಿಸಿ, ಅವರ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಲಾಗುತ್ತದೆ’ ಎಂದರು.

‘ಕೃಷಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಅಷ್ಟಾಗಿ ಪುಸ್ತಕಗಳು ಲಭ್ಯವಿಲ್ಲ. ಆದ್ದರಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಸಹಯೋಗದಲ್ಲಿ ಕೃಷಿಗೆ ಸಂಬಂಧಿಸಿದಂತೆಯೂ ಪುಸ್ತಕಗಳನ್ನು ಹೊರತರಲಾಗುವುದು. ಜಿಕೆವಿಕೆಯಲ್ಲಿ ರೈತರು ಹಾಗೂ ಲೇಖಕರ ಕಾರ್ಯಾಗಾರ ನಡೆಸಿ, ರೈತರ ಅನುಭವಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತದೆ’ ಎಂದು ತಿಳಿಸಿದರು.

‘ವಾರಕ್ಕೆ ₹18 ಕೋಟಿ ತಿಮ್ಮಾಪುರ ಹಫ್ತಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆಯಲ್ಲಿ ₹900 ಕೋಟಿ ಭ್ರಷ್ಟಾಚಾರ ನಡೆದಿದೆ ಎನ್ನಲಾದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಸಚಿವ ಆರ್. ಬಿ. ತಿಮ್ಮಾಪುರ ಅವರ ರಾಜೀನಾಮೆ ಪಡೆಯಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಹಿಂದೆ ಬೆಂಗಳೂರಿನಲ್ಲಿ ರೌಡಿಗಳು ಹಫ್ತಾ ವಸೂಲಿ ಮಾಡುತ್ತಿದ್ದರು. ಈಗ ಅಬಕಾರಿ ಸಚಿವ ತಿಮ್ಮಾಪುರ ಅವರು ವಾರಕ್ಕೆ ₹18 ಕೋಟಿ ವಸೂಲಿ ಮಾಡುತ್ತಿದ್ದಾರೆ. ಪ್ರತಿ ಹುದ್ದೆಯ ಅಧಿಕಾರಿಗಳಿಗೆ ಎಷ್ಟು ಲಂಚ ನೀಡಲಾಗುತ್ತಿದೆ ಎಂದು ಮದ್ಯ ಮಾರಾಟಗಾರರ ಸಂಘವೇ ಆರೋಪಿಸಿದೆ. ಅಂದರೆ ವರ್ಷಕ್ಕೆ ಸುಮಾರು ₹900 ಕೋಟಿಗೂ ಹೆಚ್ಚು ಲಂಚ ಪಡೆಯುತ್ತಿದ್ದಾರೆ. ಮುಖ್ಯಮಂತ್ರಿ ಕಚೇರಿಯ ಅಧಿಕಾರಿಗಳು ಭಾಗಿಯಾಗಿದ್ದಾರೆ. ಹಾಗಾಗಿ, ಜಾರಿ ನಿರ್ದೇಶನಾಲಯ ಕೂಡ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಜೆ.ಸಿ. ರಸ್ತೆಯಲ್ಲಿ ವಾಹನ ಸಂಚಾರ ಭಾಗಶಃ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಜೆ.ಸಿ. ರಸ್ತೆಯಲ್ಲಿ ನಾಲಾ ರಸ್ತೆ ಜಂಕ್ಷನ್‌ನಿಂದ ಪುರಭವನ ಜಂಕ್ಷನ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ನಡೆಸಲು ಬಿಬಿಎಂಪಿ ಉದ್ದೇಶಿಸಿದ್ದು, ಈ ಮಾರ್ಗದಲ್ಲಿ ವಾಹನ ಸಂಚಾರವನ್ನು ಭಾಗಶಃ ನಿಷೇಧಿಸಲಾಗಿದೆ.

ಗುರುವಾರದಿಂದಲೇ ಕಾಮಗಾರಿ ಆರಂಭವಾಗಲಿದೆ. ಕಾಮಗಾರಿ ಮುಕ್ತಾಯ ಆಗುವವರೆಗೆ ಈ ಮಾರ್ಗದಲ್ಲಿ ವಾಹನ ಸಂಚಾರ ನಿಧಾನಗತಿಯಲ್ಲಿ ಇರಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ. ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.


ಪರ್ಯಾಯ ಮಾರ್ಗ: ಹೊಸೂರು ರಸ್ತೆಯಿಂದ ಜೆ.ಸಿ. ರಸ್ತೆ ಮೂಲಕ ಮೆಜೆಸ್ಟಿಕ್ ಹಾಗೂ ಬೆಂಗಳೂರು ಉತ್ತರ ದಿಕ್ಕಿನ ಕಡೆಗೆ ಸಂಚರಿಸುತ್ತಿದ್ದ ವಾಹನಗಳು ಲಾಲ್‌ಬಾಗ್ ಮುಖ್ಯದ್ವಾರದ ಬಳಿ ಬಲಕ್ಕೆ ತಿರುವು ಪಡೆದು ಕೆ.ಎಚ್. ರಸ್ತೆ, ಶಾಂತಿನಗರ, ರಿಚ್ಮಂಡ್ ಆರ್.ಆರ್. ರಸ್ತೆಯ ಮೂಲಕ ಹಡ್ಸನ್ ವೃತ್ತ ತಲುಪಬಹುದಾಗಿದೆ.

ಸೌತ್ ಎಂಡ್ ವೃತ್ತದಿಂದ ಜೆ.ಸಿ. ರಸ್ತೆಯ ಮೂಲಕ ಮೆಜೆಸ್ಟಿಕ್ ಹಾಗೂ ಬೆಂಗಳೂರು ಉತ್ತರ ದಿಕ್ಕಿನ ಕಡೆಗೆ ಸಂಚರಿಸುತ್ತಿದ್ದ ವಾಹನಗಳು, ಮಿನರ್ವ ವೃತ್ತದ ಬಳಿ ಎಡಕ್ಕೆ ತಿರುವು ಪಡೆದು ಲಾಲ್‌ಬಾಗ್ ಫೋರ್ಟ್ ರಸ್ತೆ ಹಾಗೂ ಕೆ.ಆರ್. ರಸ್ತೆಯ ಮೂಲಕ ಕೆ.ಆರ್. ಮಾರುಕಟ್ಟೆ ತಲುಪಿ ಎಸ್.ಜೆ.ಪಿ. ರಸ್ತೆ, ಪುರಭವನ ಸಂಪರ್ಕ ಪಡೆಯಬಹುದು ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

ಜೆ.ಸಿ. ರಸ್ತೆಯ ಎರಡೂ ಬದಿಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ನಿಧನ ವಾರ್ತೆ

ಸೈಯದ್ ಶಹಾ ಖುಸ್ರೊ ಹುಸೇನಿ



ಕಲಬುರಗಿ: ಇಲ್ಲಿನ ಐತಿಹಾಸಿಕ ಧಾರ್ಮಿಕ ಕೇಂದ್ರವಾದ ಖಾಜಾ ಬಂದಾನವಾಜ್ ದರ್ಗಾದ (ಕೆಬಿಎನ್) ಸೂಫಿ ಸಂತ ಸೈಯದ್ ಶಹಾ ಖುಸ್ರೊ ಹುಸೇನಿ (79) ಅವರು ಬುಧವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ.

ಖಾಜಾ ಬಂದಾನವಾಜ್ ವಿಶ್ವವಿದ್ಯಾಲಯದ ಸಂಸ್ಥಾಪಕರಾಗಿದ್ದ ಅವರು, ಮುಂದೆ ಅದರ ಕುಲಪತಿಯೂ ಆದರು. ಖಾಜಾ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಸೇರಿ ಇತರ ಪ್ರಶಸ್ತಿಗಳಿಗೂ ಭಾಜನರಾಗಿದ್ದರು. ಹುಸೇನಿ ಅವರು ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ವೈದ್ಯಕೀಯ, ಎಂಜಿನಿಯರಿಂಗ್, ಬಿ.ಇಡಿ ಕಾಲೇಜುಗಳನ್ನು ಪ್ರಾರಂಭಿಸಿದ್ದಾರೆ. ಮಹಿಳೆಯರಿಗಾಗಿ ಪ್ರೌಢಶಾಲೆ, ಪಿಯುಸಿ, ಪದವಿ ಹಾಗೂ ಅರೇಬಿಕ್ ಭಾಷೆಯ ಕಾಲೇಜುಗಳನ್ನು ತೆರೆದಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತರ ಸೂಚನೆಯನ್ನೂ ಪಾಲಿಸದ ಎಂಜಿನಿಯರ್‌ಗಳು

ಅಕ್ರಮ ಕಟ್ಟಡ ಗುರುತಿಸಲು ಹಿಂದೇಟು!

● ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನಿರ್ಮಿಸಲಾಗುತ್ತಿರುವ ಕಟ್ಟಡಗಳ ಸಮೀಕ್ಷೆ ಮಾಡಿ, ವರದಿ ನೀಡಲು ವಲಯ ಮಟ್ಟದ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳು ಹಿಂದೇಟು ಹಾಕುತ್ತಿದ್ದಾರೆ.

ನಕ್ಷೆ ಮಂಜೂರಾತಿ ಇಲ್ಲದೆ ಅನಧಿಕೃತವಾಗಿ ಹಾಗೂ ನಕ್ಷೆ ಉಲ್ಲಂಘಿಸಿ ಅಕ್ರಮವಾಗಿ ನಿರ್ಮಿಸಲಾಗುತ್ತಿರುವ ಕಟ್ಟಡಗಳ ಸಮೀಕ್ಷೆ ನಡೆಸಿ ಒಂದು ವಾರದಲ್ಲಿ ವರದಿ ಸಲ್ಲಿಸುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಎಲ್ಲ ವಲಯ ಆಯುಕ್ತರಿಗೆ ಅಕ್ಟೋಬರ್ 25ರಂದು ಆದೇಶಿಸಿದ್ದರು.

‘ಆ್ಯಪ್ ಬಳಸಿಕೊಂಡು ಕಟ್ಟಡಗಳ ಅಕ್ರಮ ನಿರ್ಮಾಣಕ್ಕೆ ಸಂಬಂಧಿಸಿದ ಮಾಹಿತಿ ದಾಖಲಿಸಲು ಸೂಚಿಸಲಾಗಿತ್ತು. ಖಾಸಗಿ ಏಜೆನ್ಸಿಯಿಂದ 70 ಸಿಬ್ಬಂದಿಯನ್ನು ನೇಮಿಸಿಕೊಂಡು ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಮಹದೇವಪುರ ಮತ್ತು ಪಶ್ಚಿಮ ವಲಯದಿಂದ ವರದಿ ಬಂದಿದ್ದು, ಉಳಿದ ವಲಯಗಳಿಂದ ಅಕ್ಟೋಬರ್ 4ರ ಸಂಜೆ ವೇಳೆಗೆ ಪಟ್ಟಿ ಲಭ್ಯವಾಗಲಿದೆ’ ಎಂದು ತುಷಾರ್ ಗಿರಿನಾಥ್ ಅವರೇ ಸುದ್ದಿಗಾರರಿಗೆ ತಿಳಿಸಿದ್ದರು.

‘ಮುಖ್ಯ ಆಯುಕ್ತರು ನೀಡಿರುವ ಮಾಹಿತಿಗಿಂತ ವಾಸ್ತವಾಂಶ ಭಿನ್ನವಾಗಿದೆ. ವಲಯಗಳಲ್ಲಿ ಅಕ್ರಮ ಕಟ್ಟಡಗಳ ಪಟ್ಟಿ ಇನ್ನೂ ಸಿದ್ಧವಾಗಿಲ್ಲ. ಸ್ಥಳೀಯ ಎಂಜಿನಿಯರ್‌ಗಳು ಅನಧಿಕೃತ ಕಟ್ಟಡಗಳನ್ನು ಗುರುತಿಸಲು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ. ಹೀಗಾಗಿ, ಈ ಪ್ರಕ್ರಿಯೆ ಇನ್ನೂ ಪ್ರಾರಂಭಿಕ ಹಂತದಲ್ಲಿಯೇ ಇದೆ. ಹಲವು ವರ್ಷಗಳ ಹಿಂದೆ ಕೆಲವು ಕಟ್ಟಡಗಳಿಗೆ ನೀಡಲಾಗಿದ್ದ ಅಂತಿಮ ನೋಟಿಸ್ ಅನ್ನು ಇದೀಗ ಕಾರ್ಯಗತಗೊಳಿಸಲಾಗುತ್ತಿದೆ ಅಷ್ಟೇ’ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

‘ಎಂತಹದ್ದೇ ಆ್ಯಪ್ ತಯಾರಿಸಿದ್ದರೂ ಅದರಲ್ಲಿ ಸ್ಥಳೀಯ ಎಂಜಿನಿಯರ್‌ಗಳು ಮಾಹಿತಿ ದಾಖಲಿಸಬೇಕು. ಆ ಪ್ರಕ್ರಿಯೆಯೇ ವಿಳಂಬಗತಿಯಲ್ಲಿದೆ. ಅಲ್ಲದೆ, ರಾಜಕೀಯ ಸೇರಿದಂತೆ ಹಲವು ರೀತಿಯ ಒತ್ತಡವೂ ಎಂಜಿನಿಯರ್‌ಗಳ ಮೇಲಿದೆ’ ಎನ್ನುತ್ತವೆ ಈ ಪ್ರಕ್ರಿಯೆಯ ಮಾಹಿತಿಯುಳ್ಳ ಮೂಲಗಳು.

‘ಅಕ್ರಮ ಅಥವಾ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಎಲ್ಲ ಕಟ್ಟಡಗಳ ಮಾಹಿತಿ ಕಿರಿಯ, ಸಹಾಯಕ ಹಾಗೂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು, ನಗರ ಯೋಜನೆಯ ಜಂಟಿ ನಿರ್ದೇಶಕರಲ್ಲಿ ಇರುತ್ತದೆ. ಅವರಿಗೆ ಬೇಕಾದಾಗ ನೋಟಿಸ್ ನೀಡಿ, ಸುಮ್ಮನಾಗುತ್ತಾರೆ. ಹಲವು ತಿಂಗಳಾದರೂ ಕ್ರಮ ಕೈಗೊಳ್ಳುವುದಿಲ್ಲ. ಹೀಗಾಗಿ, ಅಕ್ರಮ ಕಟ್ಟಡಗಳ ನಿರ್ಮಾಣ ಪೂರ್ಣಗೊಳ್ಳುತ್ತದೆ. ಯಾವುದಾದರೂ ಕಟ್ಟಡ ದುರಂತ ಸಂಭವಿಸಿದಾಗ ಮಾತ್ರ ‘ಅಕ್ರಮ ಕಟ್ಟಡಗಳ ತೆರವು’ ಎಂಬ ಮಾತು ಹೆಚ್ಚಾಗುತ್ತದೆ’ ಎಂದು ನಗರ ಯೋಜನೆ ವಿಭಾಗದ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಗಳು ತಿಳಿಸಿದರು.

ಸಿಎಂ, ಡಿಸಿಎಂ ಮಾತಿಗೂ ಮನ್ನಣೆ ಇಲ್ಲ

ಬಾಬುಸಾ ಪಾಳ್ಯದಲ್ಲಿ ಕಟ್ಟಡ ಕುಸಿದ ಸ್ಥಳಕ್ಕೆ ಅಕ್ಟೋಬರ್ 24ರಂದು ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ಯಾವುದೇ ಅಕ್ರಮ ಅಥವಾ ಅನಧಿಕೃತ ಕಟ್ಟಡ ನಿರ್ಮಾಣ ಮುಂದುವರಿದರೆ ವಲಯ ಆಯುಕ್ತ ಸೇರಿದಂತೆ ಸಂಬಂಧಪಟ್ಟ ಎಂಜಿನಿಯರ್‌ಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ಯಾವ ಪ್ರಭಾವಕ್ಕೂ ಒಳಗಾಗಬಾರದು’ ಎಂದು ಹೇಳಿದ್ದರು.

ಅಕ್ರಮ ಕಟ್ಟಡಗಳ ನಿರ್ಮಾಣದ ಬಗ್ಗೆ ಸಮೀಕ್ಷೆ ನಡೆಸಿ ಒಂದು ವಾರದಲ್ಲಿ ವರದಿ ನೀಡುವಂತೆ ಶಿವಕುಮಾರ್ ಅವರು ಸೂಚನೆಯನ್ನೂ ನೀಡಿದ್ದರು. ಅದೇ ರೀತಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರೂ ಆದೇಶಿಸಿದ್ದರು. ಆದರೆ, ಯಾವ ಸೂಚನೆಗೂ ಸ್ಥಳೀಯ ಮಟ್ಟದಲ್ಲಿ ಮನ್ನಣೆ ನೀಡಲಾಗಿಲ್ಲ. ಅಕ್ರಮ ಕಟ್ಟಡಗಳ ಸಮೀಕ್ಷೆ ಹಾಗೂ ವರದಿ ಇನ್ನೂ ಆರಂಭಿಕ ಹಂತದಲ್ಲೇ ಇದೆ.

‘ಮಾಹಿತಿ ಬಂದಿಲ್ಲ’

‘ಅನಧಿಕೃತ ಮತ್ತು ಅಕ್ರಮ ಕಟ್ಟಡಗಳ ಮಾಹಿತಿಯನ್ನು ಸ್ಥಳೀಯ ಎಂಜಿನಿಯರ್‌ಗಳು ಗುರುತಿಸಿ, ಮುಖ್ಯ ಎಂಜಿನಿಯರ್, ಜಂಟಿ ಆಯುಕ್ತ ಹಾಗೂ ವಲಯ ಆಯುಕ್ತರ ಮೂಲಕ ಕೇಂದ್ರ ಕಚೇರಿಗೆ ರವಾನಿಸಬೇಕು. ಅವುಗಳೆಲ್ಲವನ್ನೂ ಒಟ್ಟುಗೂಡಿಸಿ ವರದಿ ತಯಾರಿಸಲಾಗುತ್ತದೆ’ ಎಂದು ಅಕ್ರಮ ಕಟ್ಟಡಗಳ ವರದಿ ಸಿದ್ಧಪಡಿಸಲು ನೋಡಲ್ ಅಧಿಕಾರಿಯಾಗಿ ನೇಮಕವಾಗಿರುವ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ತಿಳಿಸಿದರು.

‘ನೋಡಲ್ ಅಧಿಕಾರಿಯಾಗಲು ಮಂಗಳವಾರವಷ್ಟೇ ಸೂಚಿಸಿದ್ದಾರೆ. ಕೆಲಸ ಇನ್ನೂ ಪ್ರಾರಂಭವಾಗಿಲ್ಲ’ ಎಂದು ಹೇಳಿದರು.

‘ಯುಬಿಐ’ನಲ್ಲಿ ಕನ್ನಡಿಗರಿಗೆ 300 ಹುದ್ದೆಗಳು

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ(ಯುಬಿಐ), ಲೋಕಲ್ ಬ್ಯಾಂಕ್ ಆಫೀಸರ್ಸ್ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಕರ್ನಾಟಕಕ್ಕೆ 300 ಸ್ಥಾನಗಳಿಗೆ ನೇಮಕಾತಿ ನಡೆಯುತ್ತಿದೆ. ನೇಮಕಾತಿ ಪ್ರಕ್ರಿಯೆ ಕುರಿತ ವಿವರ ಇಲ್ಲಿದೆ.

ಗಾಣಧಾಳು ಶ್ರೀಕಂಠ



ದೇಶದ ಪ್ರಮುಖ ಬ್ಯಾಂಕ್‌ಗಳಲ್ಲಿ ಒಂದಾದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕವೂ ಸೇರಿದಂತೆ ದೇಶದ 10 ರಾಜ್ಯಗಳಲ್ಲಿ ಲೋಕಲ್ ಬ್ಯಾಂಕ್ ಆಫೀಸರ್ಸ್ (ಎಲ್‌ಬಿಒ) ಹುದ್ದೆಗಳ ಭರ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಒಟ್ಟು 1,500 ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದ್ದು, ಇದರಲ್ಲಿ ಕರ್ನಾಟಕಕ್ಕೆ 300 ಸ್ಥಾನಗಳಿವೆ. ಇವುಗಳಲ್ಲಿ ಸಾಮಾನ್ಯ ವರ್ಗದವರಿಗೆ 122, ಆರ್ಥಿಕ ದುರ್ಬಲ ವರ್ಗದವರಿಗೆ 30, ಒಬಿಸಿ ಅಭ್ಯರ್ಥಿಗಳಿಗೆ 81, ಎಸ್‌ಟಿ ಅಭ್ಯರ್ಥಿಗಳಿಗೆ 22 ಹಾಗೂ ಎಸ್‌ಸಿ ವರ್ಗದವರಿಗೆ 45 ಹುದ್ದೆಗಳನ್ನು ಮೀಸಲಿಡಲಾಗಿದೆ. ಕನ್ನಡ ಓದಲು, ಬರೆಯಲು ಹಾಗೂ ಮಾತನಾಡಲು ಬಲ್ಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಉಳಿದ ಹುದ್ದೆಗಳಿಗೂ ಆಯಾ ರಾಜ್ಯಗಳ ಭಾಷಾ ನಿಯಮ ಅನ್ವಯವಾಗಲಿದೆ.

ರಾಜ್ಯ	ಹುದ್ದೆಗಳು
ಆಂಧ್ರಪ್ರದೇಶ	200
ಅಸ್ಸಾಂ	50
ಗುಜರಾತ್	200
ಕರ್ನಾಟಕ	300
ಕೇರಳ	100
ಮಹಾರಾಷ್ಟ್ರ	50
ಒಡಿಶಾ	100
ತಮಿಳುನಾಡು	200
ತೆಲಂಗಾಣ	200
ಪಶ್ಚಿಮಬಂಗಾಳ	100
ಒಟ್ಟು	1500

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ಅಕ್ಟೋಬರ್ 24ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ನವೆಂಬರ್ 13 ಅರ್ಜಿ ಸಲ್ಲಿಸಲು ಕೊನೆಯ ದಿನ. ಅಭ್ಯರ್ಥಿಗಳು www.unionbankofindia.co.in ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ನೆನಪಿಡಿ; ಅಭ್ಯರ್ಥಿಗಳು ಒಂದು ರಾಜ್ಯದ ಖಾಲಿ ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸಬಹುದು.

ಅರ್ಜಿ ಶುಲ್ಕ: ಸಾಮಾನ್ಯ, ಒಬಿಸಿ ಹಾಗೂ ಇತರ ಅಭ್ಯರ್ಥಿಗಳಿಗೆ: ₹850. ಪ.ಜಾ, ಪ.ಪಂ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹಾಗೂ ಮಾಜಿ ಯೋಧರಿಗೆ ₹175. ನೋಂದಣಿ ನಂತರ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಶುಲ್ಕ ಪಾವತಿಸಬೇಕು. ಅರ್ಜಿ ಶುಲ್ಕ/ಇಂಟಿಮೇಷನ್ ಶುಲ್ಕ,/ ಬ್ಯಾಂಕ್ ವಹಿವಾಟು ಶುಲ್ಕಗಳನ್ನು ಅಭ್ಯರ್ಥಿಯು ಭರಿಸಬೇಕಾಗುತ್ತದೆ.

ವಯೋಮಿತಿ: ಕನಿಷ್ಠ 20 ವರ್ಷ ಗರಿಷ್ಠ 30 ವರ್ಷಗಳು(01/10/2024ಕ್ಕೆ ಅನ್ವಯ). ಸರ್ಕಾರದ ನಿಯಮಾನುಸಾರ ಎಸ್‌ಸಿ/ಎಸ್‌ಟಿ ಅಭ್ಯರ್ಥಿ ಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು, ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳಷ್ಟು ವಯೋಮಿತಿ ಸಡಿಲಿಕೆ ಮಾಡಲಾಗಿದೆ.

ಶೈಕ್ಷಣಿಕ ಅರ್ಹತೆ: ಒಂದು ಕಾಲದಲ್ಲಿ ಕಾಮರ್ಸ್ ಪದವಿ ಓದಿದವರಿಗೆ, ಕೃಷಿ ಪದವಿ ಅಧ್ಯಯನ ಮಾಡಿದವರಿಗಷ್ಟೇ ಬ್ಯಾಂಕ್‌ನಲ್ಲಿ ಉದ್ಯೋಗ ಎನ್ನುವಂತಿತ್ತು. ಆದರೆ ಇಂದು ಬದಲಾಗಿದೆ. ಯಾವುದೇ ವಿಷಯದಲ್ಲಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದಾಗಿದೆ. ಈ ಹುದ್ದೆಗೂ ಕಲೆ(ಆರ್ಟ್ಸ್), ವಾಣಿಜ್ಯ(ಕಾಮರ್ಸ್), ವಿಜ್ಞಾನ(ಸೈನ್ಸ್) ಅಥವಾ ಇನ್ನಾವುದೇ ವಿಷಯಗಳಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳು ಸಲ್ಲಿಸಬಹುದು.

ಪರೀಕ್ಷಾ ವಿಧಾನ: ಆನ್‌ಲೈನ್‌ನಲ್ಲಿ ಪರೀಕ್ಷೆ ಬರೆಯಬೇಕು. ವಸ್ತುನಿಷ್ಠ ಮಾದರಿ ಹಾಗೂ ಡಿಸ್ಕ್ರಿಪ್ಟಿವ್ ಮಾದರಿ ಪ್ರಶ್ನೆಗಳಿರುತ್ತವೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಪ್ರಶ್ನೆಗಳಿರುತ್ತವೆ. ಕನ್ನಡದಲ್ಲಿ ಪರೀಕ್ಷೆ ಇರುವುದಿಲ್ಲ. ರಾಜ್ಯದಲ್ಲಿ ಬೆಂಗಳೂರು, ಬೆಳಗಾವಿ, ದಾವಣಗೆರೆ, ಧಾರವಾಡ/ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಉಡುಪಿ ಜಿಲ್ಲಾ ಕೇಂದ್ರಗಳಲ್ಲಿ ಆನ್‌ಲೈನ್ ಪರೀಕ್ಷಾ ಕೇಂದ್ರಗಳಿವೆ.

ವೇತನಶ್ರೇಣಿ: ಇದು ಬ್ಯಾಂಕ್ ಜೂನಿಯರ್ ಮ್ಯಾನೇಜ್‌ಮೆಂಟ್ ಗ್ರೇಡ್ ಸ್ಕೇಲ್-1 ಹುದ್ದೆ. ವೇತನ ಶ್ರೇಣಿ ₹48,480 ರಿಂದ ₹85,920. ಇದಲ್ಲದೆ ಬ್ಯಾಂಕ್ ಹೆಚ್ಚುವರಿಯಾಗಿ, ವಿಶೇಷ ಭತ್ಯೆ, ತುಟ್ಟಿ ಭತ್ಯೆ, ಮನೆ ಬಾಡಿಗೆಯಂಥ ಇತರೆ ಸೌಲಭ್ಯಗಳೂ ದೊರೆಯಲಿವೆ.

ಅಪರೂಪದ ಅವಕಾಶ: ಸಾಮಾನ್ಯವಾಗಿ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಬ್ಯಾಂಕ್ ಅಧಿಕಾರಿಗಳ ಹುದ್ದೆಗಾಗಿ ನಡೆಸುವ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಿಲಿಮ್ಸ್, ಮೇನ್ಸ್ ಹಾಗೂ ಸಂದರ್ಶನವೆಂಬ ಮೂರು ಹಂತಗಳಿರುತ್ತವೆ. ಆದರೆ, ಈ ಬ್ಯಾಂಕಿಂಗ್ ನೇಮಕಾತಿಯಲ್ಲಿ ಮುಖ್ಯ ಪರೀಕ್ಷೆ ಮಾತ್ರ ನಡೆಸಲಾಗುತ್ತಿದ್ದು, ಸಂದರ್ಶನ ಹಂತದ ಆಯ್ಕೆ ನಡೆಯುವುದು ಖಚಿತವಾಗಿಲ್ಲ. ಮುಖ್ಯ ಪರೀಕ್ಷೆಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳ ಸಂಖ್ಯೆ ಮೇಲೆ ಇದು ನಿರ್ಧಾರವಾಗುತ್ತದೆ. ಹಾಗಾಗಿ ಕನ್ನಡಿಗರು ಈ ಅವಕಾಶವನ್ನು ಬಳಸಿಕೊಳ್ಳಬೇಕು ಎನ್ನುತ್ತಾರೆ ಎಂದು ಬ್ಯಾಂಕಿಂಗ್ ಪರೀಕ್ಷೆ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕ ಮಡಿಕೇರಿಯ ಆರ್.ಕೆ.ಬಾಲಚಂದ್ರ.

ಬಹು ಆಯ್ಕೆಯ ಪ್ರಶ್ನೋತ್ತರಗಳು

1. ರಾಷ್ಟ್ರೀಯ ಸಾಂಖ್ಯಿಕ ಕಚೇರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
2. ಈ ಸಂಸ್ಥೆಯು ಕೈಗಾರಿಕಾ ಉತ್ಪಾದನಾ ಸೂಚ್ಯಂಕವನ್ನು ಪ್ರತಿ ತಿಂಗಳು ಪ್ರಕಟಿಸುತ್ತದೆ.
3. ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಮೂಲ ವರ್ಷವಾಗಿ 2011-12 ಕಾರ್ಯನಿರ್ವಹಿಸುತ್ತಿದೆ.
ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2 ಮತ್ತು 3
ಸಿ. 1 ಮತ್ತು 2 ಡಿ. 1 ಮತ್ತು 3
ಉತ್ತರ : ಬಿ

2. ನಮೀಬಿಯ ಕೆಳಗಿನ ಯಾವ ರಾಷ್ಟ್ರಗಳೊಂದಿಗೆ ತನ್ನ ಗಡಿರೇಖೆಯನ್ನು ಹಂಚಿಕೊಳ್ಳುವುದಿಲ್ಲ?
1. ದಕ್ಷಿಣ ಆಫ್ರಿಕಾ 2. ಬೋಟ್ಸ್ವಾನ.
3. ಜಾಂಬಿಯ. 4. ಅಂಗೋಲ.
5. ನೈಜೀರಿಯಾ.
ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1 ಮತ್ತು 4 ಬಿ. 5 ಮಾತ್ರ
ಸಿ. 2 ಮತ್ತು 3 ಡಿ. 3 ಮತ್ತು 5
ಉತ್ತರ : ಬಿ

3. ಕೆಳಗಿನ ಯಾವ ಸ್ಥಾನಮಾನವನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮ ಹೊಂದಿದೆ?
1. ಸಾರ್ವಜನಿಕ ವಲಯದ ಉದ್ದಿಮೆ.
2. ಮಹಾರತ್ನ ಸ್ಥಾನಮಾನ ಹೊಂದಿರುವ ಸಾರ್ವಜನಿಕ ವಲಯದ ಉದ್ದಿಮೆ.
3. ಬ್ಯಾಂಕೇತರ ಹಣಕಾಸು ಕಂಪನಿ.
4. ತಂತ್ರಜ್ಞಾನ ಆಧಾರಿತ ಹಣಕಾಸು ಕಂಪನಿ.
ಕೋಡ್ ಬಳಸಿ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 2 ಮತ್ತು 4
ಸಿ. 3 ಮಾತ್ರ ಡಿ. 2 ಮಾತ್ರ
ಉತ್ತರ : ಎ

4. ನೀಲಗಿರಿ ಥಾರ್ ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ನೀಲಗಿರಿ ಥಾರ್ ಒಂದು ಜಿಂಕೆಯ ತಳಿಯಾಗಿದ್ದು, ತಮಿಳುನಾಡಿನ ರಾಜ್ಯ ಪ್ರಾಣಿ ಎನ್ನುವ ಸ್ಥಾನಮಾನ ಹೊಂದಿದೆ.
2. ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್ ಸಂಸ್ಥೆಯೊಂದಿಗೆ ತಮಿಳುನಾಡು ಸರ್ಕಾರ ಸಮೀಕ್ಷೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.
3. ನೀಲಗಿರಿ ಬೆಟ್ಟಗಳಲ್ಲಿ ನೀಲಗಿರಿ ಥಾರ್ ಹೆಚ್ಚಾಗಿ ಕಂಡುಬರುತ್ತದೆ.
ಕೋಡ್ ಬಳಸಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 2 ಮತ್ತು 3
ಉತ್ತರ : ಸಿ

5. ಗೋಲ್ಡ್ ಮ್ಯಾನ್ ಪರಿಸರ ಪ್ರಶಸ್ತಿಯನ್ನು ಕೆಳಗಿನ ಯಾವ ಹೆಸರಿನಿಂದಲೂ ಕೂಡ ಕರೆಯಲಾಗುತ್ತದೆ?
ಎ. ಹಸಿರು ನೊಬೆಲ್ ಪ್ರಶಸ್ತಿ.
ಬಿ. ಕೆಂಪು ನೊಬೆಲ್ ಪ್ರಶಸ್ತಿ.
ಸಿ. ಪರಿಸರ ನೊಬೆಲ್ ಪ್ರಶಸ್ತಿ.
ಡಿ. ಭೌಗೋಳಿಕ ನೊಬೆಲ್ ಪ್ರಶಸ್ತಿ.
ಉತ್ತರ : ಎ

6. ಛತ್ತೀಸ್‌ಗಡದ ಕೆಳಗಿನ ಯಾವ ಅರಣ್ಯವನ್ನು ಛತ್ತೀಸ್‌ಗಡದ ಶ್ವಾಸಕೋಶ ಎಂದು ಕರೆಯಲಾಗುತ್ತದೆ?
ಎ. ದಂಡಕಾರಣ್ಯ.
ಬಿ. ದಾಂತೇವಾಡ ಅರಣ್ಯ.
ಸಿ. ಹಸ್ದಿಯೋ ಅರಣ್ಯ ಪ್ರದೇಶ.
ಡಿ. ಪೂರ್ವ ಅರಣ್ಯ ಪ್ರದೇಶ.
ಉತ್ತರ : ಸಿ

7. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2024-25ರಲ್ಲಿ ಜಾನುವಾರುಗಳ ಅಭಿವೃದ್ಧಿಗಾಗಿ ರಾಷ್ಟ್ರೀಯ ಜಾನುವಾರು ಮಿಷನ್ ಅನ್ನು ಜಾರಿಗೊಳಿಸಲಾಯಿತು.
ಬಿ. ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯು ಜಾನುವಾರು ಮತ್ತು ಕೋಳಿ ತಳಿಗಳ ಅಭಿವೃದ್ಧಿ, ಫೀಡ್ ಮತ್ತು ಮೇವು ಅಭಿವೃದ್ಧಿ ಮತ್ತು ನಾವೀನ್ಯ ಮತ್ತು ವಿಸ್ತರಣೆಯಂತಹ 3 ಉಪ-ಮಿಷನ್‌ಗಳನ್ನು ಒಳಗೊಂಡಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಬಿ

8. ಪ್ರಧಾನಮಂತ್ರಿ ಜನ್ ಧನ್ ಯೋಜನೆಯ ಔಪಚಾರಿಕ ಹೆಸರನ್ನು ಗುರುತಿಸಿ ?
ಎ . ರಾಷ್ಟ್ರೀಯ ವಿತ್ತೀಯ ಸೇವೆ ಅಭಿಯಾನ.
ಬಿ. ರಾಷ್ಟ್ರೀಯ ಹಣಕಾಸು ಸೇವೆಗಳ ಅಭಿಯಾನ
ಸಿ. ವಿತ್ತೀಯ ಸೇರ್ಪಡೆಗಾಗಿ ರಾಷ್ಟ್ರೀಯ ಅಭಿಯಾನ.
ಡಿ. ಉಳಿತಾಯ ಖಾತೆಗಳನ್ನು ಉತ್ತೇಜಿಸುವ ರಾಷ್ಟ್ರೀಯ ಅಭಿಯಾನ.
ಉತ್ತರ : ಸಿ

9. ಭಾರತ ಮತ್ತು ನೇಪಾಳದ ನಡುವಿನ ಬಿಕ್ಕಟ್ಟಿನ ಪ್ರದೇಶವಾದ ಕಾಲಾಪಾನಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ನೇಪಾಳದ ಪ್ರಕಾರ ಕಾಲಾಪಾನಿ ಪ್ರದೇಶವು ನೇಪಾಳದ ದಾರ್ಚುಲ ಜಿಲ್ಲೆಯ ಭಾಗವಾಗಿದೆ.
2, 1962ರ ಭಾರತ ಮತ್ತು ಚೀನಾ ನಡುವಿನ ಯುದ್ಧದ ಸಂದರ್ಭದಲ್ಲಿ ನೇಪಾಳದ ದೊರೆ ಮಹೇಂದ್ರ ಭಾರತಕ್ಕೆ ಈ ಪ್ರದೇಶವನ್ನು ನೀಡಲು ಮುಂದಾದನು.
ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

10. ಭಾರತ ಮತ್ತು ನೇಪಾಳದ ನಡುವೆ ಬಿಕ್ಕಟ್ಟಿಗೆ ಕಾರಣವಾಗಿರುವ ಸುಸ್ತ ಪ್ರದೇಶ ಭಾರತದ ಯಾವ ರಾಜ್ಯದಲ್ಲಿ ಕಂಡುಬರುತ್ತದೆ?
ಎ. ಬಿಹಾರ, ಪಶ್ಚಿಮ ಚಂಪಾರಣ್ ಜಿಲ್ಲೆ.
ಬಿ. ಬಿಹಾರ, ಸಸರಾಮ್.
ಸಿ. ಜಾರ್ಖಂಡ್, ಬೋಕರೋ.
ಡಿ. ಜಾರ್ಖಂಡ್, ಉತ್ತರ ಛೋಟಾ ನಾಗಪುರ್ ವಿಭಾಗ.
ಉತ್ತರ : ಎ

11. ತೆಲಂಗಾಣದ ವಿಶೇಷ ಸವಲತ್ತುಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಈ ವಿಧಿಯ ಅನ್ವಯ ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬಹುದು.
2. ರಾಷ್ಟ್ರಪತಿಗಳು ಆಡಳಿತಾತ್ಮಕ ನ್ಯಾಯಾಧೀಕರಣಗಳನ್ನು ಸ್ಥಾಪಿಸುವ ಅಧಿಕಾರ ಹೊಂದಿರುತ್ತಾರೆ.
ಕೋಡ್ ಬಳಸಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.
ಉತ್ತರ : ಸಿ

12. ಯಾವ ವಿಚಾರಗಳಿಗೆ ಸಂಸದೀಯ ಕಾನೂನು ನಾಗಾಲ್ಯಾಂಡಿನಲ್ಲಿ ಅನ್ವಯವಾಗುವುದಿಲ್ಲ?
1. ಸಾಮಾಜಿಕ ಆಚರಣೆ.
2. ಧಾರ್ಮಿಕ ಆಚರಣೆ.
3. ಆರ್ಥಿಕ ಆಚರಣೆ.
4. ಕಾನೂನಾತ್ಮಕ ಆಚರಣೆ.
ಕೋಡ್ ಬಳಸಿ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 2 ಮಾತ್ರ
ಸಿ. 1 ಮಾತ್ರ ಡಿ. 3 ಮತ್ತು 4
ಉತ್ತರ : ಎ

13. ಕೆಳಗಿನ ಯಾವ ಸ್ಥಳಗಳಲ್ಲಿ ಭಾಷಾ ಅಲ್ಪಸಂಖ್ಯಾತ ಆಯುಕ್ತರ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸಲಾಗಿದೆ?
1. ಬೆಂಗಳೂರು, ಕರ್ನಾಟಕ.
2. ಬೆಳಗಾವಿ, ಕರ್ನಾಟಕ.
3. ಚೆನ್ನೈ, ತಮಿಳುನಾಡು.
4. ಕೋಲ್ಕತ್ತ, ಪಶ್ಚಿಮ ಬಂಗಾಳ.
ಕೋಡ್ ಬಳಸಿ ಉತ್ತರವನ್ನು ಗುರುತಿಸಿ.
ಎ. 2, 3 ಮತ್ತು 4 ಬಿ. 1, 2 ಮತ್ತು 3
ಸಿ. 1 ಮತ್ತು 4 ಡಿ. 2 ಮತ್ತು 4
ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose

Gentleman of Rio en Medio

Read and respond:

Which counter did the American and the old man approach for the following? Fill in the boxes provided. One is done for you. *(Contd)*

a. to submit loan application form	3
b. to present the cheque	
c. to receive money	
d. to know more about services offered	
e. to invest on deposits	
f. to open an account	
g. to get a demand draft	
h. to submit filled-in challan for demand draft	

Ans:-

a. to submit loan application form	03
b. to present the cheque	06
c. to receive money	05
d. to know more about services offered	01
e. to invest on deposits	06
f. to open an account	02
g. to get a demand draft	04
h. to submit filled in challan for demand draft	04

****

The Concert

Share your responses

1.Which word in the first paragraph describes the manner of the girl when she saw the news paper?
Ans:- ‘excitedly’

1. Why do you think the mother cautioned the girl?
Ans: Mother cautioned the girl because her son was suffering from cancer. He was in the last stage of his life. His body was very weak and he needed sleep and complete rest. In addition to that, he was also fond of music especially Sitar. If he heard the news, it would disturb him.

3.‘We mustn’t miss the chance’,
a) What chance did the boy not like to miss? Why? Do you think the boy would get a chancein the future?
Ans: The chance that the boy wouldn’t like to miss is listening to Pandit Ravi Shankar’s Sitar recital. The boy had always wanted to hear and see Pandit Ravi Shankar, but had never got the chance. We do not know whether the boy would get the chance to hear Ravi Shankaragain. We cannot look into the future and say what would happen in the future. The boy may or may not get the chance

4.Imagine you were the mother of the boy; would you have reacted differently in the situation? If so, how?
Ans:Generally, Anant’s mother reacted correctly. If we think differently, we should make some special arrangements for him and give him an opportunity to listen and see Pandit Ravishankar. Because it was his great desire and our duty is to fulfill.

5.Read the third paragraph. He raised himself up without any help. The mother murmured with ‘a catch in her throat’ on seeing him. What does this suggest about the condition of the boy? Read the fourth Paragraph and answer.
Ans: It is clear that the boy suffers from some serious illness and has been bedridden. The fact that the mother is emotionally moved to see that the boy raised himself without any help suggests that the boy was dependent on others for physical activities.

Share Your Responses :

1. For a moment, Smita had forgotten something. What was it?
Ans: Smith, a moment had forgotten that her brother was very ill.

2. In what way was truly frightening to Smita?
Ans: Smita had known that Anant was going to die. The word cancer had hung in the air, her brother was dying of cancer. This truth was frightening Smita.

3. Do you consider Anant a talented boy? Justify with support from the text.
Ans: According to the text, Anant was a talented boy. At the beginning of his music career, he was able to compose his own tunes..In addition to that, he was the best player in Table-Tennis and the fastest runner in his school.

4.‘They had come with high hopes’
a. What were their ‘ high hopes’?
b. Do you think their hopes would be fulfilled? Support your answer.
c. Doctors said something to the parents. Were those words of hope or words of despair(para.6)
d. ‘They did not voice their fears’. Who does the word ‘they stand for?
i) doctors ii) friends
iii) family members, (choose the right answer). (Para.6)

Ans(a) They had come with hopes in the miracles of modern science. They hoped that An ant would be cured in the hospital and bounce back to normal life,

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

Coordination Compound


5) What is meant by unidentate, bidentate and ambidentate ligands? Give two examples for each.
Ans: (..........Contd)
Example NO_2^- or ONO^-, CN^- or NC^-
(iii) Bidentate: These are ligands with two donor sites.For example, Ethane-1,2-diamine, Oxalate ion ($C_2O_4^{2-}$)

6. Using IUPAC norms, write the formulas for the following:
(i) Tetrahydroxidozincate(II)
(ii) Potassium tetrachloridopalladate(II)
(iii) Diamminedichloridoplatinum(II)
(iv) Potassium tetracyanonickelate(II)
(v) Pentaamminenitrito-O-cobalt(III)
(vi) Hexaamminecobalt(III) sulphate
(vii) Potassium tri(oxalato)chromate(III)
(viii) Hexaammineplatinum(IV)
(ix) Tetrabromidocuprate(II)
(x) Pentaamminenitrito-N-cobalt(III)
Ans:(i) $[Zn(OH)_4]^{2-}$ (ii) $K_2[PdCl_4]$
(iii) $[Pt(NH_3)_2Cl_2]$ (iv) $K_2[Ni(CN)_4]$
(v) $[Co(NO_2)(NH_3)_5]^{2+}$
(vi) $[Co(NH_3)_6]_2(SO_4)_3$
(vii) $K_3[Cr(C_2O_4)_3]$ (viii) $[Pt(NH_3)_6]^{4+}$
(ix) $[Cu(Br)_4]^{2-}$ (x) $[Co(ONO)(NH_3)_5]^{2+}$


7. Using IUPAC norms, write the systematic names of the following:
(i) $[Co(NH_3)_6]Cl_3$ (ii) $[Pt(NH_3)_2Cl(NH_2CH_3)]Cl$
(iii) $[Ti(H_2O)_6]^{3+}$ (iv) $[Co(NH_3)_4Cl(NO_2)]Cl$
(v) $[Mn(H_2O)_6]^{2+}$ (vi) $[NiCl_4]^{2-}$
(vii) $[Ni(NH_3)_6]Cl_2$ (viii) $[Co(en)_3]^{3+}$
(ix) $[Ni(CO)_4]$
Ans: (i) Hexaamminecobalt(III) chloride
(ii) Diamminechlorido (methylamine) platinum(II) chloride
(iii) Hexaquatitanium(III) ion
(iv)Tetraamminichloridonitrito-N-Cobalt(III) chloride
(v) Hexaquamanganese(II) ion
(vi) Tetrachloridonickelate(II) ion
(vii) Hexaamminenickel(II) chloride
(viii) Tris(ethane-1, 2-diamine) cobalt(III) ion
(ix) Tetracarbonylnickel(0)

8. Aqueous copper sulphate solution (blue in colour) gives:
(i) a green precipitate with aqueous potassium fluoride and
(ii) a bright green solution with aqueous potassium chloride. Explain these experimental results.
Ans: The blue colour of the aqueous $CuSO_4$ solution is because of the presence of $[Cu(H_2O)_4]^{2+}$ ions.
(i) So when KF is added, H_2O ligands are replaced by F^- ligands which yield green-coloured $[CuF_4]^{2+}$ ions.
$[Cu(H_2O)_4]^{2+} + 4F^- \rightarrow [CuF_4]^{2-} + 4H_2O$
(ii) So when KCL is added, H_2O ligands are replaced by Cl^- ligands which yield bright green coloured $[CuCl_4]^{2+}$ ions.
$[Cu(H_2O)_4]^{2+} + 4Cl^- \rightarrow [CuCl_4]^{2-} + 4H_2O$

9. List various types of isomerism possible for coordination compounds, giving an example of each.
Ans: The various types of isomerism present in coordination compounds are:
(i)Geometrical isomerism:




(ii) Optical isomerism:




(iii) Linkage isomerism: This is found in complexes that have ambidentate ligands. For example, $[Co(NH_3)_5(NO_2)]Cl_2$ and $[Co(NH_3)_5(ONO)]Cl_2$
(iv) Coordination isomerism: This kind of isomerism comes up when ligands are interchanged between anionic and cationic entities of different metal ions present in the complex. For example, $[Cr(NH_3)_6][Co(CN)_6]$
(v) Ionisation isomerism: This is the kind of isomerism where a counter ion takes the place of a ligand inside the coordination sphere. For example, $[Co(NH_3)_5Br]SO_4$ and $[Co(NH_3)_5SO_4]Br$
(vi) Solvate isomerism: $[Cr(H_2O)_5Cl]Cl.H_2O$

10. How many geometrical isomers are possible in the following coordination entities?
(i) $[Cr(C_2O_4)_3]^{3-}$ (ii) $[Co(NH_3)_3Cl_3]$
Ans:(i) In $[Cr(C_2O_4)_3]^{3-}$ no geometric isomers are present because it is a bidentate ligand.



(ii) In $[Co(NH_3)_3Cl_3]$ two isomers are possible.



ಶೀಘ್ರ 21 ಹೊಸ ಮೆಟ್ರೊ ಸೇರ್ಪಡೆ

ಮೆಟ್ರೊ ರೈಲು ಪ್ರಾಯೋಗಿಕ ಸಂಚಾರ ಪರಿಶೀಲಿಸಿದ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ



ನಾಗಸಂದ್ರ–ಮಾದಾವರ ಮೆಟ್ರೊ ಮಾರ್ಗದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಶ್ರೀನಿವಾಸಯ್ಯ, ಎಸ್‌. ಮುನಿರಾಜು ಜೊತೆಗೆ ಮೆಟ್ರೊ ರೈಲಿನಲ್ಲಿ ಸಂಚರಿಸಿ ಪರಿಶೀಲನೆ ನಡೆಸಿದರು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಬೆಂಗಳೂರು: 'ನಮ್ಮ ಮೆಟ್ರೊ'ಗೆ ಶೀಘ್ರದಲ್ಲಿ 21 ರೈಲುಗಳು ಸೇರ್ಪಡೆಯಾಗಲಿದ್ದು, ಪ್ರಯಾಣಿಕರಿಗೆ ಇನ್ನಷ್ಟು ಅನುಕೂಲವಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೆಟ್ರೊ ಹಸಿರು ಮಾರ್ಗದಲ್ಲಿ ನಾಗಸಂದ್ರದಿಂದ ತುಮಕೂರು ರಸ್ತೆಯ ಮಾದಾವರವರೆಗೆ ಬುಧವಾರ ಸಂಸದ ತೇಜಸ್ವಿ ಸೂರ್ಯ, ನೆಲಮಂಗಲ ಶಾಸಕ ಶ್ರೀನಿವಾಸಯ್ಯ, ದಾಸರಹಳ್ಳಿ ಶಾಸಕ ಮುನಿರಾಜು ಜೊತೆಗೆ ಪ್ರಾಯೋಗಿಕವಾಗಿ ಸಂಚಾರ ನಡೆಸಿದ ಬಳಿಕ ಅವರು ಮಾತನಾಡಿದರು.

ಹೊಸ ರೈಲುಗಳಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ₹1,130 ಕೋಟಿ ವೆಚ್ಚದಲ್ಲಿ ರೈಲುಗಳು ಪೂರೈಕೆಯಾಗಲಿವೆ. ಮೆಟ್ರೊ ರೈಲಿನಲ್ಲಿ ಈಗಿರುವ ವಿಪರೀತ ದಟ್ಟಣೆ ಹೊಸ ರೈಲುಗಳು ಸೇರ್ಪಡೆಗೊಂಡ ಬಳಿಕ ಕಡಿಮೆಯಾಗಲಿದೆ ಎಂದು ಹೇಳಿದರು.

33.46 ಕಿ.ಮೀ. ಹಸಿರು ಮಾರ್ಗ, 40.5 ಕಿ.ಮೀ. ನೇರಳೆ ಮಾರ್ಗ ಸದ್ಯ ಚಾಲನೆಯಲ್ಲಿವೆ. ಹಳದಿ, ಗುಲಾಬಿ ಮತ್ತು ನೀಲಿ ಮಾರ್ಗಗಳು ನಿರ್ಮಾಣಗೊಳ್ಳುತ್ತಿವೆ. 2026ರ ವೇಳೆಗೆ 175 ಕಿ.ಮೀ. ಉದ್ದದ ಮೆಟ್ರೊ ಮಾರ್ಗಗಳಲ್ಲಿ ರೈಲುಗಳು ಸಂಚರಿಸಲಿವೆ ಎಂದು ಮಾಹಿತಿ ನೀಡಿದರು.

ಮೆಟ್ರೊ ಒಂದು ಮತ್ತು ಎರಡನೇ ಹಂತ ಪೂರ್ಣಗೊಂಡಿದ್ದು, ಮೂರನೇ ಹಂತಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದರು.

ಮಂಜುನಾಥ ನಗರ ನಿಲ್ದಾಣದಲ್ಲಿ ರಸ್ತೆ ದಾಟಲು ಪಾದಚಾರಿ ಮೇಲ್ಸೇತುವೆ ನಿರ್ಮಿಸಿ, ಅನುಕೂಲ ಮಾಡಿಕೊಡಲಾಗುತ್ತಿದೆ. ಯಶವಂತಪುರ ನಿಲ್ದಾಣದಲ್ಲಿ ಸಾರ್ವಜನಿಕರು ಯಾವುದೇ ಅಡಚಣೆಯಿಲ್ಲದೆ ಸಂಚರಿಸಲು ಪಾದಚಾರಿ ಮೇಲ್ಸೇತುವೆ ಸೇರಿದಂತೆ ವಿವಿಧ ಅನುಕೂಲಗಳನ್ನು ಮಾಡಲು ಭಾರತೀಯ ರೈಲ್ವೆ ಹಾಗೂ ನಮ್ಮ ಮೆಟ್ರೊ ಸಂಸ್ಥೆ ಜಂಟಿಯಾಗಿ ಒಪ್ಪಂದ ಮಾಡಿಕೊಂಡಿವೆ ಎಂದು ತಿಳಿಸಿದರು.

ಚಿಕ್ಕಬಿದರಕಲ್ಲು ನಿಲ್ದಾಣದ ಬಳಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜೊತೆ ಸೇರಿ ಕೆಳಸೇತುವೆ ನಿರ್ಮಾಣ ಮಾಡುವ ಯೋಜನೆ ರೂಪಿಸಲಾಗಿದೆ. ಮಾದಾವರ ಮೆಟ್ರೊ ನಿಲ್ದಾಣದ ಬಳಿಯೂ ಕೆಳಸೇತುವೆ ನಿರ್ಮಾಣಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದು ಹೇಳಿದರು.

ತುಮಕೂರು ಮಾರ್ಗವಾಗಿ ಬೆಂಗಳೂರಿಗೆ ಬರುವವರು ಅಂತರ ರಾಷ್ಟ್ರೀಯ ವಸ್ತುಪ್ರದರ್ಶನ ಮೈದಾನದಲ್ಲಿ ವಾಹನ ನಿಲುಗಡೆ ಮಾಡಿ ಸಂಚಾರ ದಟ್ಟಣೆರಹಿತವಾಗಿ ನಗರ ಸುತ್ತಬಹುದು. ಅವರ ಕೆಲಸಗಳನ್ನು ತ್ವರಿತವಾಗಿ ಮುಗಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ದೇಶದಲ್ಲಿಯೇ ಹೆಚ್ಚು ಪ್ರಯಾಣಿಕರ ಸಂಚಾರ

'ದೆಹಲಿ, ಮುಂಬೈ ಸೇರಿದಂತೆ ದೇಶದ ಇತರೆಡೆಗಳಲ್ಲಿ ಇರುವ ಮೆಟ್ರೊ ರೈಲುಗಳಲ್ಲಿ ಪ್ರಯಾಣ ಮಾಡುವ ಪ್ರಮಾಣಕ್ಕಿಂತ ಬೆಂಗಳೂರಿನಲ್ಲಿರುವ ನೇರಳೆ ಮಾರ್ಗ, ಹಸಿರು ಮಾರ್ಗಗಲ್ಲಿ ಪ್ರಯಾಣಿಸು ವವರ ಪ್ರಮಾಣ ಹೆಚ್ಚಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಹೆಬ್ಬಾಳ ಸರ್ಜಾಪುರ ಮೆಟ್ರೊ ಹಣಕಾಸು ಇಲಾಖೆ ಒಪ್ಪಿಗೆ

• ನವೀನ್ ಮಿನೇಜಸ್

ಬೆಂಗಳೂರು: 'ನಮ್ಮ ಮೆಟ್ರೊ' ಹಂತ 3ಎ ಹೆಬ್ಬಾಳ–ಸರ್ಜಾಪುರ ಕಾರಿಡಾರ್ ನಿರ್ಮಾಣಕ್ಕಾಗಿ ಬಿಎಂಆರ್‌ಸಿಎಲ್ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಹಣಕಾಸು ಇಲಾಖೆ ಒಪ್ಪಿಗೆ ನೀಡಿದೆ. ಈ ತಿಂಗಳ ಅಂತ್ಯದಲ್ಲಿ ಸಚಿವ ಸಂಪುಟ ಸಭೆಯಲ್ಲಿ ವರದಿ ಚರ್ಚೆಗೆ ಬರಲಿದೆ.

'ನಮ್ಮ ಮೆಟ್ರೊ' ಹಳೆಯ ಯೋಜನೆಗಳಲ್ಲಿ ಹೆಬ್ಬಾಳ–ಸರ್ಜಾಪುರ (ಕೆಂಪು) ಮಾರ್ಗ ಕೂಡ ಒಂದಾಗಿದ್ದು, 17 ಎತ್ತರಿಸಿದ ಹಾಗೂ 11 ನೆಲದಡಿಯ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಹೆಬ್ಬಾಳ, ಗಂಗಾನಗರ ಮತ್ತು ಪಶು ವೈದ್ಯಕೀಯ ಕಾಲೇಜು ನಿಲ್ದಾಣದವರೆಗೆ ಎತ್ತರಿಸಿದ ಮಾರ್ಗ ಇರಲಿದೆ. ಅಲ್ಲಿಂದ ಕೋರಮಂಗಲ ಮೂರನೇ ಬ್ಲಾಕ್ ವರೆಗೆ 14.449 ಕಿ.ಮೀ. ಸುರಂಗ ಮಾರ್ಗವನ್ನು ಹೊಂದಿದೆ. ಅಲ್ಲಿಂದ ಮುಂದಕ್ಕೆ ಸರ್ಜಾಪುರವರೆಗೆ ಮತ್ತೆ ಎತ್ತರಿಸಿದ ಮಾರ್ಗ ಇರಲಿದೆ. 22.136 ಕಿ.ಮೀ. ಎತ್ತರಿಸಿದ ಮಾರ್ಗ ಸೇರಿ ಒಟ್ಟು 36.585 ಕಿ.ಮೀ. ಉದ್ದದ ಮಾರ್ಗ ಇದಾಗಿದೆ.

₹28,405 ಕೋಟಿ ಅಂದಾಜು ಮೊತ್ತದ ಯೋಜನೆಗೆ ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ನೀಡಿ ಹಣಕಾಸು ಇಲಾಖೆಗೆ ಕಳುಹಿಸಿತ್ತು. ಅನುಮೋದನೆಗಾಗಿ ಸಂಪುಟ ಸಭೆಯಲ್ಲಿ ಚರ್ಚಿಸುವ ಮೊದಲು ಆರ್ಥಿಕ ಪರಿಣಾಮದ ಬಗ್ಗೆ ಹಣಕಾಸು ಇಲಾಖೆ ಪರಿಶೀಲನೆ ನಡೆಸಬೇಕಿತ್ತು. ಮೂರೇ ವಾರದಲ್ಲಿ ಆರ್ಥಿಕ ಇಲಾಖೆ ಪ್ರಸ್ತಾವಕ್ಕೆ ಅನುಮೋದಿಸಿದೆ.

ಹಣಕಾಸು ಇಲಾಖೆ ಒಪ್ಪಿಗೆ ನೀಡಿರುವುದನ್ನು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಖಚಿತಪಡಿಸಿದ್ದಾರೆ.

ಡಬಲ್ ಡೆಕರ್ (ರೋಡ್ ಕಂ ರೇಲ್) ಪ್ರಸ್ತಾವ ಇದ್ದರೂ ಅದು ಮೂಲ ಡಿಪಿಆರ್‌ನಲ್ಲಿ ಇಲ್ಲದೇ ಪ್ರತ್ಯೇಕ ಯೋಜನೆ ಆಗಿರುವುದರಿಂದ ಮೂಲ ಡಿಪಿಆರ್‌ಗೆ ತ್ವರಿತವಾಗಿ ಒಪ್ಪಿಗೆ ಸಿಕ್ಕಿದೆ. ಈ ಕಡತ ಮತ್ತೆ ಬೆಂಗಳೂರು ನಗರಾಭಿವೃದ್ಧಿ ಇಲಾಖೆಗೆ ಬರಲಿದೆ. ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಪರಿಶೀಲಿಸಿದ ಬಳಿಕ ಸಂಪುಟ ಸಭೆಯ ಅನುಮತಿಗೆ ಕಡತ ಮಂಡಿಸಲಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಈ ವರ್ಷದ ಅಂತ್ಯದ ಒಳಗೆ ಡಿಪಿಆರ್ ಸಲ್ಲಿಕೆಯಾಗಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಿಎಸ್‌ಐ 402 ಹುದ್ದೆ: ತಾತ್ಕಾಲಿಕ ಅಂಕ ಪಟ್ಟಿ ಪ್ರಕಟ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 402 ಹುದ್ದೆಗಳಿಗೆ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆದ ಅಭ್ಯರ್ಥಿಗಳ ತಾತ್ಕಾಲಿಕ ಅಂಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬುಧವಾರ ಪ್ರಕಟಿಸಿದೆ.

ಅ. 3ರಂದು ಪರೀಕ್ಷೆ ನಡೆದಿತ್ತು. ಕೇವಲ 33 ದಿನಗಳಲ್ಲಿ ಪರೀಕ್ಷೆಯ ಪತ್ರಿಕೆ 1 ಮತ್ತು 2ರಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. 'ತಾತ್ಕಾಲಿಕ ಅಂಕಪಟ್ಟಿಗೆ ಆಕ್ಷೇಪಣೆಗಳಿದ್ದರೆ ಇದೇ 9ರ ಒಳಗೆ ಆನ್‌ಲೈನ್ ಮೂಲಕ ಸಲ್ಲಿಸಬಹುದು. ಅಂತಿಮ ಸರಿ (ಕೀ) ಉತ್ತರಗಳನ್ನು ಕೂಡ ಬಿಡುಗಡೆ ಮಾಡಲಾಗಿದೆ. ಸರಿ ಉತ್ತರಗಳಿಗೆ ಸಂಬಂಧಿಸಿದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ರೈಲು ನಿಲ್ದಾಣಕ್ಕೆ ತಾತಯ್ಯ ಹೆಸರಿಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ರೈಲು ನಿಲ್ದಾಣಕ್ಕೆ ಕೈವಾರ ತಾತಯ್ಯ ಯೋಗಿ ನಾರೇಯಣ ಅವರ ಹೆಸರು ನಾಮಕರಣ ಮಾಡುವಂತೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಕರ್ನಾಟಕ ಬಲಿಜ ಜಾಗೃತಿ ವೇದಿಕೆ ಮನವಿಪತ್ರ ಸಲ್ಲಿಸಿದೆ.

ಮನವಿಪತ್ರ ಸ್ವೀಕರಿಸಿ ಮಾತನಾಡಿದ ವಿ. ಸೋಮಣ್ಣ, 'ಕೈವಾರ ತಾತಯ್ಯ ಯೋಗಿ ನಾರೇಯಣ ಅವರು ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಮಹಾನ್ ಸಂತರು. ಅವರ ಹೆಸರು ಚಿರಸ್ಥಾಯಿಯಾಗಿ ಉಳಿಸಲು ಚಿಕ್ಕಬಳ್ಳಾಪುರ ರೈಲು ನಿಲ್ದಾಣಕ್ಕೆ ಅವರ ಹೆಸರು ನಾಮಕರಣದ ಬೇಡಿಕೆ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ವೇದಿಕೆ ಅಧ್ಯಕ್ಷ ಎಂ. ಮುನಿರಾಜು, ಕಾರ್ಯದರ್ಶಿ ಜಿ. ಜ್ಞಾನೇಶ್, ಕನ್ನಡಪರ ಹೋರಾಟಗಾರ ಖಾಜಾ ಹುಸೇನ್ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದರು.

ಇಂದು ನಾಗಸಂದ್ರ- ಮಾದಾವರ ಮೆಟ್ರೊ ರೈಲು ಸಂಚಾರ ಪ್ರಾರಂಭ

ಪ್ರಜಾವಾಣಿ ವಾರ್ತೆ



ನಮ್ಮ ಮೆಟ್ರೊ ಹಸಿರು ಮಾರ್ಗದ ನಾಗಸಂದ್ರ–ಮಾದಾವರ ನಡುವೆ ಗುರುವಾರ ವಾಣಿಜ್ಯ ಸಂಚಾರ ಆರಂಭವಾಗಲಿದ್ದು, ಬುಧವಾರ ಪ್ರಾಯೋಗಿಕ ಸಂಚಾರ ನಡೆಯಿತು ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಬೆಂಗಳೂರು: ನಮ್ಮ ಮೆಟ್ರೊ ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ–ಮಾದಾವರ ನಡುವೆ ಮೆಟ್ರೊ ರೈಲು ಸಾರ್ವಜನಿಕ ಸಂಚಾರಕ್ಕೆ ನ.7ರಂದು ತೆರೆದುಕೊಳ್ಳಲಿದೆ.

ಬೆಳಿಗ್ಗೆ 5ಕ್ಕೆ ಮಾದಾವರದಿಂದ ಮೊದಲ ವಾಣಿಜ್ಯ ಸಂಚಾರ ಪ್ರಾರಂಭವಾಗಲಿದೆ. ರಾತ್ರಿ 11ಕ್ಕೆ ಕೊನೆಯ ರೈಲು ಹೊರಡಲಿದೆ. ನಾಗಸಂದ್ರ–ಮಾದಾವರ ನಡುವೆ ಪ್ರತಿ 10 ನಿಮಿಷಕ್ಕೆ ಒಂದು ರೈಲು ಸಂಚರಿಸಲಿದೆ. ಹಸಿರು ಮಾರ್ಗದ ಇತರ ಪ್ರದೇಶಗಳಲ್ಲಿ ರೈಲು ಸಂಚಾರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ಪ್ರಯಾಣದ ಕನಿಷ್ಠ ದರ ₹10 ಹಾಗೂ ಗರಿಷ್ಠ ದರ ₹60 ಇರಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸುದೀರ್ಘ ಏಳು ವರ್ಷ: ಹಸಿರು ಮಾರ್ಗದಲ್ಲಿ ಮೂರು ನಿಲ್ದಾಣಗಳನ್ನಷ್ಟೇ ಹೊಂದಿರುವ ಮೂರು ಕಿಲೋಮೀಟರ್ ಕಾಮಗಾರಿಗೆ 2017ರ ಏಪ್ರಿಲ್‌ನಲ್ಲಿ ಚಾಲನೆ ನೀಡಲಾಗಿತ್ತು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಕು ಉಂಟಾಗಿ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. ಕೋವಿಡ್ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದ್ದೂ ಸೇರಿದಂತೆ ವಿವಿಧ ಕಾರಣಗಳಿಂದ ಏಳು ವರ್ಷ ಕುಂಟುತ್ತಾ ಸಾಗಿ, 2024ರಲ್ಲಿ ಪೂರ್ಣಗೊಂಡಿತ್ತು. 27 ತಿಂಗಳಲ್ಲಿ ಮುಗಿಯಬೇಕಿದ್ದ ಕಾಮಗಾರಿ 91 ತಿಂಗಳಲ್ಲಿ ಪೂರ್ಣಗೊಂಡಿತ್ತು.

ಬಿ.ಎಂ.ರಮೇಶ್‌ಗೆ ಬನ್ನಂಜೆ ಗೋವಿಂದಾಚಾರ್ಯ ಪುರಸ್ಕಾರ

ಪ್ರಜಾವಾಣಿ ವಾರ್ತೆ



ಬಿ.ಎಂ.ರಮೇಶ್

ಬೆಂಗಳೂರು: ಈ ಸಾಲಿನ ಬನ್ನಂಜೆ ಗೋವಿಂದಾಚಾರ್ಯ ಪುರಸ್ಕಾರಕ್ಕೆ ಕೆನಡಾದ ಮಣಿತೋಬಾ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ, ಸಮಾಜ ವಿಜ್ಞಾನಿ ಪ್ರೊ. ಬಿ.ಎಂ.ರಮೇಶ್ ಅವರನ್ನು ಆಯ್ಕೆ ಮಾಡಿದೆ.

ರಮೇಶ್ ಅವರು ವೇದವ್ಯಾಸರ ಮಹಾಭಾರತದ ಮೂಲ ಆವೃತ್ತಿಯನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಮಹಾಭಾರತದ ವಿವರಣೆಯನ್ನು ವೇದ, ಇತಿಹಾಸ, ಪುರಾಣಗಳಲ್ಲಿ ಬರುವ ಕಥೆ, ಉಪಕಥೆಗಳ ಜತೆ ಕೊಂಡಿ ಬೆಸೆಯುವ ಕೆಲಸ ಮಾಡಿದ್ದಾರೆ. ಮಹಾಭಾರತದ ಕುರಿತು ವಿಶ್ವಕೋಶ ರಚಿಸಿದ್ದಾರೆ. ಇವೆಲ್ಲವನ್ನೂ ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನದ ಮುಖ್ಯ ಟ್ರಸ್ಟಿ ವೀಣಾ ಬನ್ನಂಜೆ ಅವರು ತಿಳಿಸಿದ್ದಾರೆ.

ಮಲ್ಲೇಪುರಂ ಜಿ.ವೆಂಕಟೇಶ್, ಎಚ್.ವಿ.ನಾಗರಾಜ ರಾವ್ ಮತ್ತು ಉಮಾಶಂಕರ ಭಟ್ ಅವರನ್ನು ಒಳಗೊಂಡ ಸಮಿತಿ ರಮೇಶ್ ಅವರನ್ನು ಆಯ್ಕೆ ಮಾಡಿದೆ. ಡಿ.13ರಂದು ನಗರದ ಗಾಯನ ಸಮಾಜದಲ್ಲಿ ನಡೆಯುವ ಗೋವಿಂದಾಚಾರ್ಯರ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಪ್ರಶಸ್ತಿಯು ₹50 ಸಾವಿರ ಗೌರವಧನ, ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ರಮೇಶ್ ಅವರು ಕೆನಡಾದ ಮಣಿತೋಬಾ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯ ಸಮುದಾಯ ಆರೋಗ್ಯ ವಿಭಾಗದ ತಾಯಿ ಮತ್ತು ನವಜಾತ ಶಿಶು ಸ್ವಾಸ್ಥ್ಯಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ಕರ್ನಾಟಕ ಮತ್ತು ಉತ್ತರ ಪ್ರದೇಶಗಳಲ್ಲಿ ಜಾರಿ ಮಾಡಿದ್ದಾರೆ.

ಬೇರೆ ಊರಿನ ಶಾಲೆಗೆ ದಾಖಲಾಗುತ್ತಿರುವ ಮಕ್ಕಳು

ಶಾಲೆಯನ್ನೇ ಮನೆ ಮಾಡಿಕೊಂಡ ವ್ಯಕ್ತಿ!

ಪ್ರಜಾವಾಣಿ ವಾರ್ತೆ



ಶ್ರೀನಿವಾಸಪುರ ತಾಲ್ಲೂಕಿನ ಗಾಂಧಿನಗರ ಸರ್ಕಾರಿ ಶಾಲೆಯನ್ನು ಅಡುಗೆ ಮನೆ ಮಾಡಿಕೊಂಡಿರುವ ಕುಮಾರ್

ಶ್ರೀನಿವಾಸಪುರ: ತಾಲ್ಲೂಕಿನ ರಾಯಲ್ಪಾಡು ಹೋಬಳಿ ಗಾಂಧಿನಗರ ಸರ್ಕಾರಿ ಶಾಲೆಯು ಐದು ವರ್ಷಗಳಿಂದ ಮುಚ್ಚಿದ್ದು, ಗೌನಿಪಲ್ಲಿ ಕುಮಾರ್ ಎಂಬುವರು ಕುಟುಂಬ ಸಮೇತ ಈ ಶಾಲೆಯಲ್ಲಿ ವಾಸ ಮಾಡುತ್ತಿರುವುದು ಗೊತ್ತಾಗಿದೆ. ಈ ಸಂಬಂಧ ಗ್ರಾಮಸ್ಥರು ಹಲವು ಬಾರಿ ಶಾಲೆ ತೆರವು ಮಾಡುವಂತೆ ಹೇಳಿದರೂ ಖಾಲಿ ಮಾಡಿಲ್ಲ.

'ಕ್ಷೇತ್ರ ಶಿಕ್ಷಣಾಧಿಕಾರಿ ಶಾಲೆ ಬರೆದು ಕೊಟ್ಟಿದ್ದಾರೆ ಎಂಬುದಾಗಿ ಪತ್ರ ತೋರಿಸಿ ಗ್ರಾಮಸ್ಥರನ್ನು ಕುಮಾರ್ ಬೆದರಿಸುತ್ತಾನೆ' ಎಂದು ಗ್ರಾಮಸ್ಥರಾದ ವೆಂಕಟೇಶಮ್ಮ, ನಾಗಮ್ಮ, ಸರಸ್ವತಮ್ಮ, ಶ್ರೀನಿವಾಸ್, ತಿಪ್ಪಣ್ಣ, ನಾರಾಯಣಸ್ವಾಮಿ, ವೆಂಕಟರಮಣ ದೂರಿದ್ದಾರೆ.

'ಶಾಸಕರ ಗಮನಕ್ಕೆ ತಂದಿದ್ದು, ಅವರು ಕ್ಷೇತ್ರ ಶಿಕ್ಷಣಾಧಿಕಾರಿಗೆ ಸೂಚಿಸಿದ್ದಾರೆ. ಆದರೆ, ಶಿಕ್ಷಣಾಧಿಕಾರಿಯು ಸ್ಥಳಕ್ಕೆ ಭೇಟಿ ನೀಡಿ ನೋಟಿಸ್ ಕೂಡ ನೀಡಿಲ್ಲ. ಹೀಗಾಗಿ, ಅವರು ಇನ್ನೂ ಶಾಲೆಯಿಂದ ಹೋಗಿಲ್ಲ. ಗ್ರಾಮದಿಂದ 10ಕ್ಕೂ ಅಧಿಕ ಮಕ್ಕಳು ಗೌನಿಪಲ್ಲಿ ಹಾಗೂ ಅವಗಾನಪಲ್ಲಿ ಶಾಲೆಗೆ ಪ್ರತಿ ದಿನ ಹೋಗುತ್ತಿದ್ದಾರೆ. ಗ್ರಾಮದಲ್ಲಿ ಶಾಲೆ ಇದ್ದರೂ ಬೇರೆ ಶಾಲೆಗೆ ಕಳುಹಿಸುವಂತಾಗಿದೆ' ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಜಾಗ ಖಾಲಿ ಮಾಡಲು ಸೂಚನೆ: 'ಈ ಸಂಬಂಧ ಗೌನಿಪಲ್ಲಿ ಠಾಣೆಯಲ್ಲಿ ದೂರು ದಾಖಲಾಗಿದೆ. ಪೊಲೀಸರ ಸಹಕಾರದೊಂದಿಗೆ ಶಾಲೆಗೆ ಭೇಟಿ ನೀಡಿದ್ದು, ಶಾಲೆಯನ್ನು ವಾಸಕ್ಕೆ ಬಳಸಿಕೊಂಡಿರುವ ಕುಮಾರ್ ಎಂಬುವವರಿಗೆ ಜಾಗ ಖಾಲಿ ಮಾಡಲು ಸೂಚಿಸಲಾಗಿದೆ. ಸೋಮವಾರ ಶಾಲೆ ಪ್ರಾರಂಭಿಸಲಾಗುವುದು. ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುವಂತೆ ಪೋಷಕರಿಗೆ ಮನವಿ ಮಾಡಲಾಗಿದೆ' ಎಂದು ಸ್ಥಳಕ್ಕೆ ಭೇಟಿ ನೀಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ.ಮುನಿಲಕ್ಷ್ಮಯ್ಯ ತಿಳಿಸಿದರು.

ಎಸ್‌ಸಿ, ಎಸ್‌ಟಿ, ಪೌರಕಾರ್ಮಿಕರಿಗೆ ನೀಡಿದ ಭರವಸೆ 16 ವರ್ಷದಿಂದ ಬಾಕಿ

1,110 ಕುಟುಂಬಕ್ಕೆ ನಿವೇಶನ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನದಲ್ಲಿ 1,110 ಕಾರ್ಮಿಕ ಕುಟುಂಬಗಳಿಗೆ ನಿವೇಶನಗಳನ್ನು ವಿತರಿಸುವ ಪ್ರಕ್ರಿಯೆ 16 ವರ್ಷವಾದರೂ ಪೂರ್ಣಗೊಂಡಿಲ್ಲ. ಬಡಾವಣೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಆಡಳಿತಾಧಿಕಾರಿಯವರ ಸಮ್ಮತಿಗೆ ಕಾಯಲಾಗುತ್ತಿದೆ.

ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಹೊಸದಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿ ಉಚಿತವಾಗಿ ನಿವೇಶನ ವಿತರಿಸಲು 2008ರಲ್ಲಿ ತೀರ್ಮಾನಿಸಿ, ಆದೇಶ ಹೊರಡಿಸಲಾಗಿತ್ತು.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ ಲಕ್ಷ್ಮೀಪುರದಲ್ಲಿ ಸರ್ವೆ ನಂಬರ್ 24ರಲ್ಲಿ 18 ಎಕರೆ 33 ಗುಂಟೆ, ಸರ್ವೆ ನಂಬರ್ 25ರಲ್ಲಿ 3 ಎಕರೆ 9 ಗುಂಟೆ ಹಾಗೂ ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ ಅಗರ ಗ್ರಾಮದ ಸರ್ವೆ ನಂಬ ್ 28ರಲ್ಲಿ 7 ಎಕರೆ 5 ಗುಂಟೆ ಸೇರಿದಂತೆ ಒಟ್ಟು 29 ಎಕರೆ 7 ಗುಂಟೆ ಜಮೀನನ್ನು ಬಿಬಿಎಂಪಿಗೆ ಕಂದಾಯ ಇಲಾಖೆ 2015ರಲ್ಲಿ ಹಸ್ತಾಂತರಿಸಿದೆ.

ನಿವೇಶನ ಪಡೆಯುವ ಫಲಾನುಭವಿಗಳನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದೆ. ದಕ್ಷಿಣ ವಲಯದಲ್ಲಿ 494, ಪಶ್ಚಿಮ ವಲಯದಲ್ಲಿ 206 ಹಾಗೂ ರಾಜರಾಜೇಶ್ವರಿನಗರ ವಲಯದಲ್ಲಿ 410 ಸೇರಿದಂತೆ 1,110 ಫಲಾನುಭವಿಗಳನ್ನು ಆಯ್ಕೆಯಾಗಿದ್ದಾರೆ.

ಬಹುಜನ ವಿಮೋಚನಾ ಚಳವಳಿ ಸಂಚಾಲಕರ ಮನವಿಯಂತೆ, ನಿಯಮಾನುಸಾರ ಜರೂರಾಗಿ ಕ್ರಮ ಕೈಗೊಳ್ಳಬೇಕು ಎಂದು ಉಪ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಸರ್ಕಾರದಿಂದ ಮಂಜೂರಾಗಿರುವ ಜಮೀನಿನಲ್ಲಿ ಮಾದರಿ ಬಡಾವಣೆ ನಿರ್ಮಿಸಲು, ಮೂಲಸೌಕರ್ಯಗಳನ್ನು ಒದಗಿಸಲು ಯಲಹಂಕ ಹಾಗೂ ಆರ್.ಆರ್. ನಗರ ವಲಯ ಆಯುಕ್ತರು ಒಟ್ಟು ₹42.28 ಕೋಟಿ ವೆಚ್ಚದ ದರಪಟ್ಟಿ ಸಲ್ಲಿಸಿದ್ದಾರೆ. ಇದರಂತೆ ಬಡಾವಣೆ ನಿರ್ಮಿಸಲು ಎಸ್‌ಸಿಪಿ, ಟಿಎಸ್‌ಪಿ ಅನುದಾನ ಬಳಕೆ ಮಾಡಲು ತೀರ್ಮಾನಿಸುವ ಪ್ರಸ್ತಾವವನ್ನು ಕಲ್ಯಾಣ ವಿಭಾಗದ ವಿಶೇಷ ಆಯುಕ್ತರು ಬಿಬಿಎಂಪಿ ಆಡಳಿತಾಧಿಕಾರಿ ಅವರಿಗೆ ಸಲ್ಲಿಸಿದ್ದಾರೆ.

ಪ್ರಕ್ರಿಯೆ ಮುಗಿದಿಲ್ಲ: ‘ಪಾಲಿಕೆಯೇ ನಿರ್ಧರಿಸಿರುವಂತೆ 1,110 ಅರ್ಹ ಕುಟುಂಬಗಳಿಗೆ ವಿಶೇಷ ಪ್ರಕರಣದಡಿ ನಿವೇಶನ ಹಂಚಿಕೆ ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅದರ ಅನುಷ್ಠಾನವನ್ನು ಶೀಘ್ರ ಪೂರೈಸಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಫೆಬ್ರುವರಿಯಿಂದ ನಾಲ್ಕು ಬಾರಿ ಪತ್ರ ಬರೆದಿದ್ದಾರೆ. ಆದರೂ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ.

‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಪೌರಕಾರ್ಮಿಕರಾಗಿರುವ ಬಡ ಕುಟುಂಬಗಳವರು ನಿವೇಶನಕ್ಕಾಗಿ ವರ್ಷಗಳಿಂದ ಕಾಯುತ್ತಿದ್ದಾರೆ’ ಎಂದು ಬಹುಜನ ವಿಮೋಚನಾ ಚಳವಳಿಯ ಬೆಂಗಳೂರು ನಗರ ಜಿಲ್ಲೆಯ ಸಂಚಾಲಕ ಎಸ್. ಗಂಗಾಧರ ಹೇಳಿದರು.



ಬಡಾವಣೆ ನಿರ್ಮಾಣಕ್ಕಾಗಿ ಬಿಬಿಎಂಪಿ ಸ್ವಾಧೀನಕ್ಕೆ ನೀಡಿರುವ ಲಕ್ಷ್ಮೀಪುರದಲ್ಲಿನ ಜಮೀನು

ಶೀಘ್ರ ಅನುಮೋದನೆ: ಉಮಾಶಂಕರ್

‘ವಿಶೇಷ ಘಟಕ ಯೋಜನೆಯ (ಎಸ್‌ಸಿಪಿ/ಟಿಎಸ್‌ಪಿ) ಅನುದಾನ ಬಳಕೆಯಿಂದ ಬಡಾವಣೆಯನ್ನು ವಿಶಿಷ್ಟವಾಗಿ ನಿರ್ಮಿಸಬೇಕೆಂಬ ಉದ್ದೇಶವಿದೆ. ಹೀಗಾಗಿ, ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿಯವರು ಈ ಬಗ್ಗೆ ಚರ್ಚಿಸಲು ಸೂಚಿಸಿದ್ದಾರೆ. ಉಪ ಚುನಾವಣೆ ಪ್ರಕ್ರಿಯೆ ಮುಗಿದ ಮೇಲೆ ಅನುದಾನ ಬಿಡುಗಡೆಗೆ ಅನುಮೋದನೆ ನೀಡಲಾಗುತ್ತದೆ. ಯಾರೂ ಆತಂಕಪಡುವ ಅಗತ್ಯವಿಲ್ಲ’ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ರೈತರ ಜಮೀನುಗಳ ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ನಮೂದಾಗಿರುವ ಕುರಿತು ಹಾಲಿ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಪಾರದರ್ಶಕ ತನಿಖೆ ನಡೆಸಬೇಕು ಎಂದು ಜನತಾ ಪಕ್ಷ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ನಾಗೇಶ್ ಎನ್., ‘ರಾಜ್ಯದಲ್ಲಿ ರೈತರ ಆಸ್ತಿಗಳ ಪಹಣಿ ಸೇರಿದಂತೆ ಶಾಲಾ–ಕಾಲೇಜುಗಳ ಕಟ್ಟಡ, ಸರ್ಕಾರಿ ಜಮೀನು, ಗೋಮಾಳ, ಮಠದ ಜಮೀನುಗಳ ಪಹಣಿಗಳಲ್ಲಿ ವಕ್ಫ್ ಮಂಡಳಿಯ ಹೆಸರು ಸೇರಿಕೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದು, ಇದರಿಂದ ರಾಜ್ಯದಲ್ಲಿ ಗೊಂದಲದ ವಾತಾವರಣ ನಿರ್ಮಾಣಗೊಂಡಿದೆ’ ಎಂದು ದೂರಿದರು.

‘ರೈತರಲ್ಲಿ ಆತಂಕಕ್ಕೆ ಕಾರಣವಾಗಿರುವ ವಿವಾದಕ್ಕೆ ಕೂಡಲೇ ತೆರೆ ಎಳೆಯಬೇಕು. ವಿರೋಧ ಪಕ್ಷಗಳು ವಕ್ಫ್ ಮಂಡಳಿಯ ವಿವಾದದ ಕುರಿತು ಸ್ಪಷ್ಟ ನಿಲುವು ತಳೆಯುತ್ತಿಲ್ಲ. ಆಡಳಿತ ಪಕ್ಷದೊಂದಿಗೆ ಸೇರಿ ಮೇಲ್ನೋಟಕ್ಕೆ ಮಾತ್ರ ಹೋರಾಟ ನಡೆಸುತ್ತಿವೆ’ ಎಂದು ಆರೋಪಿಸಿದರು.

ದರ್ಶನ್ ಆರೋಗ್ಯ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ನಿರ್ದೇಶನದ ಅನುಸಾರ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಆರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ವರದಿಯನ್ನು ಅವರ ಪರ ವಕೀಲರು ಹೈಕೋರ್ಟ್‌ಗೆ ಬುಧವಾರ ಸಲ್ಲಿಸಿದ್ದಾರೆ.

ದರ್ಶನ್ ಅವರಿಗೆ ಇತ್ತೀಚೆಗಷ್ಟೇ ಮಧ್ಯಂತರ ಜಾಮೀನು ನೀಡಿದ್ದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠವು, ‘ಯಾವಾಗ ಶಸ್ತ್ರಚಿಕಿತ್ಸೆ, ಎಷ್ಟು ದಿನ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ತದನಂತರ ಚಿಕಿತ್ಸೆ ಏನಾದರೂ ಇರಲಿದೆಯೇ ಎಂಬ ವಿವರಗಳನ್ನು ಜೈಲಿನಿಂದ ಬಿಡುಗಡೆಯಾದ ಒಂದು ವಾರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂಬ ಷರತ್ತು ವಿಧಿಸಿತ್ತು.

ಈ ಆದೇಶದ ಅಡಿಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಆರು ವಾರಗಳ ಷರತ್ತುಬದ್ಧ ಮಧ್ಯಂತರ ಜಾಮೀನು ಪಡೆದು ಜೈಲಿನಿಂದ ಹೊರಬಂದಿರುವ ದರ್ಶನ್, ಸದ್ಯ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಏತನ್ಮಧ್ಯೆ, ವರದಿಯ ಮುಖ್ಯಾಂಶಗಳ ಬಗ್ಗೆ ವಿವರಿಸಿರುವ ಮೂಲಗಳು, ‘ದರ್ಶನ್ ಆಪರೇಷನ್ ಬಗ್ಗೆ ಇನ್ನೂ ನಿರ್ಧಾರ ಮಾಡಿಲ್ಲ. ಸದ್ಯ ಅವರಿಗೆ ಫಿಸಿಯೋಥೆರಪಿ ನೀಡಲಾಗುತ್ತಿದೆ. ಆದರೆ, ಫಿಸಿಯೋಥೆರಪಿಯೇ ಅಂತಿಮ ಅಲ್ಲ ಎನಿಸುತ್ತಿದೆ. ಆದಾಗ್ಯೂ, ಸದ್ಯದ ನೋವಿನಿಂದ ಅವರು ಚೇತರಿಕೆ ಕಾಣದೇ ಇದ್ದಲ್ಲಿ ಶಸ್ತ್ರಚಿಕಿತ್ಸೆ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ವರದಿಯಲ್ಲಿ ವಿವರಿಸಲಾಗಿದೆ’ ಎಂದು ಹೇಳಿವೆ.

‘ದರ್ಶನ್‌ಗೆ ಶಸ್ತ್ರಚಿಕಿತ್ಸೆ ವಿಧಾನಗಳ ಬಗ್ಗೆ ಈಗಾಗಲೇ ಮಾಹಿತಿ ನೀಡಲಾಗಿದೆ. ಆದರೆ, ಅವರಿನ್ನೂ ಶಸ್ತ್ರಚಿಕಿತ್ಸೆಗೆ ಒಪ್ಪಿಗೆ ಸೂಚಿಸಿಲ್ಲ. ರೋಗಿ ಒಪ್ಪಿದ ನಂತರವೇ ಶಸ್ತ್ರಚಿಕಿತ್ಸೆಯ ದಿನಾಂಕದ ಬಗ್ಗೆ ಅಂತಿಮ ನಿರ್ಧಾರ ಮಾಡಲಾಗುವುದು ಎಂದು ಬಿಜಿಎಸ್ ಆಸ್ಪತ್ರೆಯ ಡಾ.ನವೀನ್ ನೀಡಿರುವ ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಪವಿತ್ರಾಗೌಡ ಜಾಮೀನು ವಿಚಾರಣೆ: ಇದೇ ಪ್ರಕರಣದ ಮೊದಲ ಆರೋಪಿ ಪವಿತ್ರಾಗೌಡ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ಗುರುವಾರ (ನ.7) ವಿಚಾರಣೆಗೆ ನಿಗದಿಯಾಗಿದೆ.

ಜೈನ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹ

ಬೆಂಗಳೂರು: ಜೈನ ಧರ್ಮೀಯರಿಗಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು ಎಂದು ದಿಗಂಬರ್ ಜೈನ್ ಗ್ಲೋಬಲ್ ಮಹಾಸಭಾ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಮಹೇಶ್ ಜೈನ್, ‘ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಿ ವಾರ್ಷಿಕ ₹200 ಕೋಟಿ ಅನುದಾನ ನೀಡಬೇಕು. ಜೈನ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಗಳಲ್ಲಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಆರಂಭಿಸಬೇಕು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ಜೈನ ಸಮುದಾಯದವರನ್ನು ಆಯ್ಕೆ ಮಾಡಬೇಕು’ ಎಂದು ಆಗ್ರಹಿಸಿದರು.

‘ಜೈನ ಸಮುದಾಯಕ್ಕೆ ಶೇಕಡ 5ರಷ್ಟು ಮೀಸಲಾತಿ ಇದ್ದು, ಅದನ್ನು ಶೇಕಡ 20ಕ್ಕೆ ಹೆಚ್ಚಿಸಬೇಕು’ ಎಂದು ಒತ್ತಾಯಿಸಿದರು. ‘ಒಂದು ತಿಂಗಳೊಳಗೆ ಬೇಡಿಕೆ ಈಡೇರಿಸದಿದ್ದರೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು’ ಎಂದರು.

ಆಡಿಯೊ: ಸುರೇಶ್–ಎಚ್‌ಡಿಕೆ ವಾಗ್ದಾಳಿ

ಚನ್ನಪಟ್ಟಣ: ಚನ್ನಪಟ್ಟಣ ಉಪ ಚುನಾವಣೆ ಪ್ರಚಾರದಲ್ಲಿ ಬುಧವಾರ ಮಾಜಿ ಸಂಸದ ಡಿ.ಕೆ.ಸುರೇಶ್ ತಮ್ಮ ಭಾಷಣದ ಮಧ್ಯೆ ಚುನಾವಣೆ ವ್ಯವಸ್ಥೆ ಕುರಿತು ಕುಮಾರಸ್ವಾಮಿ ಅವರು ಈ ಹಿಂದೆ ವಿಧಾನಸಭೆಯಲ್ಲಿ ಆಡಿದ ಮಾತಿನ ಆಡಿಯೊ ಕೇಳಿಸಿದರು.

‘ಕ್ಷೇತ್ರದಲ್ಲಿ ಐದು ವರ್ಷ ಕೆಲಸ ಮಾಡಿ ಚುನಾವಣೆ ಗೆಲ್ಲೋದು ಕಷ್ಟ. ಚುನಾವಣೆಗೆ ಹತ್ತು ದಿನ ಇದೆ ಎನ್ನುವಾಗ ಈಗಿನ ಚುನಾವಣಾ ಪದ್ಧತಿಗೆ ತಕ್ಕಂತೆ ತಯಾರಾಗಿ ಹೋಗಿ ಕೆಲಸ ಮಾಡಿದರೆ ಚುನಾವಣೆ ಗೆಲ್ಲಬಹುದು ಎಂದು ಚನ್ನಪಟ್ಟಣ ಜನರ ಮತ ಪಡೆದು ಕಾಣೆಯಾಗಿದ್ದ ಕುಮಾರಸ್ವಾಮಿ ಅವರ ಮಾತುಗಳಿವು’ ಎಂದು ಸುರೇಶ್ ವಾಗ್ದಾಳಿ ನಡೆಸಿದರು.

ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ‘ಸಿ.ಡಿ ಬ್ರದರ್ಸ್‌ಗೆ ವಿಡಿಯೊ, ಆಡಿಯೊ ಮಾಡುವುದೇ ಕೆಲಸ. ಇದರಲ್ಲಿ ಸಹೋದರರು ನಿಸ್ಸೀಮರು. ಹಾಸನದಲ್ಲಿ ಇಂತಹದೇ ಷಡ್ಯಂತ್ರ ಮಾಡಿದರು’ ಎಂದರು.

ಮೂವರು ಮೇಲ್ವಿಚಾರಕರ ಅಮಾನತು

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ನ ವಿವಿಧ ಶಾಖೆಗಳಲ್ಲಿ ನಡೆದಿರುವ ಹಣ ದುರುಪಯೋಗ, ವಂಚನೆ ದೂರಿನ ಸಂಬಂಧ ಮತ್ತೆ ಮೂವರು ಮೇಲ್ವಿಚಾರಕರ (ಸೂಪರ್‌ವೈಸರ್) ಅಮಾನತಿಗೆ ಆದೇಶವಾಗಿದೆ.

ಈಗಾಗಲೇ ನಾಲ್ವರು ವ್ಯವಸ್ಥಾಪಕರು ಹಾಗೂ ಒಬ್ಬ ಸಿಬ್ಬಂದಿಯನ್ನು ಅಮಾನತುಗೊಳಿಸಿರುವ ಸಂಬಂಧ ‘ಪ್ರಜಾವಾಣಿ’ಯಲ್ಲಿ ಬುಧವಾರ ವಿಶೇಷ ವರದಿ ಪ್ರಕಟವಾಗಿದ್ದು, ಇದೇ ದಿನ ಸಂಜೆ ವೇಳೆಗೆ ಮೇಲ್ವಿಚಾರಕರ ಅಮಾನತಿಗೆ ಆದೇಶ ಹೊರಡಿಸಲಾಗಿದೆ.

ಕೆಜಿಎಫ್ ಶಾಖೆ ಮನೋಹರ್ ವಿ., ಕೋಲಾರ ಶಾಖೆಯ ಅಮೀನ ಎಂ. ಹಾಗೂ ಚಿಂತಾಮಣಿ ಶಾಖೆಯ ಸಂತೋಷ್ ಕೆ. ಅಮಾನತು ಶಿಕ್ಷೆಗೆ ಒಳಗಾಗಲಿರುವ ಮೇಲ್ವಿಚಾರಕರು.

ಈಗಾಗಲೇ ವ್ಯವಸ್ಥಾಪಕರಾದ ಕೋಲಾರ ಶಾಖೆಯ ಅಮರೇಶ್ ಎಂ., ಕೆಜಿಎಫ್ ಶಾಖೆಯ ಗಿರೀಶ್ ಜಿ.ಎನ್., ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ಶಾಖೆಯ ನಾಗರಾಜ್ ಜಿ., ಗುಂಡಿಬಂಡೆ ಶಾಖೆ ಸುವರ್ಣಮೂರ್ತಿ ಹಾಗೂ ಸಿಬ್ಬಂದಿ ಅನಿಲ್ ಕುಮಾರ್ ಅವರನ್ನು ವಿವಿಧ ಹಂತಗಳಲ್ಲಿ ಅಮಾನತುಗೊಳಿಸಲಾಗಿದೆ.

ಈ ಶಾಖೆಗಳಲ್ಲಿ 2020–21 ಹಾಗೂ 2021–22ನೇ ಸಾಲಿನಲ್ಲಿ ಒಟ್ಟು ₹9.87 ಕೋಟಿ ಅವ್ಯವಹಾರ ನಡೆದ ಸಂಬಂಧ ಬಂದ ದೂರುಗಳು ಹಾಗೂ ಬ್ಯಾಂಕ್‌ನ ಆಂತರಿಕ ಪರಿವೀಕ್ಷಣಾಧಿಕಾರಿಗಳು ತನಿಖೆ ನಡೆಸಿ ನೀಡಿದ ವರದಿ ಆಧಾರದ ಮೇಲೆ ಡಿಸಿಸಿ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಬಿ.ಎನ್.ಶೀಲಾ ಕ್ರಮ ವಹಿಸಿದ್ದಾರೆ.

ನಾನು ಅಧಿಕಾರ ವಹಿಸಿಕೊಂಡು ಕೆಲವೇ ತಿಂಗಳಾಗಿದ್ದು, ಗಮನಕ್ಕೆ ಬಂದ ಎಲ್ಲ ಪ್ರಕರಣಗಳಲ್ಲಿ ಸೂಕ್ತ ಕ್ರಮವಾಗುತ್ತಿದೆ. ತನಿಖೆ ನಡೆಯುತ್ತಿದೆ

ಬಿ.ಎನ್.ಶೀಲಾ, ಸಿಇಒ, ಡಿಸಿಸಿ ಬ್ಯಾಂಕ್, ಕೋಲಾರ

ಸಿಬಿಐಗೆ ಒಪ್ಪಿಸಿ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆಯಿಂದ ಏನೂ ಮಾಡಲು ಸಾಧ್ಯವಿಲ್ಲ. ಸಾಚಾ ಎಂದು ತೋರಿಸಿಕೊಳ್ಳುವ ಪ್ರಯತ್ನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದ್ದಾರೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಟೀಕಿಸಿದರು.

‘ಮುಖ್ಯಮಂತ್ರಿಯವರಿಗೆ ನಿಜಕ್ಕೂ ಪ್ರಾಮಾಣಿಕತೆ ಇದ್ದರೆ ಮುಡಾ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಇದರಿಂದ ವಾಸ್ತವಿಕ ವಿಚಾರಗಳು ಹೊರಕ್ಕೆ ಬರಲು ಸಾಧ್ಯ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಲು ಹಿಂಜರಿಕೆ ಏಕೆ’ ಎಂದು ಕೂಡ ಯಡಿಯೂರಪ್ಪ ಅವರು ಪ್ರಶ್ನಿಸಿದರು.

ನ್ಯಾ. ಚಂದ್ರಶೇಖರ್ ಆಯೋಗದ ಆದೇಶ ಪ್ರಶ್ನಿಸಿದ್ದ ಅರ್ಜಿ

‘ನರ್ಸರಿ’ಗೆ ಹೈಕೋರ್ಟ್‌ ವ್ಯಾಖ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರ್ಸರಿ ಪ್ರದೇಶಗಳೆಂದರೆ ಏನು ಎಂಬುದರ ಬಗ್ಗೆ ವ್ಯಾಖ್ಯಾನ ನೀಡಿರುವ ಹೈಕೋರ್ಟ್‌, ‘ಇಂತಹ ಪ್ರದೇಶಗಳಿಗೆ ಭೂ ಸ್ವಾಧೀನ ಪ್ರಕ್ರಿಯೆಯಿಂದ ವಿನಾಯಿತಿ ನೀಡುವ ಕುರಿತು ನಿಯಮಾವಳಿ ರೂಪಿಸಿ’ ಎಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಶಿವರಾಮ ಕಾರಂತ ಬಡಾವಣೆ ನಿರ್ಮಾಣದ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಉದ್ಭವಿಸಿದ್ದ ತಕರಾರುಗಳ ಕುರಿತ ವಿಚಾರಣೆಗಾಗಿ ನೇಮಕಗೊಂಡಿದ್ದ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಆಯೋಗದ ಆದೇಶ ಪ್ರಶ್ನಿಸಿ ಹೆಬ್ಬಾಳ ವ್ಯಾಪ್ತಿಯ ಟಿ.ಪಿ. ವೇಣುಗೋಪಾಲ ಲೇಔಟ್‌ನ 91 ವರ್ಷದ ಬಿ. ಸತ್ಯನಾರಾಯಣಾಚಾರ್ ಸಲ್ಲಿಸಿದ್ದ ರಿಟ್ ಅರ್ಜಿ (ಡಬ್ಲ್ಯು.ಪಿ.21760) ವಿಚಾರಣೆ ನಡೆಸಿದ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



‘ಸದ್ಯ ಕರ್ನಾಟಕದಲ್ಲಿ ನರ್ಸರಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿಯಮಗಳಿಲ್ಲ. ಹಾಗಾಗಿ, ರಾಷ್ಟ್ರೀಯ ತೋಟಗಾರಿಕಾ ಮಂಡಳಿಯಲ್ಲಿ ನರ್ಸರಿಗಳಿಗೆ ಮಾನ್ಯತೆ ನೀಡುವಂತೆ ರಾಜ್ಯದಲ್ಲೂ ಕ್ರಮ ಕೈಗೊಳ್ಳುವ ಅವಶ್ಯ ಇದೆ’ ಎಂದು ನ್ಯಾಯಪೀಠ ಹೇಳಿದೆ.

‘2018ರ ಆಗಸ್ಟ್ 3ರ ನಂತರದ ಪ್ರದೇಶಗಳನ್ನು ನರ್ಸರಿ ಪ್ರದೇಶಗಳೆಂದು ಉಲ್ಲೇಖಿಸಲು ಆಗದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ‘ನರ್ಸರಿಗಳನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಡಬೇಕಾದರೆ ಅಥವಾ ವಿನಾಯಿತಿ ನೀಡಬೇಕಾದರೆ, ಸಂಬಂಧಿಸಿದ ಪ್ರಾಧಿಕಾರಗಳು ಅದಕ್ಕೆ ನಿಯಮಗಳನ್ನು ರೂಪಿಸಬೇಕು ಮತ್ತು ಆ ನಿಯಮಗಳು ಮೂಲ ಕಾನೂನಿಗೆ ವಿರುದ್ಧವಾಗಿರಬಾರದು’ ಎಂದು ಹೇಳಿದೆ.

‘ಈ ಮೊದಲು ಸರ್ಕಾರ ಹೊರಡಿಸಿರುವ ಆದೇಶಕ್ಕೆ ಯಾವುದೇ ಶಾಸನದ ಬೆಂಬಲವಿಲ್ಲ. ಆದ್ದರಿಂದ, ಸ್ವಾಧೀನ ಪ್ರಾಧಿಕಾರಗಳು ನರ್ಸರಿಗಳನ್ನು ಗುರುತಿಸಿ ಅವುಗಳನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಡಬೇಕಾದರೆ ತಕ್ಷಣವೇ ನಿಯಮಗಳನ್ನು ರೂಪಿಸಬೇಕಾಗುತ್ತದೆ. ಅದರ ವ್ಯಾಪ್ತಿಗೆ ಎಲ್ಲಾ ತೋಟಗಾರಿಕಾ ನರ್ಸರಿಗಳು ಒಳಪಡುವಂತಾಗಬೇಕಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಬಿ.ಸತ್ಯನಾರಾಯಣಾಚಾರ್ ಅವರು ಯಲಹಂಕ ಹೋಬಳಿ ಕೆಂಪನಹಳ್ಳಿ ಸರ್ವೆ ನಂಬರ್ 11/2ರಲ್ಲಿ ಒಂದು ಎಕರೆ ಜಮೀನು ಹೊಂದಿದ್ದರು. ಆ ಜಾಗದಲ್ಲಿ ಅವರು ‘ಶ್ರೀ ಗೋವರ್ಧನ ನರ್ಸರಿ’ ನಡೆಸುತ್ತಿದ್ದರು. ಅಲ್ಲಿ ಗುಲಾಬಿ ಪುಷ್ಪಕೃಷಿ ಮತ್ತು ಹಣ್ಣಿನ ತೋಟಗಾರಿಕೆಯ ಗಿಡಗಳನ್ನು ಬೆಳೆಸುತ್ತಿದ್ದರು.

ಈ ಪ್ರದೇಶದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಬಿಡಿಎ 2018ರ ಅಕ್ಟೋಬರ್ 30ರದು ಅಂತಿಮ ಅಧಿಸೂಚನೆ ಹೊರಡಿಸಿತ್ತು. ಅಧಿಸೂಚನೆಯನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟ್‌ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌, ಅಂತಿಮ ಅಧಿಸೂಚನೆಗೂ ಮುನ್ನ ಆ ಪ್ರದೇಶದಲ್ಲಿ ಮನೆಗಳು ನಿರ್ಮಾಣವಾಗಿದ್ದರೆ ಅಂತಹವುಗಳಿಗೆ ಸ್ವಾಧೀನದಿಂದ ವಿನಾಯಿತಿ ನೀಡುವ ಬಗ್ಗೆ ಪರಿಶೀಲಿಸಲು ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಆಯೋಗವನ್ನು ರಚಿಸಿತ್ತು.

ಆಯೋಗವು ಈ ಸಂಬಂಧ ಅರ್ಜಿ ಆಹ್ವಾನಿಸಿ ದಾಖಲೆಗಳನ್ನು ಪರಿಶೀಲಿಸಿ ಕೆಲವು ಮನೆಗಳ ಮಾಲೀಕರಿಗೆ ವಿನಾಯಿತಿ ನೀಡಿತ್ತು. ಆದರೆ, ಅರ್ಜಿದಾರರ ನರ್ಸರಿಗೆ ವಿನಾಯಿತಿ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಸತ್ಯನಾರಾಯಣಾಚಾರ್ ಹೈಕೋರ್ಟ್‌ ಮೆಟ್ಟಿಲೇರಿದ್ದರು.

ವಕ್ಫ್ ಕಾಯ್ದೆ ರದ್ದತಿಗೆ ಒತ್ತಾಯಿಸಿ ಮುಂದುವರಿದ ಕರಂದ್ಲಾಜೆ, ಯತ್ನಾಳ ಧರಣಿ

ಜೆಪಿಸಿ ಅಧ್ಯಕ್ಷರ ಭೇಟಿಗೆ ಕಾಂಗ್ರೆಸ್ ವಿರೋಧ

ಪ್ರಜಾವಾಣಿ ವಾರ್ತೆ

ವಿಜಯಪುರ: ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಅಧ್ಯಕ್ಷ ಜಗದಂಬಿಕಾ ಪಾಲ್ ಅವರು ಗುರುವಾರ (ನವೆಂಬರ್ 7) ಹುಬ್ಬಳ್ಳಿ ಮತ್ತು ವಿಜಯಪುರಕ್ಕೆ ಭೇಟಿ ನೀಡುತ್ತಿರುವುದಕ್ಕೆ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ.

'ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿನಂತಿ ಮೇರೆಗೆ ತರಾತುರಿಯಲ್ಲಿ ಹುಬ್ಬಳ್ಳಿ, ವಿಜಯಪುರ ಪ್ರವಾಸ ಕೈಗೊಂಡಿರುವ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಾಲ್ ಅವರು ಒಬ್ಬರೇ ಬರುತ್ತಿರುವುದು ಖಂಡನೀಯ. ಸಮಿತಿಯ ಎಲ್ಲ ಸದಸ್ಯರನ್ನು ತಮ್ಮ ಜೊತೆ ಪ್ರವಾಸಕ್ಕೆ ಕರೆತರಬೇಕಿತ್ತು' ಎಂದು ಕೆಪಿಸಿಸಿ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಹೇಳಿದ್ದಾರೆ.

'ಅಧ್ಯಕ್ಷರೊಬ್ಬರೇ ಬಂದು ಕೇವಲ ಬಿಜೆಪಿಯ ಧರಣಿನಿರತರನ್ನು ಭೇಟಿಯಾಗುವುದು ಸರಿಯಲ್ಲ. ಇದು ಏಕಮುಖ ಆಗುತ್ತದೆ. ಇದು ಜಂಟಿ ಸಂಸದೀಯ ಸಮಿತಿ ಸದಸ್ಯರಿಗೆ ಮಾಡುತ್ತಿರುವ ಅವಮಾನ ಮತ್ತು ಕರ್ತವ್ಯ ಲೋಪ' ಎಂದು ಮಾಜಿ ಶಾಸಕ ಪ್ರೊ. ರಾಜು ಆಲಗೂರ ಸುದ್ದಿಗಾರರಿಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ಶೋಭಾ ಕರಂದ್ಲಾಜೆ, 'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದ ಜಮೀನು ಜಿಹಾದ್ ನಡೆಯುತ್ತಿದ್ದು, ಇದನ್ನು ಪರಿಶೀಲಿಸಲು ಬರುವಂತೆ ನಾನು ಕೋರಿದ್ದಕ್ಕೆ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷರು ರಾಜ್ಯಕ್ಕೆ ಬರುತ್ತಿದ್ದಾರೆ.

ಜಮೀನು ಕಳೆದುಕೊಳ್ಳುವ ಆತಂಕದಲ್ಲಿ ಇರುವವರು ರಾಜ್ಯಕ್ಕೆ ಬರುತ್ತಿರುವ ಜೆಪಿಸಿ ಅಧ್ಯಕ್ಷರ ಬಳಿ ಬಂದು ತಮ್ಮ ನೋವು, ಅಹವಾಲು ಹೇಳಿಕೊಳ್ಳಬೇಕು
ಶೋಭಾ ಕರಂದ್ಲಾಜೆ,
ಕೇಂದ್ರ ಸಚಿವೆ

ಜಂಟಿ ಸಂಸದೀಯ ಸಮಿತಿ ಹುಬ್ಬಳ್ಳಿ, ವಿಜಯಪುರಕ್ಕೆ ಭೇಟಿ ನೀಡುವುದು ಕಾನೂನು ಬಾಹಿರ. ನೋಟಿಸ್ ನೀಡಲಾದ ಇಲ್ಲಿನ ರೈತರ ಜೊತೆ ಚರ್ಚಿಸಲು ಸಮಿತಿ ರಚಿಸಿಲ್ಲ
ಜಮೀರ್ ಅಹ್ಮದ್ ಖಾನ್
ವಸತಿ ಮತ್ತು ಅಲ್ಪಸಂಖ್ಯಾತ ಅಭಿವೃದ್ಧಿ ಸಚಿವ

ಇದನ್ನು ಕಾಂಗ್ರೆಸ್ ವಿರೋಧಿಸುತ್ತಿರುವುದು ಖಂಡನೀಯ' ಎಂದರು.

'ಜಂಟಿ ಸದನ ಸಮಿತಿಯಲ್ಲಿ ಬಿಜೆಪಿ ಸೇರಿ ಎಲ್ಲ ವಿರೋಧ ಪಕ್ಷಗಳ ಪ್ರತಿನಿಧಿಗಳು ಇದ್ದಾರೆ. ಅಧ್ಯಕ್ಷರ ಜೊತೆ ಬರಬೇಕಾಗಿರುವುದು ಅವರ ಜವಾಬ್ದಾರಿ. ವೋಟ್ ಬ್ಯಾಂಕ್ ರಾಜಕಾರಣ ಮತ್ತು ತುಷ್ಟೀಕರಣದ ಹಿನ್ನೆಲೆಯಲ್ಲಿ ಸಮಿತಿಗೆ ವಿರೋಧ ವ್ಯಕ್ತಪಡಿಸುತ್ತಿರುವುದು ನಿರೀಕ್ಷಿತ' ಎಂದರು.

ಧರಣಿ ಮೂರನೇ ದಿನ: ವಕ್ಫ್ ಕಾಯ್ದೆ ರದ್ದುಗೊಳಿಸುವುದು ಕೋರಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಹೊರಾಂಗಣದಲ್ಲಿ ನಡೆದಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಬುಧವಾರ ಮೂರು ದಿನ ಪೂರೈಸಿತು.



ಧರಣಿಯಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿದರು. ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಬಸನಗೌಡ ಪಾಟೀಲ ಯತ್ನಾಳ, ಶೋಭಾ ಕರಂದ್ಲಾಜೆ, ಸಂಸದ ರಮೇಶ ಜಿಗಜಿಣಗಿ ಇದ್ದಾರೆ ಪ್ರಜಾವಾಣಿ ಚಿತ್ರ

ವಿಧಾನಸೌಧ ಮುತ್ತಿಗೆ: ಸ್ವಾಮೀಜಿ ಬೆದರಿಕೆ

ಕಲಬುರಗಿ: 'ಕೃಷಿಕರ ಜಮೀನು ಸೇರಿ ವಿವಿಧ ಆಸ್ತಿಗಳ ಪಹಣಿಯಲ್ಲಿ ವಕ್ಫ್ ಹೆಸರನ್ನು ನವೆಂಬರ್ 20ರ ಒಳಗೆ ತೆಗೆದುಹಾಕದಿದ್ದರೆ ರಾಜ್ಯವ್ಯಾಪಿ ಹೋರಾಟ ಮಾಡಿ, ವಿಧಾನಸೌಧಕ್ಕೂ ಮುತ್ತಿಗೆ ಹಾಕುತ್ತೇವೆ' ಎಂದು ಬಾಗಲಕೋಟೆಯ ಶ್ರದ್ಧಾನಂದ ಮಠದ ಜಗದೀಶಾನಂದ ಸ್ವಾಮೀಜಿ ಮತ್ತು ಮಕಣಾಪುರ ಮಠದ ಸೋಮೇಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ಜಗದೀಶಾನಂದ ಸ್ವಾಮೀಜಿ, 'ಪ್ರತಿ ಪಹಣಿಯೂ ವಾರಸುದಾರರ ಹೆಸರಿನಲ್ಲಿ ಮಾತ್ರ ಇರಬೇಕು. ಆದಷ್ಟು ಬೇಗನೆ ಇದು ಕಾರ್ಯರೂಪಕ್ಕೆ ಬರಬೇಕು' ಎಂದರು.

ಸೋಮೇಶ್ವರ ಸ್ವಾಮೀಜಿ ಮಾತನಾಡಿ, 'ವಕ್ಫ್ ಮಂಡಳಿ ರದ್ದು ಮಾಡಬೇಕು' ಎಂದು ಒತ್ತಾಯಪಡಿಸಿದರು.

ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಅವರು ಮಾತನಾಡಿ, 'ವಕ್ಫ್ ಮಂಡಳಿಯು ಆಸ್ತಿಯನ್ನು ಹಿಂದಕ್ಕೆ ಕೊಡದೆ ಇದ್ದರೆ ಸ್ವಾಮೀಜಿಗಳ ನೇತೃತ್ವದಲ್ಲಿ ರಕ್ತಕ್ರಾಂತಿ ಆದೀತು' ಎಂದು ಎಚ್ಚರಿಕೆ ನೀಡಿದರು.

'ಸಿದ್ದರಾಮಯ್ಯ 'ಯೂಟರ್ನ್' ಸಿ.ಎಂ'

ಮಡಿಕೇರಿ: 'ವಕ್ಫ್ ಆಸ್ತಿ ಒತ್ತುವರಿದಾರರಿಗೆ ನೀಡಿರುವ ನೋಟಿಸ್ ವಾಪಸ್ ಪಡೆಯುತ್ತೇವೆ ಎಂದು ಹೇಳಿರುವ ಸಿದ್ದರಾಮಯ್ಯ ಅವರು 'ಯೂಟರ್ನ್' ಮುಖ್ಯಮಂತ್ರಿ' ಎಂದು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಟೀಕಿಸಿದರು.

'ಕೇಂದ್ರ ಐ.ಟಿ. ಸೆಲ್‌ಗೆ ಹೆದರಿರುವ ಸಿದ್ದರಾಮಯ್ಯ ನೋಟಿಸ್ ವಾಪಸ್ ಪಡೆಯಲು ನಿರ್ಧರಿಸಿದ್ದಾರೆ. ಇದೊಂದು ಪುಕ್ಕಲು ಸರ್ಕಾರ' ಎಂದು ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

'ಮುಸ್ಲಿಮರನ್ನೆಲ್ಲಾ ಪಾಕಿಸ್ತಾನಕ್ಕೆ ಓಡಿಸುತ್ತೇವೆ ಎಂದು ಬಿಜೆಪಿಯ ಸಿ.ಟಿ.ರವಿ ಪ್ರಚೋದನಕಾರಿಯಾಗಿ ಮಾತನಾಡಿದರೂ ಸರ್ಕಾರ ಅವರ ವಿರುದ್ಧ ಪ್ರಕರಣ ದಾಖಲಿಸಿಲ್ಲ. ಜಿ.ಪರಮೇಶ್ವರ ಅವರು ಗೃಹಸಚಿವರಾಗಲು ನಾಲಾಯಕ್ ಆಗಿದ್ದು, ಕೂಡಲೇ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ 1.25 ಲಕ್ಷ ಎಕರೆ ವಕ್ಫ್ ಆಸ್ತಿ ಇದ್ದು, ಅದರಲ್ಲಿ 23 ಸಾವಿರ ಎಕರೆ ಮಾತ್ರ ವಕ್ಫ್ ಮಂಡಳಿ ಹಿಡಿತದಲ್ಲಿದೆ. ಉಳಿದದ್ದೆಲ್ಲವೂ ಒತ್ತುವರಿಯಾಗಿದೆ. ಇವರಲ್ಲಿ ರಾಜಕಾರಣಿಗಳು ಹಾಗೂ ಮುಸ್ಲಿಮರೂ ಇದ್ದಾರೆ. ನೋಟಿಸ್ ನೀಡಿ ದಾಖಲೆಗಳನ್ನು ಪಡೆಯುವುದೇ ತಪ್ಪು ಎಂದರೆ ಹೇಗೆ? ಎಂದು ಕೇಳಿದರು.

ವಕ್ಫ್ ಆಸ್ತಿ ಪಟ್ಟಿ ಪರಿಶೀಲಿಸಿ, ಮಾಹಿತಿಗೆ ಸೂಚನೆ

ಗುಡಗೇರಿ (ಧಾರವಾಡ ಜಿಲ್ಲೆ): ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಜಿಲ್ಲೆಯ ಗ್ರಾಮಗಳ ವಕ್ಫ್ ಆಸ್ತಿ ಪಟ್ಟಿಯನ್ನು ಗ್ರಾಮ ಪಂಚಾಯಿತಿಗಳಿಗೆ ಕಳಿಸಿ, ಪಂಚಾಯಿತಿಯಲ್ಲಿನ ದಾಖಲೆ ಪರಿಶೀಲಿಸಿ ಮಾಹಿತಿ ನೀಡಲು ಪಿಡಿಒಗಳಿಗೆ ತಿಳಿಸಿದೆ.

ವಕ್ಫ್‌ಗೆ ಸಂಬಂಧಿಸಿದ ಆಸ್ತಿಗಳ (ಮಸೀದಿ, ಮಕಾನ್, ಉರ್ದು ಶಾಲೆ, ಖಬರಸ್ಥಾನ, ದರ್ಗಾ...) ಪಟ್ಟಿಯನ್ನು ಕಳಿಸಲಾಗಿದೆ. ಆಸ್ತಿಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದಾಖಲಾಗಿವೆಯೇ? ಉತಾರ ನೀಡಲಾಗಿದೆಯೇ ಎಂಬ ಮಾಹಿತಿ ನೀಡಲು ಸೂಚಿಸಲಾಗಿದೆ.

'ಇಲಾಖೆಯಿಂದ 8 ಆಸ್ತಿ ಪಟ್ಟಿ (ಆಸ್ತಿ ಸಂಖ್ಯೆ, ಆಸ್ತಿ ವಿಧ...) ಕಳಿಸಿದ್ದರು. ಈ ಪೈಕಿ ಆರು ಆಸ್ತಿಗಳ ಸಂಖ್ಯೆ ಸರಿ ಇದೆ. ಬಾಕಿ ಎರಡರ ಬಗ್ಗೆ ಮಾಹಿತಿ ಇಲ್ಲ. ಈ ಎರಡು ಆಸ್ತಿ ಮಾಹಿತಿ ಆಸ್ತಿ ದಫ್ತರ್‌ನಲ್ಲಿ ದಾಖಲಿರುವುದಿಲ್ಲ ಎಂದು ಷರಾದಲ್ಲಿ ನಮೂದಿಸಿದ್ದೇನೆ' ಎಂದು ಗುಡಗೇರಿ ಪಿಡಿಒ ಬಿ.ಎನ್. ರಾಘವೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರಿನ ಐಷಾರಾಮಿ ಹೋಟೆಲ್‌ಗಳು ವಕ್ಫ್ ಆಸ್ತಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ವಕ್ಫ್ ಮಂಡಳಿಯವರು ಮೊದಲು ಬೆಂಗಳೂರಿನಲ್ಲಿರುವ ಐಷಾರಾಮಿ ಹೋಟೆಲ್‌ಗಳಾದ ವಿಂಡ್ಸರ್ ಮ್ಯಾನರ್, ರ್‍ಯಾಡಿಸನ್ ಬ್ಲೂ, ಏರ್‌ಲೈನ್ಸ್ ಜಾಗವನ್ನು ವಶಕ್ಕೆ ಪಡೆದು 'ವಕ್ಫ್ ಆಸ್ತಿ' ಎಂದು ಫಲಕ ಹಾಕಲಿ. ಆ ಜಾಗಗಳು ಸಾವಿರಾರು ಕೋಟಿ ರೂಪಾಯಿ ಮೌಲ್ಯದ್ದಾಗಿವೆ. ಅದನ್ನು ಬಿಟ್ಟು ರೈತರ ಜಾಗವನ್ನು ಕಬಳಿಸಲು ಬಂದರೆ ಸುಮ್ಮನಿರುವುದಿಲ್ಲ' ಎಂದು ಶಾಸಕ ಪಿ.ರವಿಕುಮಾರ್ ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಮುತ್ತೇಗೆರೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಬಿಜೆಪಿ- ಜೆಡಿಎಸ್ ಅಧಿಕಾರ ಅವಧಿಯಲ್ಲಿ ವಕ್ಫ್ ಆಸ್ತಿಗಳನ್ನು ಗುರುತಿಸಿ ನೋಟಿಸ್ ನೀಡಲಾಗಿತ್ತು. ಮೊಳಕೆ ಹಾಕಿದ್ದೂ ಅವರೇ. ಅದಕ್ಕೆ ನೀರು, ಗೊಬ್ಬರ ಹಾಕಿ ಪೋಷಿಸಿ ಈಗ ನಮ್ಮ ಸರ್ಕಾರದ ಮೇಲೆ ಗೂಬೆ ಕೂರಿಸಲು ಕುತಂತ್ರ ನಡೆಸುತ್ತಿದ್ದಾರೆ. ಇದೊಂದು ರೀತಿಯಲ್ಲಿ ರಾಜಕಾರಣದ ಭಯೋತ್ಪಾದನೆ' ಎಂದರು.

'ಶಾಲಿನಿ ರಜನೀಶ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ವೇಳೆ 26 ಸಾವಿರ ಎಕರೆ ಪ್ರದೇಶವನ್ನು ವಕ್ಫ್ ಆಸ್ತಿಯನ್ನಾಗಿ ಘೋಷಿಸಿದ್ದರೆ ಅವರ ವಿರುದ್ಧವೂ ತನಿಖೆಯಾಗಲಿ. ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ಮಾಡಿರುವ ಅಧಿಸೂಚನೆ ವಾಪಸ್ ಪಡೆಯಬೇಕು' ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸ್ವಾಮೀಜಿ ಪಾದಯಾತ್ರೆ: ಪಹಣಿಯಲ್ಲಿ ವಕ್ಫ್ ಹೆಸರು ರದ್ದು

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ತೊಟ್ನಳ್ಳಿ ಗ್ರಾಮದ ಮಹಾಂತೇಶ್ವರ ಮಠದ ಆಸ್ತಿ ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ನಮೂದು ಆಗಿದ್ದನ್ನು ವಿರೋಧಿಸಿ ತ್ರಿಮೂರ್ತಿ ಶಿವಾಚಾರ್ಯರು ಬುಧವಾರ ಪಾದಯಾತ್ರೆ ನಡೆಸಲು ಮುಂದಾದ ಬೆನ್ನಲ್ಲೇ ಪಹಣಿಯಲ್ಲಿನ ವಕ್ಫ್ ಹೆಸರು ತೆಗೆದು ಹಾಕಲಾಗಿದೆ.

ಮಠಕ್ಕೆ ಸೇರಿದ 5 ಎಕರೆ 24 ಗುಂಟೆ ಜಮೀನಿನ ಪಹಣಿಯಲ್ಲಿ 2018ರಲ್ಲಿ 'ಅಶುರ್‌ಖನ್ನ ವಕ್ಫ್' ಎಂದು ಸೇರ್ಪಡೆಯಾಗಿತ್ತು. ಬಿಜೆಪಿ ಮುಖಂಡರೂ ಇದರ ವಿರುದ್ಧ ಕೆಲ ದಿನಗಳ ಹಿಂದೆ ಪ್ರತಿಭಟಿಸಿದ್ದರು.

ತ್ರಿಮೂರ್ತಿ ಶಿವಾಚಾರ್ಯರು ಮಠ-ಮಂದಿರ, ರೈತರ ಪಹಣಿಗಳಲ್ಲಿರುವ ವಕ್ಫ್ ಮಂಡಳಿ ಹೆಸರು ತೆಗೆಯುವುವಂತೆ ಒತ್ತಾಯಿಸಿ ನೂರಾರು ಬೆಂಬಲಿಗರೊಂದಿಗೆ ಸೇಡಂನ ಉಪವಿಭಾಗಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದರು.

'1974-76ರ ಗೆಜೆಟ್ ಅಧಿಸೂಚನೆಯನ್ನು ರದ್ದುಗೊಳಿಸುವಂತೆ ಒತ್ತಡವಿದೆ. ಮುಖ್ಯಮಂತ್ರಿಗೆ ಜನರ ಪರವಾಗಿ ಮನವಿ ಮಾಡಿ ಚರ್ಚಿಸುತ್ತೇನೆ' ಎಂದು ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಪ್ರತಿಭಟನಕಾರರಿಗೆ ಭರವಸೆ ನೀಡಿದರು.

ವಿಚಾರಣೆ ಎದುರಿಸಿದ ಮುಖ್ಯಮಂತ್ರಿ

ಒಂದನೇ ಪುಟದಿಂದ...

ಇಡೀ ಪ್ರಕರಣದ ಕೇಂದ್ರ ಬಿಂದುವಾಗಿರುವ ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರ ದಾಖಲೆಗಳನ್ನು ಹಿಡಿದಿದ್ದ ಅಧಿಕಾರಿಗಳು, ಆ ಸಂಬಂಧವೂ ವಿವರಣೆ ಪಡೆದರು.

'ಜಮೀನಿನ ಮಾಲೀಕ ಎನ್ನಲಾದ ದೇವರಾಜು ನಿಮಗೆ ಹೇಗೆ ಪರಿಚಯ, ಈ ಜಮೀನಿನ ಡಿನೋಟಿಫೈಗೆ ಪ್ರಭಾವ ಬೀರಿದ್ದೀರಾ, ನಿಮ್ಮ ಬಾಮೈದ ಮಲ್ಲಿಕಾರ್ಜುನ ಸ್ವಾಮಿ 2004ರಲ್ಲಿ ಈ ಜಮೀನು ಖರೀದಿಸಿದ ಮಾಹಿತಿ ಇತ್ತಾ, ಅದಾಗಲೇ ಅಲ್ಲಿ ಮುಡಾ ಬಡಾವಣೆ ನಿರ್ಮಿಸಿದ ಸಂಗತಿ ನಿಮ್ಮ ಗಮನದಲ್ಲಿ ಇತ್ತೇ, ಅನ್ಯಕ್ರಾಂತ ಆದೇಶ ನೀಡಲು ನೀವು ಅಧಿಕಾರಿಗಳ ಪ್ರಭಾವ ಬೀರಿದ್ದೀರಾ' ಎಂಬ ಪ್ರಶ್ನೆಗಳನ್ನು ತನಿಖಾಧಿಕಾರಿಗಳು ಕೇಳಿದರು ಎಂದು ಮೂಲಗಳು ತಿಳಿಸಿವೆ.

ಮುಡಾದಿಂದ 2021ರಲ್ಲಿ ಬಿ.ಎಂ. ಪಾರ್ವತಿ ಅವರಿಗೆ ವಿಜಯನಗರದಲ್ಲಿ ಮಂಜೂರಾದ 14 ಬದಲಿ ನಿವೇಶನಗಳ ಬಗ್ಗೆಯೂ ತನಿಖಾಧಿಕಾರಿಗಳ ತಂಡವು ಪ್ರಶ್ನಿಸಿದೆ. 'ಅಲ್ಲೇ ನಿವೇಶನ ಕೊಡುವಂತೆ ನೀವು ಪ್ರಭಾವ ಬೀರಿದ್ದೀರಾ? ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದೀರಾ' ಎಂದು ತನಿಖಾಧಿಕಾರಿಗಳು ಪ್ರಶ್ನಿಸಿದರು ಎಂದು ಹೇಳಿವೆ.

ವಿಚಾರಣೆ ಮುಕ್ತಾಯದ ಬಳಿಕ ಹೇಳಿಕೆಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿಕೊಂಡ ತನಿಖಾಧಿಕಾರಿಗಳ ತಂಡವು ಅದಕ್ಕೆ ಸಿದ್ದರಾಮಯ್ಯ ಅವರಿಂದ ಸಹಿ ಪಡೆದಿದೆ. ಅಗತ್ಯವಿದ್ದಲ್ಲಿ ಮತ್ತೆ ವಿಚಾರಣೆಗೆ ಕರೆಯುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಪೊಲೀಸ್ ಬಂದೋಬಸ್ತ್, ಮಾಧ್ಯಮಗಳಿಗೂ ನಿರ್ಬಂಧ: ಲೋಕಾಯುಕ್ತ ಕಚೇರಿಯ ಸುತ್ತಮುತ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ವಿಚಾರಣೆಯ ಅವಧಿಯಲ್ಲಿ ಸುತ್ತಲಿನ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು. ಸಮೀಪದಿಂದ ಚಿತ್ರೀಕರಣಕ್ಕೆ ಮಾಧ್ಯಮದವರಿಗೂ ಅವಕಾಶ ನೀಡಲಿಲ್ಲ.



ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಮೈಸೂರು ಲೋಕಾಯುಕ್ತ ಎಸ್‌ಪಿ. ಕಚೇರಿಯಲ್ಲಿ ವಿಚಾರಣೆ ಮುಗಿಸಿ ಕಾನೂನು ಸಲಹೆಗಾರ ಎ.ಎಸ್ ಪೊನ್ನಣ್ಣ ಅವರೊಂದಿಗೆ ಹೊರ ಬಂದ ಕ್ಷಣ ಪ್ರಜಾವಾಣಿ ಚಿತ್ರ: ಹಂಪಾ ನಾಗರಾಜ್

ಇನ್ನಷ್ಟು ಮಂದಿ ವಿಚಾರಣೆ ಶೀಘ್ರ

ತನಿಖಾಧಿಕಾರಿಗಳು ಈವರೆಗೆ ನಾಲ್ವರು ಆರೋಪಿಗಳ ಜೊತೆಗೆ ಪ್ರಕರಣಕ್ಕೆ ಸಂಬಂಧಿಸಿ 8-10 ನಿವೃತ್ತ, ಹಾಲಿ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ. ಸದ್ಯದಲ್ಲಿಯೇ ಪ್ರಕರಣದ ಉಳಿದ ಸಾಕ್ಷಿಗಳನ್ನೂ ವಿಚಾರಣೆಗೆ ಕರೆಯಲಿದ್ದಾರೆ. ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ, ಮುಡಾದ ಹಿಂದಿನ ಆಯುಕ್ತರು ಹಾಗೂ ಅಧ್ಯಕ್ಷರು, ಮುಡಾದ ಕೆಲವು ಸಿಬ್ಬಂದಿ, ಉಪ ನೋಂದಣಾಧಿಕಾರಿಗಳು ಈ ಪಟ್ಟಿಯಲ್ಲಿ ಇದ್ದಾರೆ.

'ಸುಳ್ಳು ಆರೋಪಗಳಿಗೆ ತಕ್ಕ ಉತ್ತರ'

ಮೈಸೂರು: 'ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮೇಲಿನ ಎಲ್ಲ ಸುಳ್ಳು ಆರೋಪಗಳಿಗೆ ಉತ್ತರಿಸಿದ್ದೇನೆ. ಲೋಕಾಯುಕ್ತ ಪೊಲೀಸರ ವಿಚಾರಣೆಯಿಂದ ನನಗೆ ಮುಜುಗರ ಆಗುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಬುಧವಾರ ಲೋಕಾಯುಕ್ತ ವಿಚಾರಣೆ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಲೋಕಾಯುಕ್ತ ಅಧಿಕಾರಿಗಳು ನನ್ನ ಹೇಳಿಕೆಯನ್ನು ರೆಕಾರ್ಡ್ ಮಾಡಿಕೊಂಡಿದ್ದಾರೆ. ಅದನ್ನು ಇಟ್ಟುಕೊಂಡು ಮುಂದಿನ ತನಿಖೆ ನಡೆಸುತ್ತಾರೆ' ಎಂದರು.

'ನಾವು ಮುಡಾಕ್ಕೆ ನಿವೇಶನ ವಾಪಸ್ ನೀಡಿರುವುದು ತಪ್ಪು ಮಾಡಿದ್ದೇವೆ ಎಂದಲ್ಲ. ನನ್ನ ಮೇಲೆ ಸುಳ್ಳು ಆರೋಪ ಮಾಡಿದ್ದರಿಂದ ಬೇಸರಗೊಂಡು ನನ್ನ ಪತ್ನಿ ಆ ತೀರ್ಮಾನ ಮಾಡಿದ್ದಾರೆ. ನ್ಯಾಯಾಲಯದಲ್ಲಿ ಸಾಬೀತಾಗುವವರೆಗೆ ಇದೊಂದು ಆರೋಪವಷ್ಟೇ. ನನಗಿದು ಮಸಿಯಲ್ಲ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿಯಿಂದ ನಡೆದ ಗೋಬ್ಯಾಕ್ ಚಳವಳಿ ಕುರಿತು ಪ್ರತಿಕ್ರಿಯಿಸಿ, 'ಸ್ನೇಹಮಯಿ ಕೃಷ್ಣ ದೂರು ಆಧರಿಸಿ ಅಧಿಕಾರಿಗಳು ನನ್ನನ್ನು ವಿಚಾರಣೆ ನಡೆಸಿದ್ದಾರೆ. ಈಗ ಬಿಜೆಪಿಯವರು ಗೋಬ್ಯಾಕ್ ಎಂದರೆ ಏನರ್ಥ? ಹಾಗಿದ್ದರೆ ಬಿಜೆಪಿಯವರು ತನಿಖೆಯ ವಿರುದ್ಧ ಇದ್ದಾರೆಯೇ' ಎಂದು ಕೇಳಿದರು.

ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎನ್ನುವ ಆಗ್ರಹದ ಬಗ್ಗೆ ಪ್ರತಿಕ್ರಿಯಿಸಿ, 'ಸಿಬಿಐ ಯಾರ ಕೈಯಲ್ಲಿದೆ? ಬಿಜೆಪಿಯವರು ಯಾವ ಪ್ರಕರಣವನ್ನಾದರೂ ಸಿಬಿಐಗೆ ಕೊಟ್ಟಿದ್ದಾರೆಯೇ? ಲೋಕಾಯುಕ್ತ ಮಾಡಿರುವುದು ಯಾರು' ಎಂದು ಪ್ರಶ್ನಿಸಿದರು.

'ಲೋಕಾಯುಕ್ತ ಸ್ವತಂತ್ರವಾಗಿ ತನಿಖೆ ನಡೆಸುವ ಸಂಸ್ಥೆ. ರಾಜ್ಯಪಾಲರು ಲೋಕಾಯುಕ್ತದಿಂದಲೇ ತನಿಖೆ ಮಾಡಿ ಎಂದೇ ತಾನೇ ಹೇಳಿರುವುದು? ಬಿಜೆಪಿಯವರಿಗೆ ಕಾನೂನಿನ ಮೇಲೆ ಗೌರವವಿಲ್ಲ' ಎಂದರು.

ಲೋಕಾಯುಕ್ತರ ಮ್ಯಾಚ್ ಫಿಕ್ಸಿಂಗ್ ಬಗ್ಗೆ ಮಾತನಾಡಿ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವಮಾನಿಸಿದ್ದಾರೆ. ಲೋಕಾಯುಕ್ತರು ಕ್ರಮಕೈಗೊಳ್ಳಬೇಕು
ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ

ಅರಣ್ಯ ಒತ್ತುವರಿ ಹೆಚ್ಚಳ; ಕ್ರಮಕ್ಕೆ ಕೇಂದ್ರ ನಿರ್ದೇಶನ

ಒಂದನೇ ಪುಟದಿಂದ...

ಬೆಳಗಾವಿ ವೃತ್ತದಲ್ಲಿ 2022-23ರಲ್ಲಿ 110 ಹೊಸ ಒತ್ತುವರಿ ಪ್ರಕರಣಗಳು, 2023-24ರಲ್ಲಿ 64 ಹೊಸ ಪ್ರಕರಣಗಳು ಪತ್ತೆ ಆಗಿವೆ. ಧಾರವಾಡ ವೃತ್ತದಲ್ಲಿ 56 ಕಡೆಗಳಲ್ಲಿ ಅರಣ್ಯ ಒತ್ತುವರಿ ಆಗಿದೆ. ಆದರೆ, ಒತ್ತುವರಿ ತಡೆಗೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಇದರಲ್ಲಿ ವೃತ್ತದ ಸಿಸಿಎಫ್, ಡಿಸಿಎಫ್, ಎಸಿಎಫ್ ಅವರ ಲೋಪ ಎದ್ದು ಕಾಣುತ್ತಿದೆ ಎಂದು ಹಣಮಂತ ಅವರು ದೂರಿನಲ್ಲಿ ತಿಳಿಸಿದ್ದರು.

ಅರಣ್ಯಗಳ ಒತ್ತುವರಿಯನ್ನು ಕಾಲಮಿತಿಯಲ್ಲಿ ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ 2001ರಲ್ಲಿ ಆದೇಶಿಸಿದೆ. ಹೊಸ ಒತ್ತುವರಿಗೆ ಅನುವು ಮಾಡಿಕೊಡಬಾರದು ಎಂದು ಪರಿಸರ ಸಚಿವಾಲಯ 2022ರಲ್ಲಿ ಸೂಚಿಸಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿ ನೇತೃತ್ವದ ರಾಜ್ಯ ಮಟ್ಟದ ಸಮಿತಿ ರಚಿಸಬೇಕು.ಒತ್ತುವರಿ ತಡೆಯಲು ವಿಫಲರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಚಿವಾಲಯ ತಾಕೀತು ಮಾಡಿದೆ. ಆದರೆ, ಅಧಿಕಾರಿಗಳು ಒತ್ತುವರಿ ತಡೆಗೆ ಕ್ರಮಕ್ಕೆ ಗೊಂಡಿಲ್ಲ. ಅರಣ್ಯ ಸಚಿವರ ಟಿಪ್ಪಣಿಗೂ ಕಿಮ್ಮತ್ತು ನೀಡಿಲ್ಲ ಎಂದು ದೂರಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 2022ರ ವಾರ್ಷಿಕ ಪ್ರಶಸ್ತಿಗಳು ಪ್ರಕಟ

ಹುಡಗಿ, ಅಗ್ರಹಾರ ಸೇರಿ ಐವರಿಗೆ 'ಗೌರವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ


ಇಂದಿರಾ ಹೆಗ್ಗಡೆ


ರಂಜಾನ್ ದರ್ಗಾ


ತುಂಬಾಡಿ ರಾಮಯ್ಯ


ಅಗ್ರಹಾರ ಕೃಷ್ಣಮೂರ್ತಿ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯ 2022ರ 'ವಾರ್ಷಿಕ ಗೌರವ ಪ್ರಶಸ್ತಿ'ಗೆ ಸಾಹಿತಿಗಳಾದ ಆರ್. ಕೆ. ಹುಡಗಿ, ಅಗ್ರಹಾರ ಕೃಷ್ಣಮೂರ್ತಿ, ಇಂದಿರಾ ಹೆಗ್ಗಡೆ, ರಂಜಾನ್ ದರ್ಗಾ ಹಾಗೂ ತುಂಬಾಡಿ ರಾಮಯ್ಯ ಆಯ್ಕೆಯಾಗಿದ್ದಾರೆ.


ಆರ್‌.ಕೆ. ಹುಡಗಿ

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕುಂದರಾಜ್, 'ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ ಐವರನ್ನು ಗೌರವ ಪ್ರಶಸ್ತಿಗೆ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಬಹುಮಾನ ಒಳಗೊಂಡಿದೆ. ಈ ಬಾರಿ ಪ್ರಶಸ್ತಿಗಳಿಗೆ ವಿಭಾಗವಾರು ಸಾಹಿತಿಗಳನ್ನು ಗುರುತಿಸಿ, ಆಯ್ಕೆ ಮಾಡಲಾಗಿದೆ' ಎಂದು ತಿಳಿಸಿದರು.

'2022ರ 'ಸಾಹಿತ್ಯ ಶ್ರೀ' ಪ್ರಶಸ್ತಿಗೆ ಬಂಜಗೆರೆ ಜಯಪ್ರಕಾಶ್, ರೂಮಿ ಹರೀಶ್, ಎಂ.ಜಿ. ಮಂಜುನಾಥ, ದಾಸನೂರು ಕೂಸಣ್ಣ, ರಾಜಶೇಖರ ಹತಗುಂದಿ, ಎಚ್.ಎನ್.ಆರತಿ, ಸಾರಿಕಾದೇವಿ ಕಾಳಗಿ, ಮಹೇಶ್ ಹರವೆ, ಅನಸೂಯ ಕಾಂಬ್ಳೆ ಹಾಗೂ ಚಲಂ ಹಾಡ್ಲಹಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ. ಸಾಹಿತ್ಯ ಕ್ಷೇತ್ರದಿಂದ ಐವರು, ಸೃಜನೇತರ ಸಾಹಿತ್ಯ ಕ್ಷೇತ್ರದಿಂದ ನಾಲ್ವರು ಹಾಗೂ ಸಾಹಿತ್ಯ ಪರಿಚಾರಿಕೆಗೆ ಸಂಬಂಧಿಸಿದಂತೆ ಒಬ್ಬರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ಒಳಗೊಂಡಿದೆ' ಎಂದರು.

2021ರ ಪುಸ್ತಕ ಬಹುಮಾನಕ್ಕೆ ವಿಮರ್ಶಕರ ಅಭಿಪ್ರಾಯ ಆಧರಿಸಿ 17 ಕೃತಿಗಳನ್ನು ಆಯ್ಕೆ ಮಾಡಲಾಗಿದೆ. ಈ ಬಹುಮಾನವು ತಲಾ ₹25 ಸಾವಿರ ನಗದು ಬಹುಮಾನ ಒಳಗೊಂಡಿದೆ. 2021ರ ವಿವಿಧ ದತ್ತಿ ಬಹುಮಾನಗಳಿಗೆ ಎಂಟು ಕೃತಿಗಳು ಆಯ್ಕೆಯಾಗಿವೆ. ಪ್ರಶಸ್ತಿ ಪ್ರದಾನ ಸಮಾರಂಭವು ಡಿಸೆಂಬರ್ ತಿಂಗಳಲ್ಲಿ ನಡೆಯುವ ಸಾಧ್ಯತೆಯಿದ್ದು, ಸ್ಥಳ ನಿಗದಿಯಾಗಿಲ್ಲ ಎಂದರು.

2021ರ ದತ್ತಿ ಬಹುಮಾನ ಪುರಸ್ಕೃತರು

ಪ್ರಕಾರ	ದತ್ತಿನಿಧಿ ಬಹುಮಾನ	ಕೃತಿಯ ಹೆಸರು	ಲೇಖಕರು
ಕಾವ್ಯ-ಹಸ್ತಪ್ರತಿ	ಚಿ.ಶ್ರೀನಿವಾಸರಾಜು ದತ್ತಿ ಬಹುಮಾನ	ಹದಿನೆಂಟರಿಂದ ಇಪ್ಪತ್ತೆಂಟರ ಕವಿತೆಗಳು	ಅಕ್ಷಯ ಕಾಂತಬೈಲು
ಕಾದಂಬರಿ	ಚದುರಂಗ ದತ್ತಿನಿಧಿ ಬಹುಮಾನ	ಚಪಡ ಇದು ಅಕ್ಷರದ ಪಯಣ	ಶ್ರೀಧರ ಎಚ್.ಜಿ.
ಲಲಿತ ಪ್ರಬಂಧ	ವಿ. ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿ ಬಹುಮಾನ	ಇದು ಬರಿ ಮಣ್ಣಲ್ಲ	ಸಹನಾ ಕಾಂತಬೈಲು
ಜೀವನಚರಿತ್ರೆ	ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ	ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್	ನಾಗ ಎಚ್. ಹುಬ್ಳಿ
ಸಾಹಿತ್ಯ ವಿಮರ್ಶೆ	ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನ	ಬೆಡಗು ಬಿನ್ನಾಣ	ಪ್ರಸಾದಸ್ವಾಮಿ ಎಸ್.
ಅನುವಾದ-1	ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ	ಸೆಬಾಸ್ಟಿಯನ್ & ಸನ್ಸ್	ಸುಮಂಗಲಾ
ಲೇಖಕರ ಮೊದಲ ಸ್ವತಂತ್ರ ಕೃತಿ	ಮಧುರಚೆನ್ನ ದತ್ತಿನಿಧಿ ಬಹುಮಾನ	ಬಯಲಲಿತೇಲುತ ತಾನು	ಅಕ್ಷಯ್ ಪಂಡಿತ್
ವೈಚಾರಿಕ/ಅಂಕಣ ಬರಹ	ಬಿ.ವಿ. ವೀರಭದ್ರಪ್ಪ ದತ್ತಿನಿಧಿ ಬಹುಮಾನ	ಅಸತ್ಯದ ಕೇಡು	ಸುಶಿ ಕಾಡನಕುಪ್ಪೆ

2021ರ ಪುಸ್ತಕ ಬಹುಮಾನ ಪುರಸ್ಕೃತರು

ಪ್ರಕಾರ	ಕೃತಿಯ ಹೆಸರು	ಲೇಖಕ
ಕಾವ್ಯ	ರಾಗಿ ಕಾಳು	ಚೀಮನಹಳ್ಳಿ ರಮೇಶಬಾಬು
ನವ ಕವಿಗಳ ಪ್ರಥಮ ಸಂಕಲನ	ದಡ ಸೇರಿದ ಕನಸು	ಶೈಲೇಶ್ ಕುಮಾರ್
ಕಾದಂಬರಿ	ಚೆನ್ನಭೈರಾದೇವಿ ಕರಿಮೆಣಸಿನ ರಾಣಿಯ ಅಕಳಂಕ ಚರಿತೆ	ಗಜಾನನ ಶರ್ಮ
ಸಣ್ಣ ಕತೆ	ಗುಣಸಾಗರಿ ಮತ್ತು ಇತರ ಕಥೆಗಳು	ಜಿ.ವಿ.ಆನಂದಮೂರ್ತಿ
ನಾಟಕ	ಮಹಾ ಮಹಿಮ ಎಡೆಯೂರು ಸಿದ್ಧಲಿಂಗ ಶಿವಯೋಗಿ	ಬಿ.ಆರ್. ಪೊಲೀಸ್ ಪಾಟೀಲ
ಲಲಿತ ಪ್ರಬಂಧ	ಎಲ್ಲಿಂದಲೋ ಬಂದವರು	ಭಾರತಿ ಬಿ.ವಿ.
ಪ್ರವಾಸ ಸಾಹಿತ್ಯ	ಬುದ್ಧಭಕ್ತರ ನಾಡಿನಲ್ಲಿ	ಎಸ್.ಬಿ. ಪದ್ಮಪ್ರಸಾದ್
ಜೀವನ ಚರಿತ್ರೆ/ಆತ್ಮ ಕಥೆ	ಅಕ್ಕಯ್	ಡೊಮಿನಿಕ್ ಡಿ.
ಸಾಹಿತ್ಯ ವಿಮರ್ಶೆ	ಕಣ್ಣೋಟ	ಎಚ್.ಎಸ್. ಸತ್ಯನಾರಾಯಣ
ಮಕ್ಕಳ ಸಾಹಿತ್ಯ	ವಜ್ರದ ಕಿರೀಟ	ಸಿ.ವಿ. ಶೇಷಾದ್ರಿ ಹೊಳವನಹಳ್ಳಿ
ವಿಜ್ಞಾನ ಸಾಹಿತ್ಯ	ಸೆರೆಂಡಿಪಿಟಿ ವೈದ್ಯಲೋಕದ ಅದ್ಭುತ ಆಕಸ್ಮಿಕಗಳು	ಕಿರಣ್ ವಿ.ಎಸ್.
ಮಾನವಿಕ	ಸಂಕೇತ ವ್ಯಾಕರಣ ಮತ್ತು ಪದಕೋಶ	ಕೆ.ಎಸ್.ನಾಗರಾಜ
ಸಂಶೋಧನೆ	ಚಹರೆಗಳೆಂದರೆ ಗಾಯಗಳೂ ಹೌದು	ಎ.ಎಸ್.ಪ್ರಭಾಕರ
ಅನುವಾದ (ಭಾರತೀಯ ಭಾಷೆಯಿಂದ ಕನ್ನಡಕ್ಕೆ)	ಪರ್ದಾ & ಪಾಲಿಗಮಿ	ದಾದಾಪೀರ್ ಜೈಮನ್
ಅಂಕಣ ಬರಹ/ವೈಚಾರಿಕ ಬರಹ	ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ	ಮುಜಾಫರ್ ಅಸ್ಸಾದಿ
ಸಂಕೀರ್ಣ	ವಚನ ದೀಪಿಕೆ	ಜಿ.ಕೃಷ್ಣಪ್ಪ
ಲೇಖಕರ ಮೊದಲ ಸ್ವತಂತ್ರ ಕೃತಿ	ಊರು ಹೇಳದ ಕಥೆ	ಯಶಸ್ವಿನಿ ಕದ್ರಿ

'ಎಸ್ಪಿಯಿಂದ ಕರ್ತವ್ಯ ಲೋಪ ಆರೋಪ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರು ಲೋಕಾಯುಕ್ತ ಎಸ್.ಪಿ ಟಿ.ಜೆ.ಉದೇಶ್ ಮುಖ್ಯಮಂತ್ರಿ ಅವರನ್ನು ಸರಿಯಾಗಿ ವಿಚಾರಣೆ ನಡೆಸದೇ ಕರ್ತವ್ಯಲೋಪ ಎಸಗಿದ್ದಾರೆ' ಎಂದು ಆರೋಪಿಸಿ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಬುಧವಾರ ಅಂಚೆ ಮೂಲಕ ದೂರು ನೀಡಿದ್ದಾರೆ.

'10ಗಂಟೆಯಿಂದ 12ಗಂಟೆವರೆಗೆ ವಿಚಾರಣೆಗೆ ಹಾಜರಾಗುತ್ತೇನೆ ಎಂದು ಸಿ.ಎಂ ಅವರೇ ಸಮಯ ತಿಳಿಸಿದ್ದರು. ಸಮರ್ಪಕವಾಗಿ ವಿಚಾರಣೆ ನಡೆದಿರುವ ಹಾಗೂ ಲೋಕಾಯುಕ್ತದವರು ಹೈಕೋರ್ಟ್‌ಗೆ ಸತ್ಯಾಂಶದಿಂದ ಕೂಡಿದ ವರದಿ ಸಲ್ಲಿಸುವ ಅನುಮಾನವಿದೆ. ಹೀಗಾಗಿ ನಿಮ್ಮ ನೇತೃತ್ವದಲ್ಲಿ ತನಿಖೆಯನ್ನು ನಡೆಸಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಘರ್ಷಣೆ: ಚಳಕಾಪುರದಲ್ಲಿ ಶಾಂತಿ ಸಭೆ

ಪ್ರಜಾವಾಣಿ ವಾರ್ತೆ

ಬೀದರ್: ಪರಿಶಿಷ್ಟ ಜಾತಿಯವರು ಹಾಗೂ ಲಿಂಗಾಯತರ ನಡುವಿನ ಘರ್ಷಣೆಯಿಂದ ಉದ್ವಿಗ್ನಗೊಂಡಿರುವ ಭಾಲ್ಕಿ ತಾಲ್ಲೂಕಿನ ಚಳಕಾಪುರ ಗ್ರಾಮಕ್ಕೆ ಹಿರಿಯ ಅಧಿಕಾರಿಗಳು ಬುಧವಾರ ಭೇಟಿ ನೀಡಿ, ಶಾಂತಿ ಸಭೆ ನಡೆಸಿದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಪರಿಶಿಷ್ಟರು ಹಾಗೂ ಲಿಂಗಾಯತ ಸಮಾಜದ ಮುಖಂಡರ ಪ್ರತ್ಯೇಕ ಸಭೆಗಳನ್ನು ನಡೆಸಿದರು. ಆನಂತರ ಎರಡೂ ಕಡೆಯವರನ್ನು ಸೇರಿಸಿ ಸಭೆ ನಡೆಸಿದರು.

'ಘಟನೆಗೆ ಕಾರಣರಾದವರ ವಿರುದ್ಧವಷ್ಟೇ ಜಿಲ್ಲಾಡಳಿತ ಕ್ರಮ ಕೈಗೊಳ್ಳಲಿದೆ. ಮುಗ್ಧರು, ಅಮಾಯಕರಿಗೆ ತೊಂದರೆ ಕೊಡುವುದಿಲ್ಲ. ಗ್ರಾಮದಲ್ಲಿ ಶಾಂತಿ ಸ್ಥಾಪನೆಗೆ ಎಲ್ಲರೂ ಸಹಕಾರ ಕೊಡಬೇಕು' ಎಂದು ಅಧಿಕಾರಿಗಳು ಮನವಿ ಮಾಡಿದರು.

ನ.3ರಂದು ಹನುಮಾನ ದೇವರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪರಿಶಿಷ್ಟರು ಹಾಗೂ ಲಿಂಗಾಯತರ ನಡುವೆ ಘರ್ಷಣೆ ನಡೆದಿತ್ತು. ಎರಡೂ ಕಡೆಯವರು ಠಾಣೆಗೆ ದೂರು-ಪ್ರತಿ ದೂರು ಕೊಟ್ಟಿದ್ದಾರೆ. 70ಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿದ್ದಾರೆ. ಕರ್ತವ್ಯಲೋಪಕ್ಕಾಗಿ ಪಿಎಸ್‌ಐ ಹಾಗೂ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಮಂಗಳವಾರ ಅಮಾನತುಗೊಳಿಸಲಾಗಿತ್ತು.

ಎಸ್‌ಸಿ ವಿದ್ಯಾರ್ಥಿಗಳಿಗೆ ₹ 25 ಲಕ್ಷ

ಒಂದನೇ ಪುಟದಿಂದ...

ಐಐಟಿ, ಐಐಎಂ, ಐಐಎಸ್‌ಸಿ, ಎನ್‌ಐಟಿ ಮುಂತಾದ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಬಾರಿ ನೀಡಲಾಗುವ ಪ್ರೋತ್ಸಾಹಕ ಧನವನ್ನು ₹1 ಲಕ್ಷದಿಂದ ₹2 ಲಕ್ಷಕ್ಕೆ ಹೆಚ್ಚಿಸಿ 2018ರಲ್ಲಿಯೇ ಆದೇಶ ಹೊರಡಿಸಲಾಗಿತ್ತು.

ಆಡಳಿತ ಮಂಡಳಿಯ ಕೋಟಾದಡಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕ ಮತ್ತು ಪ್ರೋತ್ಸಾಹಧನ ನೀಡುವ ಅಂಶವನ್ನೂ ಸೇರಿಸಿ ಅ. 24ರಂದು ಆದೇಶ ಹೊರಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ಪಿಯುಸಿ ಪರೀಕ್ಷೆಯಲ್ಲಿ ಶೇ 95ಕ್ಕೂ ಹೆಚ್ಚು ಅಂಕ ಪಡೆದು, ನೀಟ್‌ನಲ್ಲಿ ಅರ್ಹತೆ ಪಡೆದರೂ ಆಡಳಿತ ಮಂಡಳಿಯ ಕೋಟಾದಡಿ ಕಾಲೇಜು ಶುಲ್ಕ ಕಟ್ಟಲು ಸಾಧ್ಯವಾಗದೆ ಕೆಲವು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈ ಬಗ್ಗೆ ಅಲವತ್ತುಕೊಂಡಿದ್ದ ವಿದ್ಯಾರ್ಥಿಗಳು, ಕಾಲೇಜು ಶುಲ್ಕ ಕಟ್ಟಲು ಹಣಕಾಸಿನ ನೆರವು ನೀಡುವಂತೆ ಸಮಾಜ ಕಲ್ಯಾಣ ಸಚಿವರು ಮತ್ತು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು. ಈ ಮನವಿಗಳ ಹಿನ್ನೆಲೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದೂ ಮೂಲಗಳು ಹೇಳಿವೆ.

ಚಾಲಕಗೆ ಹೃದಯಾಘಾತ: ತಪ್ಪಿದ ಅನಾಹುತ

ಬೆಂಗಳೂರು: ಬಿಎಂಟಿಸಿ ಬಸ್ ಚಾಲನೆ ಮಾಡುತ್ತಿದ್ದಾಗಲೇ ಬುಧವಾರ ಚಾಲಕ ಹೃದಯಾಘಾತದಿಂದ ಮೃತಪಟ್ಟಿದ್ದು, ಕೂಡಲೇ ಎಚ್ಚೆತ್ತ ನಿರ್ವಾಹಕ ಬಸ್ ನಿಲ್ಲಿಸಿ ಅಪಘಾತವಾಗುವುದನ್ನು ತಪ್ಪಿಸಿದ್ದಾರೆ.

ಹಾಸನ ನಿವಾಸಿ ಕಿರಣ್ ಕುಮಾರ್ (38) ಮೃತಪಟ್ಟವರು. ನೆಲಮಂಗಲದಿಂದ ದಾಸನಪುರ ಘಟಕಕ್ಕೆ ತೆರಳುತ್ತಿದ್ದು, ಬಸ್ ಬಿನ್ನಮಂಗಲ ಬಸ್ ನಿಲ್ದಾಣದ ಬಳಿ ತಲುಪಿದಾಗ ಚಾಲಕನಿಗೆ ಹೃದಯಾಘಾತವಾಗಿ ಅವರು ಸೀಟ್‌ನಿಂದ ಕುಸಿದು ಬಿದ್ದರು. ನಿರ್ವಾಹಕ ಓಬಳೇಶ್ ಅವರು ಕೂಡಲೇ ಚಾಲಕನ ಸೀಟಿನತ್ತ ಮುನ್ನುಗ್ಗಿ ಬ್ರೇಕ್ ಹಾಕಿ ವಾಹನ ನಿಯಂತ್ರಿಸಿದರು.

ಕಿರಣ್ ಕುಮಾರ್ ಅವರನ್ನು ಅಲ್ಲೇ ಹತ್ತಿರವಿದ್ದ ವಿ.ಪಿ. ಮ್ಯಾಗ್ನಸ್ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಿರ್ಮಲ ತುಂಗಭದ್ರಾ ಅಭಿಯಾನ • ಶೃಂಗೇರಿಯಿಂದ ಆರಂಭ

ನದಿಗಳ ರಕ್ಷಣೆಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ಕಲುಷಿತಗೊಂಡಿರುವ ತುಂಗಾ ಮತ್ತು ಭದ್ರಾ ನದಿಗಳ ಪಾವಿತ್ರ್ಯವನ್ನು ಮರಳಿಸುವ ಉದ್ದೇಶದಿಂದ ಆರಂಭಿಸಿರುವ ತುಂಗಭದ್ರಾ ಅಭಿಯಾನದ ಅಂಗವಾಗಿ ಪಾದಯಾತ್ರೆಗೆ ಶೃಂಗೇರಿಯಿಂದ ಬುಧವಾರ ಚಾಲನೆ ನೀಡಲಾಯಿತು.

ಮೊದಲ ಹಂತದ ಈ ಪಾದಯಾತ್ರೆಯು 200 ಕಿ.ಮೀ. ವರೆಗೆ ನಡೆಯಲಿದ್ದು, ನ. 14ರಂದು ಹರಿಹರದಲ್ಲಿ ಮುಕ್ತಾಯವಾಗಲಿದೆ. ನ. 15ರಂದು ಅಲ್ಲಿ ಬಹಿರಂಗ ಸಭೆ ಮೂಲಕ ಸಮಾರೋಪಗೊಳ್ಳಲಿದೆ. 2ನೇ ಹಂತದಲ್ಲಿ ಹರಿಹರದಿಂದ ಕೊಪ್ಪಳ ಜಿಲ್ಲೆ ಕಿಷ್ಕಿಂಧೆ ತನಕ ಪಾದಯಾತ್ರೆ ಡಿಸೆಂಬರ್‌ನಲ್ಲಿ ನಡೆಯಲಿದೆ.

ಶೃಂಗೇರಿ ಶಾರದಾ ಪೀಠದ ಭಾರತೀತೀರ್ಥ ಸ್ವಾಮೀಜಿ ಅವರು ಶಾರದಾ ಮಠದ ನರಸಿಂಹವನದ ಅಧಿಷ್ಠಾನ ಮಂದಿರದ ಸಮೀಪ ದೀಪ ಬೆಳಗಿಸುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, 'ಎಲ್ಲಾ ನದಿಗಳ ಉಳಿವಿಗೆ ತಾಯಿ ಶಾರದೆಯ ಆಶೀರ್ವಾದವಿದೆ. ನದಿಗಳ ಪಾವಿತ್ರ್ಯಕ್ಕೆ ಧಕ್ಕೆಯಾಗದಂತೆ ಎಲ್ಲರೂ ನೋಡಿಕೊಳ್ಳಬೇಕು' ಎಂದರು.

ಪರ್ಯಾವರಣ ಟ್ರಸ್ಟ್ ಅಧ್ಯಕ್ಷ ಬಿ.ಎಂ. ಕುಮಾರಸ್ವಾಮಿ ಮಾತನಾಡಿ, 'ನದಿಗಳು ದಿನದಿಂದ ದಿನಕ್ಕೆ ಕಲುಷಿತಗೊಳ್ಳುವುದು ಹೆಚ್ಚಾಗುತ್ತಿದೆ. ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಅದನ್ನು ತಪ್ಪಿಸಲು ಜಲ ಜಾಗೃತಿ ಮತ್ತು ಜನ ಜಾಗೃತಿ ಮೂಡಿಸಲು ಶೃಂಗೇರಿಯಿಂದ ಆರಂಭವಾಗಿರುವ ಪಾದಯಾತ್ರೆ 400 ಕಿಲೋ ಮೀಟರ್ ಕ್ರಮಿಸಿ ಕಿಷ್ಕಿಂದೆಗೆ ತಲುಪಲಿದೆ' ಎಂದು ಹೇಳಿದರು.

ರಾಷ್ಟ್ರೀಯ ಸ್ವಾಭಿಮಾನ ಆಂದೋಲನದ ಸಂಚಾಲಕ ಮೀರಾಪುರ ಬಸವರಾಜ ಪಾಟೀಲ ಮಾತನಾಡಿ, 'ಜನರಲ್ಲಿ ಜಲ ಜಾಗೃತಿ ಮೂಡಿಸುವ ಉದ್ದೇಶದಿಂದ 24 ರಾಜ್ಯಗಳಲ್ಲಿ ಒಟ್ಟು 23,000 ಕಿಲೋ ಮೀಟರ್ ಪಾದಯಾತ್ರೆ ನಡೆಸಿದ್ದೇವೆ. 18 ರಾಜ್ಯಗಳ ಜನರಲ್ಲಿ ಜಲ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದೇವೆ. ಸ್ಥಳೀಯ ಮಠಾಧೀಶರು ಹಾಗೂ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಮುಂದಿನ ದಿನಗಳಲ್ಲಿ ನದಿಗಳ ಪರಿಶುದ್ಧಿಗಾಗಿ ನಿರಂತರ ಹೋರಾಟ ಮಾಡುತ್ತೇವೆ' ಎಂದರು.


ನಿರ್ಮಲ ತುಂಗಭದ್ರಾ ಅಭಿಯಾನದ ಪಾದಯಾತ್ರೆಗೆ ಶೃಂಗೇರಿ ಶಾರದಾ ಪೀಠದ ಭಾರತೀತೀರ್ಥ ಸ್ವಾಮೀಜಿ ಚಾಲನೆ ನೀಡಿದರು

ಮೊಮ್ಮಗನಿಂದಾಗಿ ಕಣ್ಣೀರು ಹಾಕುತ್ತಿರುವ ಹೆಣ್ಣು ಮಕ್ಕಳಿಗಾಗಿ ಅಳಿ, ಗೌಡ್ರೆ: ಸಿದ್ದರಾಮಯ್ಯ ವಾಗ್ದಾಳಿ

ಅಳುವುದೇ ಗೌಡರ ಪರಂಪರೆ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ಚನ್ನಪಟ್ಟಣದಲ್ಲಿ ಜೆಡಿಎಸ್‌ಗೆ ಸೋಲಿನ ಭಯ ಕಾಡುತ್ತಿದೆ. ಅದಕ್ಕೆ ಅಪ್ಪ-ಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ಅಳುವುದೇ ಅವರ ಪರಂಪರೆ. ಅದಕ್ಕೆ ನೀನು ಅಳೋಕೆ ಶುರು ಮಾಡು ಎಂದು ನಿಖಿಲ್‌ಗೆ ಹೇಳಿ ಕೊಟ್ಟಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ಉಪ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ತಾಲ್ಲೂಕಿನ ಕೂಡ್ಲೂರು ಸೇರಿದಂತೆ ವಿವಿಧೆಡೆ ಬುಧವಾರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಅಳುವ ಗಂಡಸನ್ನು ನಂಬಬಾರದು ಅಂತ ಗಾದೆಯೇ ಇದೆ. ಅಳುವ ಗಂಡಸು ಕುಮಾರಸ್ವಾಮಿಯನ್ನು ಯಾವತ್ತೂ ನಂಬಬೇಡಿ’ ಎಂದು ಹೇಳಿದರು.

‘ದೇವೇಗೌಡರು ಕಟುಕರಿಗೆ ಕಣ್ಣೀರು ಬರಲ್ಲ ಅಂದಿದ್ದಾರೆ. ಹಾಸನದಲ್ಲಿ ಅವರ ಮೊಮ್ಮಗನಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಣ್ಣುಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ಅಲ್ಲಿ ಹೋಗಿ ಅತ್ತಿ ಗೌಡ್ರೆ. ಇಲ್ಲಿ ಅತ್ತರೆ ಏನು ಪ್ರಯೋಜನ?’ ಎಂದರು.

‘ಮಂಡ್ಯ ಮತ್ತು ರಾಮನಗರದಲ್ಲಿ ಸೋತಿದ್ದ ನಿಖಿಲ್‌ನನ್ನು ಇಲ್ಲಿಗೆ ಕರೆ ತಂದು ನಿಲ್ಲಿಸಿದ್ದಾರೆ. ಏನಾದರೂ ಮಾಡಿ ಮೊಮ್ಮಗನನ್ನು ಗೆಲ್ಲಿಸಲೇಬೇಕೆಂದು ಮಾಜಿ ಪ್ರಧಾನಿ ಇಲ್ಲೇ ಠಿಕಾಣಿ ಹೂಡಿದ್ದಾರೆ. ಅವರೇನೇ ಮಾಡಿದರೂ ಯೋಗೇಶ್ವರ್ ಗೆಲ್ಲುವುದು ಖಚಿತ’ ಎಂದು ಪಕ್ಕದಲ್ಲಿದ್ದ ಯೋಗೇಶ್ವರ್ ಬೆನ್ನು ತಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

‘ಯೋಗೇಶ್ವರ್‌ಗೆ ಜನರ ಕಷ್ಟ ಸುಖ ಗೊತ್ತು. ದೇವೇಗೌಡರ ಕುಟುಂಬಕ್ಕೆ ಭಾವನಾತ್ಮಕವಾಗಿ ಮಾತನಾಡಿ ಅಳೋದು ಮಾತ್ರ ಗೊತ್ತು. ಅತ್ತರೆ ಜನರ ಸಮಸ್ಯೆ ಬಗೆಹರಿಯುತ್ತಾ? ಕೆರೆಗಳು ತುಂಬಿ, ಜಮೀನಿಗೆ ನೀರು ಹರಿಯುತ್ತಾ? ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೇ ₹500 ಕೋಟಿಗೂ ಹೆಚ್ಚು ಹಣ ಕೊಟ್ಟಿದ್ದೇನೆ. ಯೋಗೇಶ್ವರ್ ಗೆದ್ದ ಮೇಲೆ ಮತ್ತಷ್ಟು ಕೊಡುವೆ. ಇನ್ನೂ ಮೂರೂವರೆ ವರ್ಷ ನಮ್ಮ ಸರ್ಕಾರ ಇರುತ್ತದೆಯೇ ಹೊರತು ಕುಮಾರಸ್ವಾಮಿ ಸರ್ಕಾರ ಬರಲ್ಲ’ ಎಂದು ಹೇಳಿದರು.

ಸಚಿವರಾದ ಎಚ್‌.ಸಿ.ಮಹದೇವಪ್ಪ, ಚಲುವರಾಯಸ್ವಾಮಿ, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಕೆ.ವೆಂಕಟೇಶ್, ಡಾ.ಎಂ.ಸಿ.ಸುಧಾಕರ್, ಶಾಸಕರಾದ ಎಚ್‌.ಸಿ.ಬಾಲಕೃಷ್ಣ, ಕೆ.ಎಂ. ಉದಯ್, ಡಾ.ಎಚ್‌.ಡಿ.ರಂಗನಾಥ್, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಮಾಜಿ ಸಂಸದ ಡಿ.ಕೆ.ಸುರೇಶ್, ಶಿವರಾಮೇಗೌಡ, ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಸೇರಿದಂತೆ ಹಲವರು ಮುಖ್ಯಮಂತ್ರಿ ಪ್ರಚಾರಕ್ಕೆ ಸಾಥ್ ನೀಡಿದರು.



ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರವಾಗಿ ಚನ್ನಪಟ್ಟಣ ತಾಲ್ಲೂಕಿನ ಬೇವೂರಿನಲ್ಲಿ ಬುಧವಾರ ನಡೆದ ಪ್ರಚಾರ ಸಭೆಯಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದ್ದ ಕಾರ್ಯಕರ್ತರಿಗೆ ನಮಸ್ಕರಿಸಿದರು



ನಿಖಿಲ್ ಕುಮಾರಸ್ವಾಮಿ ಪರವಾಗಿ, ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಬಿಜೆಪಿಯ ಮಾಜಿ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಅವರು ತಾಲ್ಲೂಕಿನ ಸೋಗಾಲ ಗ್ರಾಮದಲ್ಲಿ ಪ್ರಚಾರ ನಡೆಸಿದರು

ಸಿ.ಡಿ ಸಹೋದರರಿಗೆ ಸಿ.ಡಿ, ವಿಡಿಯೊ, ಆಡಿಯೊ ಮಾಡುವುದೇ ಕೆಲಸ. ಹಾಸನದಲ್ಲಿ ಮಾಡಿದ ಷಡ್ಯಂತ್ರವನ್ನು ಇಲ್ಲೂ ಮಾಡುತ್ತಿದ್ದಾರೆ
ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಕಾಂಗ್ರೆಸ್ ಸರ್ಕಾರ ನಿರಂತರವಾಗಿ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಜನರ ಹಿತವನ್ನು ಮರೆತಿದೆ. ಉಪ ಚುನಾವಣೆಯಲ್ಲಿ ನಿಖಿಲ್ ಅವರನ್ನು ಗೆಲ್ಲಿಸಿ
ಬಿ.ಎಸ್‌.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

‘ರಾಹುಲ್, ಪ್ರಿಯಾಂಕಾ ಯಾವ ಟಾಕೀಸ್?’

ಚನ್ನಪಟ್ಟಣ (ರಾಮನಗರ): ‘ಉತ್ತರ ಪ್ರದೇಶದ ಅಮೇಠಿಯಿಂದ ವಯನಾಡಿಗೆ ಓಡಿಬಂದ ರಾಹುಲ್ ಗಾಂಧಿ ಅವರದ್ದು ಯಾವ ಟಾಕೀಸ್? ಸಹೋದರ ತೆರವು ಮಾಡಿದ ಕ್ಷೇತ್ರಕ್ಕೆ ಪ್ರಿಯಾಂಕಾ ಗಾಂಧಿ ಏಕೆ ಬಂದರು? ಅವರದ್ದು ಯಾವ ಟಾಕೀಸ್? ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಸತ್ತು ಬಿದ್ದಿದೆ. ಅದನ್ನು ಸರಿ ಮಾಡಿಕೊಳ್ಳುವುದು ಬಿಟ್ಟು ಪಕ್ಕದ ತಟ್ಟೆ ನೋಡುವುದನ್ನು ಬಿಡಿ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು, ತಮ್ಮನ್ನು ‘ಟೂರಿಂಗ್ ಟಾಕೀಸ್’ ಎಂದ ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದರು.

ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಪರವಾಗಿ ತಾಲ್ಲೂಕಿನ ಸೋಗಾಲ ಗ್ರಾಮದಲ್ಲಿ ಬುಧವಾರ ಬಿಜೆಪಿಯ ಮಾಜಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರೊಂದಿಗೆ ಜಂಟಿಯಾಗಿ ಪ್ರಚಾರ ನಡೆಸಿದ ಅವರು, ಎದುರಾಳಿಗಳ ಮಾತಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

‘ಮಾತಲ್ಲಷ್ಟೇ ಭಗೀರಥ; ಕೃತಿಯಲ್ಲಿ ಅಲ್ಲ’

‘ತಾಲ್ಲೂಕಿನ 17 ಕೆರೆಗಳಿಗೆ ನೀರು ತುಂಬಿಸಿದ್ದೇನೆ ಎನ್ನುವ ವ್ಯಕ್ತಿ ಬಾಯಿ ಮಾತಿನಲ್ಲಿ ಮಾತ್ರ ಭಗೀರಥ. ಕೃತಿಯಲ್ಲಿ ಅಲ್ಲ. ನಾನು ಮತ್ತು ಸದಾನಂದ ಗೌಡ ಕೃತಿಯಲ್ಲಿ ಮಾಡಿ ತೋರಿಸಿದ್ದೇವೆ. ಸುಳ್ಳು ಹೇಳಿಕೊಂಡು ತಿರುಗಬಾರದು. ನೀರು ತುಂಬಿಸಲು ಮೂಲ ಕಾರಣವಾದ ಇಗ್ಗಲೂರು ಅಣೆಕಟ್ಟು ನಿರ್ಮಿಸಿದವರು ಯಾರಪ್ಪಾ?’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರು ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ಅವರನ್ನು ಪ್ರಶ್ನಿಸಿದರು.

ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಪರವಾಗಿ ತಾಲ್ಲೂಕಿನ ತಿಟ್ಟಮಾರನಹಳ್ಳಿ ಸೇರಿದಂತೆ ವಿವಿಧೆಡೆ ಪ್ರಚಾರ ನಡೆಸಿದರು.

‘ಯೋಗೇಶ್ವರ್ ಏನೂ ಮಾಡಲಿಲ್ಲ. ಹಿಂದೆ ಕಾಂಗ್ರೆಸ್‌ನಿಂದ ಗೆದ್ದಿದ್ದ ಯೋಗೇಶ್ವರ್ ಯಾಕೆ ಆ ಕೆಲಸ ಮಾಡಿಸಲಿಲ್ಲ’ ಎಂದು ಕಿಡಿಕಾರಿದರು.

ಸುದ್ದಿ 2 ನಿಮಿಷ

ಮಹಾ ಮೂರ್ಖರ ಕೂಟ: ಯೋಗಿ

ಮುಂಬೈ: ‘ಕಾಂಗ್ರೆಸ್ ನೇತೃತ್ವದ ಮಹಾ ವಿಕಾಸ್ ಆಘಾಡಿಯನ್ನು ‘ಮಹಾ ಮೂರ್ಖರ ಕೂಟ’ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಟೀಕಿಸಿದ್ದಾರೆ.

ಮಹಾರಾಷ್ಟ್ರದ ವಿದರ್ಭ ಪ್ರದೇಶದ ವಾಶಿಮ್‌ನಲ್ಲಿ ಬುಧವಾರ ಚುನಾವಣಾ ಪ್ರಚಾರ ನಡೆಸಿದ ಅವರು, ‘ಮಹಾ ವಿಕಾಸ್ ಆಘಾಡಿಯನ್ನು ನಾನು ಮಹಾ ಮೂರ್ಖರ ಕೂಟ ಎನ್ನುವೆ. ಏಕೆಂದರೆ ಅವರು ಧರ್ಮ ಮತ್ತು ದೇಶದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ಕಾಂಗ್ರೆಸ್ ಎಂದಾದರೂ ಭಾರತ ಹಾಗೂ ಭಾರತೀಯತೆಯ ಬಗ್ಗೆ ಪ್ರಾಮಾಣಿಕವಾಗಿ ಯೋಚಿಸಿದೆಯೇ’ ಎಂದು ಪ್ರಶ್ನಿಸಿದರು.

ಒಗ್ಗಟ್ಟಾಗಿರಿ: ಛತ್ರಪತಿ ಶಿವಾಜಿ ಮಹಾರಾಜರ ‘ಒಗ್ಗಟ್ಟಾಗಿರಿ’ ಎಂಬ ಸಂದೇಶವು ಇಂದಿಗೂ ಪ್ರಸ್ತುತವಾಗಿದೆ ಎಂದೂ ಯೋಗಿ ಆದಿತ್ಯನಾಥ ಹೇಳಿದರು.

‘ಶಿವಾಜಿ ಮಹಾರಾಜರು ನಮ್ಮೆಲ್ಲರನ್ನೂ ಒಂದುಗೂಡಿಸಿದರು. ಅವರಿಂದ ಸ್ಫೂರ್ತಿ ಪಡೆದು, ಛತ್ರಪತಿಯ ಸಂದೇಶವನ್ನು ಪಾಲಿಸುವಂತೆ ನಿಮ್ಮೆಲ್ಲರನ್ನೂ ಪದೇ ಪದೇ ಒತ್ತಾಯಿಸುವೆ’ ಎಂದರು.



‘ನಾವು ರೆಬಲ್ ಒಕ್ಕಲಿಗರಲ್ಲ’

ಮಂಡ್ಯ: ‘ನಾವು ರೆಬಲ್ ಒಕ್ಕಲಿಗರಲ್ಲ. ನಿಜವಾದ ಒಕ್ಕಲಿಗರು. ಆದರೆ, ಚುನಾವಣೆಗಳಲ್ಲಿ ಜನರು ನಮ್ಮನ್ನು ಏಕೆ ಬೆಂಬಲಿಸುವುದಿಲ್ಲ ಎಂಬುದು ಅರ್ಥವಾಗದ ಪ್ರಶ್ನೆಯಾಗಿದೆ’ ಎಂದು ಶಾಸಕ ಪಿ.ರವಿಕುಮಾರ್ ಹೇಳಿದರು.

ತಾಲ್ಲೂಕಿನ ಮುತ್ತೇಗೆರೆ ಗ್ರಾಮದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ‘ಚನ್ನಪಟ್ಟಣದಲ್ಲಿ ಕಳೆದ ಬಾರಿ ಕುಮಾರಸ್ವಾಮಿ ಗೆದ್ದಿದ್ದರು. ಆದರೆ, ಆ ಕ್ಷೇತ್ರದಲ್ಲಿ ಒಂದು ರಸ್ತೆಯೂ ಸರಿಯಾಗಿಲ್ಲ. ಹೀಗಾಗಿಯೇ ನಿಖಿಲ್ ಮೊನ್ನೆ ಬೈಕ್‌ನಲ್ಲಿ ಬಿದ್ದಿದ್ದು’ ಎಂದು ವ್ಯಂಗ್ಯವಾಡಿದರು.

ಸಾವಿನ ಭಾಗ್ಯ ಕೊಟ್ಟ ಕಾಂಗ್ರೆಸ್: ಅಶೋಕ

ಸಂಡೂರಿನಲ್ಲಿ ಬಿಜೆಪಿ ಪರ ಪ್ರಚಾರ ನಡೆಸಿದ ವಿರೋಧ ಪಕ್ಷದ ನಾಯಕ

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ): ‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಸರ್ಕಾರಿ ನೌಕರರಿಗೆ ಸಾವಿನ ಭಾಗ್ಯ ಕೊಟ್ಟಿದೆ. ಲಂಚ ಕೊಡಿ, ಇಲ್ಲ ನೇಣು ಹಾಕಿಕೊಳ್ಳಿಯೆಂದು ಹೇಳಿದಂತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ವ್ಯಂಗ್ಯವಾಡಿದರು.

ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತ ಪರ ಕಮತ್ತೂರು ಸೇರಿ ಹಲವು ಕಡೆ ಬುಧವಾರ ಪ್ರಚಾರ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು,‘ವಾಲ್ಮೀಕಿ ಹಗರಣದ ಕುರಿತು ನಾನು ಅಧಿವೇಶನದಲ್ಲಿ ಪ್ರಶ್ನಿಸಿದಾಗ ಮುಖ್ಯಮಂತ್ರಿ ಹಗರಣ ಒಪ್ಪಿಕೊಂಡಿದ್ದರು. ಆ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಹಣ ವಾಪಸ್ ಬಂತು. ಅದೇ ರೀತಿ ರಾಜ್ಯದಲ್ಲಿ ಅಧಿಕಾರಿಗಳ ಸರಣಿ ಆತ್ಮಹತ್ಯೆ ನಡೆಯುತ್ತಿದೆ’ ಎಂದರು.

‘ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಅಧಿಕಾರಿಗಳು ಕಾಂಗ್ರೆಸ್ ಪರ ಕೆಲಸ ಮಾಡುತ್ತಿರುವುದು ಗೊತ್ತಾಗುತ್ತಿದೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಪ್ರಚಾರ ಮಾಡುತ್ತಿದ್ದಾರೆ. ಸರ್ಕಾರಿ ಯಂತ್ರದ ನೇರ ದುರುಪಯೋಗವಾಗುತ್ತಿದೆ. ಈ ಬಗ್ಗೆ ನವೆಂಬರ್ 8ರಂದು ಚುನಾವಣಾ ಆಯೋಗಕ್ಕೆ ಖುದ್ದು ದೂರು ಸಲ್ಲಿಸುವೆ’ ಎಂದು ಅವರು ತಿಳಿಸಿದರು.

ವಿಜಯೇಂದ್ರ ವಿರುದ್ಧ ಹೇಳಿಕೆ ನೀಡುತ್ತಿರುವ ರಮೇಶ ಜಾರಕಿಹೊಳಿ ಮತ್ತು ಬಸನಗೌಡ ಪಾಟೀಲ ಯತ್ನಾಳ ಅವರ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅಶೋಕ, ‘ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ನಡೆದಿದೆ’ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನು ಅವರ ಪಕ್ಷದ ಶಾಸಕರೇ ಟೀಕಿಸುತ್ತಿದ್ದಾರೆ. ಇಷ್ಟಾದರೂ ಯಾವುದೇ ಕ್ರಮ ಕೈಗೊಂಡಿಲ್ಲ
ಜಿ.ಸಿ ಚಂದ್ರಶೇಖರ್, ರಾಜ್ಯಸಭಾ ಸದಸ್ಯ



ಸಂಡೂರು ಕ್ಷೇತ್ರದ ಕಮತ್ತೂರು ಗ್ರಾಮದಲ್ಲಿ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಬುಧವಾರ ಪ್ರಚಾರ ನಡೆಸಿದರು

ಮುನಿಸಿಕೊಂಡವರ ಸೆಳೆಯಲು ಪ್ರಯತ್ನ

ಸಂಡೂರು ಕ್ಷೇತ್ರದಲ್ಲಿ ಮುನಿಸಿಕೊಂಡವರನ್ನು ಮತ್ತು ರಾಜಕೀಯದಿಂದ ದೂರವುಳಿದವರನ್ನು ಸೆಳೆಯಲು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಪ್ರಯತ್ನ ನಡೆಸಿದ್ದಾರೆ.

2023ರ ಚುನಾವಣೆಯ ಬಿಜೆಪಿ ಪರಾಜಿತ ಅಭ್ಯರ್ಥಿಯನ್ನು ಕರೆತರಲು ಕಾಂಗ್ರೆಸ್ ಕಸರತ್ತು ನಡೆಸುತ್ತಿದೆ. ಜತೆಗೆ, ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿರುವ ಬಿಜೆಪಿ ನಾಯಕ ಕಾರ್ತಿಕೇಯ ಘೋರ್ಪಡೆ ಅವರ ಬೆಂಬಲ ಪಡೆಯಲು ಕಾಂಗ್ರೆಸ್ ಪ್ರಯತ್ನ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸಂತೋಷ್ ಲಾಡ್, ‘ಘೋರ್ಪಡೆ ವಂಶಸ್ಥರನ್ನು ನಾನು ರಾಜಕೀಯವಾಗಿ ಎದುರಿಸಿರಬಹುದು. ಆದರೆ, ಅವರ ಬಗ್ಗೆ ನಾನು ಒಂದು ಮಾತನ್ನೂ ಹೇಳಿಲ್ಲ. ಎಂ.ವೈ ಘೋರ್ಪಡೆಯವರು ಈ ಭಾಗಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಕಾರ್ತಿಕೇಯ ಘೋರ್ಪಡೆ ತಟಸ್ಥರಾಗಿ ಉಳಿದಿದ್ದಾರೆ ಎಂದರೆ ಅದು ನಮಗೆ ಸಹಾಯವಾದಂತೆ’ ಎಂದು ಸಚಿವ ಸಂತೋಷ ಲಾಡ್ ತಿಳಿಸಿದರು.

ಸಂಡೂರಿಗೆ ಇಂದು ಸಿಎಂ: ಕಾಂಗ್ರೆಸ್ ಅಭ್ಯರ್ಥಿ ಇ.ಅನ್ನಪೂರ್ಣ ಪರ ಪ್ರಚಾರಕ್ಕೆ ಸಿದ್ದರಾಮಯ್ಯ ಗುರುವಾರ ಸಂಡೂರಿಗೆ ಬರುತ್ತಿದ್ದು, ಎರಡು ದಿನ (ನ.7 ,8) ಇಲ್ಲಿಯೇ ಉಳಿಯುವರು. ಕ್ಷೇತ್ರದಲ್ಲಿ ಆಯೋಜಿಸಿರುವ ಒಟ್ಟು 18 ಸಭೆ, ಸಮಾವೇಶಗಳಲ್ಲಿ ಅವರು ಭಾಗವಹಿಸಲಿದ್ದಾರೆ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದರು.

ಶಿಗ್ಗಾವಿ ಕ್ಷೇತ್ರದಲ್ಲಿ ಬಿ.ವೈ.ವಿಜಯೇಂದ್ರ ಪ್ರಚಾರ

‘ಶಾಸಕರದ್ದು ಆತ್ಮಹತ್ಯೆ ಸ್ಥಿತಿ’

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ ಸಮೀಪಿಸಿದರೂ ಯಾವುದೇ ಹೊಸ ಯೋಜನೆ ಘೋಷಿಸಿಲ್ಲ. ವಿಧಾನಸಭಾ ಕ್ಷೇತ್ರಗಳಿಗೂ ಅನುದಾನ ನೀಡಿಲ್ಲ. ಶಾಸಕರೇ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬಂದಿರುವುದಾಗಿ ಕಾಂಗ್ರೆಸ್‌ನ ಶಾಸಕ ರಾಜು ಕಾಗೆ ಹೇಳುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಶಿಗ್ಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸವಣೂರು ಮತ್ತು ಬಂಕಾಪುರದಲ್ಲಿ ಬುಧವಾರ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಮತಯಾಚಿಸಿ ಮಾತನಾಡಿದ ಅವರು, ‘ಶಾಲಾ–ಕಾಲೇಜು, ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಬಳಿ ಹಣವಿಲ್ಲ. 15 ಬಜೆಟ್ ಮಂಡಿಸಿರುವುದಾಗಿ ಹೇಳುವ ಸಿದ್ದರಾಮಯ್ಯ, ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ. ಸರ್ಕಾರಿ ನೌಕರರಿಗೆ ಸಂಬಳ ನೀಡುತ್ತಿಲ್ಲ. ಸರ್ಕಾರವು ಎಲ್ಲವನ್ನೂ ದಿವಾಳಿ ಮಾಡುತ್ತಿದೆ’ ಎಂದರು.

‘ದೇಶದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ನರೇಂದ್ರ ಮೋದಿ ಅವರ ಬಗ್ಗೆ ಸಿದ್ದರಾಮಯ್ಯ ಟೀಕಿಸುತ್ತಾರೆ. ರೈತರು ಹಾಗೂ ಬಡವರ ಪರ ಹೋರಾಟ ನಡೆಸಿದ್ದ ಬಿ.ಎಸ್. ಯಡಿಯೂರಪ್ಪ ಅವರ ಬಗ್ಗೆಯೂ ನಾಲಿಗೆ ಹರಿಬಿಡುತ್ತಾರೆ. ಮುಡಾ ಹಗರಣದಲ್ಲಿ ಆರೋಪಿ ಸ್ಥಾನದಲ್ಲಿರುವ ಸಿದ್ದರಾಮಯ್ಯ, ಯಡಿಯೂರಪ್ಪ ಬಗ್ಗೆ ಮಾತನಾಡುವಾಗ ಎಚ್ಚರಿಕೆಯಿಂದ ಇರಬೇಕು’ ಎಂದರು.

ಅದೃಷ್ಟದ ಮುಖ್ಯಮಂತ್ರಿ ಸಿದ್ದರಾಮಯ್ಯ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರು, ಬಡವರ ಪರ ಹೋರಾಟ ಮಾಡಿಲ್ಲ. ಅವರೊಬ್ಬ ಅದೃಷ್ಟದ ಮುಖ್ಯಮಂತ್ರಿ. ಆದರೆ, ಯಡಿಯೂರಪ್ಪ ಅವರು 30–40 ವರ್ಷಗಳ ಜನಪರ ಹೋರಾಟದ ಮೂಲಕವೇ ಮುಖ್ಯಮಂತ್ರಿಯಾಗಿದ್ದರು. ಸರ್ವಜನಾಂಗದ ಜನರಿಗಾಗಿ, ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಘೋಷಣೆಯೊಂದಿಗೆ ಆಡಳಿತ ನಡೆಸಿದರು’ ಎಂದು ವಿಜಯೇಂದ್ರ ಹೇಳಿದರು.

‘ದೇಶಕ್ಕೆ ಕರ್ನಾಟಕ ಮಾದರಿ ಎಂಬುದಾಗಿ ಸಿದ್ದರಾಮಯ್ಯ ಹೇಳುತ್ತಾರೆ. ಅವರಿಗೆ ನಾಚಿಕೆಯಾಗಬೇಕು. ಬೆಂಗಳೂರು, ದಾವಣಗೆರೆ ಸೇರಿ ಹಲವೆಡೆ ಗುತ್ತಿಗೆದಾರರಿಗೆ ಹಣ ಕೊಟ್ಟಿಲ್ಲ. ಅವರೆಲ್ಲರೂ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬಂದಿದೆ. ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪಿ.ಎ ಸಹ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಅವರು ಹೇಳಿದರು.

‘ಸಿದ್ದರಾಮಯ್ಯ ಹಾಗೂ ಕುಟುಂಬದವರು ಮುಡಾ ಹಗರಣ ಮಾಡಿದರು. ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ಇರಿಸಿದ್ದ ಹಣವನ್ನು ಲೂಟಿ ಮಾಡಿ, ಲೋಕಸಭಾ ಚುನಾವಣೆಗೆ ಖರ್ಚು ಮಾಡಿದರು. ಈಗ ಮುಡಾ ಬಗ್ಗೆ ಲೋಕಾಯುಕ್ತ ತನಿಖೆ ನಡೆಯುತ್ತಿದ್ದು, ಸದ್ಯದಲ್ಲೇ ಮುಖ್ಯಮಂತ್ರಿಗೆ ಕ್ಲೀನ್‌ಚಿಟ್ ಕೊಡಲಿದೆ. ಇದೇ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) ತನಿಖೆ ಮಾಡುತ್ತಿದೆ. ಭ್ರಷ್ಟಾಚಾರದ ಮುಖವಾಡ ಹೊರಗೆ ಬೀಳುತ್ತಿದೆ’ ಎಂದು ವಿಜಯೇಂದ್ರ ತಿಳಿಸಿದರು.



ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರ ಬಗ್ಗೆ ಮಾತನಾಡುವ ನೈತಿಕತೆ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಮುಖಂಡರಿಗಿಲ್ಲ
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಜಮೀನು ಕಬಳಿಸಲು ಹುನ್ನಾರ’

‘ವಕ್ಫ್ ಆಸ್ತಿ ಹೆಸರಿನಲ್ಲಿ ರಾಜ್ಯದಲ್ಲಿರುವ 15,000 ರೈತರ ಜಮೀನು ಕಬಳಿಸಲು ರಾಜ್ಯ ಸರ್ಕಾರ ಹುನ್ನಾರ ನಡೆಸುತ್ತಿದೆ. ಒಂದಿಂಚು ಭೂಮಿ ಕಬಳಿಸಲು ಬಿಜೆಪಿ ಅವಕಾಶ ನೀಡುವುದಿಲ್ಲ. ರೈತರ ಪರ ನಿಂತು ಹೋರಾಟ ಮಾಡುತ್ತೇವೆ’ ಎಂದು ಬಿ.ವೈ. ವಿಜಯೇಂದ್ರ ಎಚ್ಚರಿಕೆ ನೀಡಿದರು.

ರಣಥಂಬೋರ್: 25 ಹುಲಿಗಳು ನಾಪತ್ತೆ

ಜೈಪುರ (ಪಿಟಿಐ): ರಾಜಸ್ಥಾನದ ರಣಥಂಬೋರ್ ರಾಷ್ಟ್ರೀಯ ಉದ್ಯಾನದಲ್ಲಿನ (ಆರ್‌ಎನ್‌ಪಿ) 75 ಹುಲಿಗಳ ಪೈಕಿ 25 ಹುಲಿಗಳು ಕಳೆದ ಒಂದು ವರ್ಷದಲ್ಲಿ ಕಾಣೆಯಾಗಿದ್ದು, ಈ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ಮುಖ್ಯ ವನ್ಯಜೀವಿ ಅಧಿಕಾರಿ ಪವನ್‌ಕುಮಾರ್ ಉಪಾಧ್ಯಾಯ ಹೇಳಿದ್ದಾರೆ.



‘ಇವುಗಳ ಪೈಕಿ, 11 ಹುಲಿಗಳು ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ ನಾಪತ್ತೆಯಾಗಿವೆ’ ಎಂದು ತನಿಖೆ ಕುರಿತು ಹೊರಡಿಸಿರುವ ಆದೇಶದಲ್ಲಿ ಪವನ್‌ಕುಮಾರ್ ಹೇಳಿದ್ದಾರೆ.

ವ್ಯಾಘ್ರಗಳನ್ನು ಪತ್ತೆ ಹಚ್ಚುವುದಕ್ಕಾಗಿ ವನ್ಯಜೀವಿ ಇಲಾಖೆಯು ಮೂವರು ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಿದೆ. ಈ ಸಮಿತಿಯು ದಾಖಲೆಗಳ ಪರಿಶೀಲನೆ ಜೊತೆಗೆ, ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಕೈಗೊಳ್ಳಬೇಕಾದ ಕ್ರಮ ಕುರಿತು ಶಿಫಾರಸು ಮಾಡಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ವರ್ಷದ ಮೇ 17 ಮತ್ತು ಸೆಪ್ಟೆಂಬರ್ 30ರ ನಡುವೆ ನಾಪತ್ತೆಯಾಗಿರುವ ಹುಲಿಗಳ ಪತ್ತೆಗೆ ಮೊದಲು ಗಮನ ನೀಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇದೇ ಮೊದಲ ಬಾರಿಗೆ, ಒಂದು ವರ್ಷದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಹುಲಿಗಳು ನಾಪತ್ತೆಯಾಗಿವೆ. ಈ ಹಿಂದೆ, ರಣಥಂಬೋರ್ ರಾಷ್ಟ್ರೀಯ ಉದ್ಯಾನದಲ್ಲಿ 2019ರಿಂದ 2022ರವರೆಗೆ 13 ಹುಲಿಗಳು ನಾಪತ್ತೆಯಾಗಿದ್ದಾಗಿ ವರದಿಯಾಗಿತ್ತು.

ಮಹಾರಾಷ್ಟ್ರ: ಎನ್‌ಸಿಪಿ ಪ್ರಣಾಳಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಸಿಪಿ (ಅಜಿತ್ ಪವಾರ್ ಬಣ) ಅಧ್ಯಕ್ಷ, ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಪಕ್ಷದ ಪ್ರಣಾಳಿಕೆಯನ್ನು ಬುಧವಾರ ಬಿಡುಗಡೆ ಮಾಡಿದರು.

ಅಜಿತ್ ಅವರು ಬಾರಾಮತಿಯಲ್ಲಿ, ಪಕ್ಷದ ಕಾರ್ಯಕಾರಿ ಅಧ್ಯಕ್ಷ ಪ್ರಫುಲ್ ಪಟೇಲ್ ಅವರು ಗೋಂದಿಯಾದಲ್ಲಿ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಸುನಿಲ್ ತಟಕರೆ ಅವರು ಮುಂಬೈನಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು. ಪಕ್ಷದ ಅಭ್ಯರ್ಥಿಗಳು ಮತ್ತು ಸ್ಥಳೀಯ ನಾಯಕರು ತಮ್ಮ ಕ್ಷೇತ್ರಗಳಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು.



ಅಜಿತ್ ಪವಾರ್

ರಾಜಕೀಯ ಪಕ್ಷವೊಂದು ತಾನು ಸ್ಪರ್ಧಿಸುವ ಪ್ರತಿಯೊಂದು ವಿಧಾನಸಭೆ ಕ್ಷೇತ್ರದಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿರುವುದು ಇದೇ ಮೊದಲು.

ಬಾರಾಮತಿಯಲ್ಲಿ ಮಾತನಾಡಿದ ಅಜಿತ್ ಪವಾರ್ ಅವರು, ‘ಸರ್ಕಾರ ರಚಿಸಿದ 100 ದಿನಗಳ ಒಳಗಾಗಿ ನವ ಮಹಾರಾಷ್ಟ್ರದ ಪರಿಕಲ್ಪನೆಯನ್ನು ಅನುಷ್ಠಾನ ಮಾಡುತ್ತೇವೆ’ ಎಂದು ಭರವಸೆ ನೀಡಿದರು.

ಪ್ರಣಾಳಿಕೆಯ ಪ್ರಮುಖ ಅಂಶಗಳು:

- ‘ಲಡ್ಕಿ ಬಹೀಣ್’ ಯೋಜನೆ ಅಡಿಯಲ್ಲಿ ಮಹಿಳೆಯರ ಖಾತೆಗೆ ಪ್ರತಿ ತಿಂಗಳು ₹2,100 ಜಮಾ ಮಾಡಲಾಗುವುದು. ಪ್ರಸ್ತುತ ₹1,500 ನೀಡಲಾಗುತ್ತಿದೆ
- ಶೇತ್ಕಾರಿ ಸಮ್ಮಾನ್ ನಿಧಿಯಡಿ ರೈತರಿಗೆ ವಾರ್ಷಿಕ ನೀಡುವ ಹಣವನ್ನು ₹12,000ದಿಂದ ₹15,000ಕ್ಕೆ ಏರಿಕೆ ಮಾಡುತ್ತೇವೆ
- 25 ಲಕ್ಷ ಉದ್ಯೋಗ ಸೃಷ್ಟಿ
- 10 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ಸಮಯದಲ್ಲಿ ಪ್ರತಿ ತಿಂಗಳು ₹10,000 ಭತ್ಯೆ
- ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ವೇತನ ₹15,000ಕ್ಕೆ ಹೆಚ್ಚಳ

ಸಿದ್ದೀಕಿ ಹತ್ಯೆ: ಮತ್ತೊಬ್ಬನ ಬಂಧನ

ಮುಂಬೈ (ಪಿಟಿಐ): ಎನ್‌ಸಿಪಿ (ಅಜಿತ್ ಬಣ) ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮುಂಬೈ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬುಧವಾರ ಬಂಧಿಸಿದ್ದಾರೆ.

‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾದವರ ಸಂಖ್ಯೆ 16ಕ್ಕೆ ಏರಿಕೆಯಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಸ್ಲಿಮರ ಸಭೆ ನಡೆಸಿದ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮಗ ಭರತ್ ಅವರನ್ನು ಗೆಲ್ಲಿಸಲು ಪಣ ತೊಟ್ಟಿರುವ ಸಂಸದ ಬಸವರಾಜ ಬೊಮ್ಮಾಯಿ, ಕ್ಷೇತ್ರದಲ್ಲಿನ ಮುಸ್ಲಿಂ ಸಮುದಾಯದ ಕೆಲ ಮುಖಂಡರ ಸಭೆ ನಡೆಸಿದರು.

ತಾಲ್ಲೂಕಿನ ಬಂಕಾಪುರ ಪಟ್ಟಣದಲ್ಲಿರುವ ಮುಸ್ಲಿಂ ಮುಖಂಡರೊಬ್ಬರ ಮನೆಯಲ್ಲಿ ಮಂಗಳವಾರ ರಾತ್ರಿ ಸಭೆ ನಡೆಸಿದ ಅವರು, ‘ಮುಸ್ಲಿಂ ಸಮುದಾಯದ ಜೊತೆಗೆ ನಾನಿದ್ದೇನೆ. ನಿಮ್ಮ ವ್ಯಾಪಾರ–ವಹಿವಾಟು ಹೆಚ್ಚಿಸುವ ಮೂಲಕ ಆರ್ಥಿಕ ಗುಣಮಟ್ಟ ಹೆಚ್ಚಿಸಿಕೊಳ್ಳಬೇಕು’ ಎಂದರು.

‘ಶಿಗ್ಗಾವಿ-ಸವಣೂರ ಕ್ಷೇತ್ರ, ಭಾವೈಕ್ಯತೆ ನೆಲೆಯಾಗಿದೆ. ಸರ್ವ ಧರ್ಮದ ಜನರು ಸಮಾನತೆ, ಒಗ್ಗಟ್ಟಿನಿಂದ ಬಾಳಿ ಬದುಕಬೇಕು. ಕನಕದಾಸರು, ಶರೀಫ್ ಶಿವಯೋಗಿಗಳು ಸೇರಿದಂತೆ ಅನೇಕ ಪುಣ್ಯ ಪುರುಷರ ಪುಣ್ಯ ಭೂಮಿ ನಮ್ಮದಾಗಿದೆ. ಸಾವಿರಾರು ವರ್ಷಗಳಿಂದ ಸಾಮರಸ್ಯದ ಬದುಕು ನಡೆಸಿಕೊಂಡು ಬಂದಿದ್ದೇವೆ’ ಎಂದರು.

‘ಕಾಂಗ್ರೆಸ್ ಸರ್ಕಾರ, ಮುಸ್ಲಿಂ ಸಮುದಾಯದ ಜನರನ್ನು ಮತ ಬ್ಯಾಂಕ್ ಮಾಡಿಕೊಂಡಿದೆ. ಚುನಾವಣೆ ಬಂದಾಗ ಮಾತ್ರ ಅವರಿಗೆ ಮುಸ್ಲಿಂ ಸಮುದಾಯ ನೆನಪಾಗುತ್ತಿದೆ. 20 ವರ್ಷಗಳಿಂದ ಸ್ಥಳೀಯ ಮುಸ್ಲಿಂ ಸಮುದಾಯದ ಜನರ ಆಶೋತ್ತರ ಈಡೇರಿಸುವ ಮೂಲಕ ನೆರವಾಗಿದ್ದೇನೆ. ಕ್ಷೇತ್ರದ ಮುಸ್ಲಿಂ ಸಮುದಾಯದವರು ಭರತ್‌ಗೆ ಮತ ನೀಡಿ ಬಹುಮತದಿಂದ ಆಯ್ಕೆ ಮಾಡಬೇಕು’ ಎಂದು ಕೋರಿದರು.

ಇದೇ ಸಂದರ್ಭದಲ್ಲಿ 150ಕ್ಕೂ ಹೆಚ್ಚು ಮಂದಿ ಮುಸ್ಲಿಮರು, ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಯಾದರು. ಪುರಸಭೆ ಸದಸ್ಯ ಮುಕ್ಬುಲ್‌ಅಹ್ಮದ ಬೊಮ್ಮನಹಳ್ಳಿ, ನಾಸೀರಅಹ್ಮದ ಹಲ್ಡೆವಾಲೆ, ಮುಖಂಡರಾದ ಖಲಂದರ ಜಂಗಳಿ, ಬಾಗವಾನ್ ಹಾಗೂ ಇತರರು ಸಭೆಯಲ್ಲಿದ್ದರು.



ಶಿಗ್ಗಾವಿ ಕ್ಷೇತ್ರದ ಬಂಕಾಪುರದಲ್ಲಿ ಮಂಗಳವಾರ ಆಯೋಜಿಸಿದ್ದ ಮುಸ್ಲಿಂ ಸಮುದಾಯದವರ ಸಭೆಯಲ್ಲಿ ಪಾಲ್ಗೊಂಡಿದ್ದ ಸಂಸದ ಬಸವರಾಜ ಬೊಮ್ಮಾಯಿ ಅವರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು

ತೆಲಂಗಾಣದಲ್ಲಿ ಜಾತಿಗಣತಿ ಆರಂಭ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಜಾತಿಗಣತಿಗೆ ಬುಧವಾರ ಚಾಲನೆ ನೀಡಲಾಗಿದೆ.

ಸಾಮಾಜಿಕ, ಆರ್ಥಿಕ, ರಾಜಕೀಯ, ಉದ್ಯೋಗ ಮತ್ತು ಜಾತಿ ಕುರಿತಾದ ಸಮಗ್ರ ಗಣತಿಯು ಇದಾಗಿದೆ. ಈ ತಿಂಗಳ ಅಂತ್ಯದಲ್ಲಿ ಗಣತಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಗ್ರೇಟರ್ ಹೈದರಾಬಾದ್ ಪಾಲಿಕೆ ಕಚೇರಿಯಲ್ಲಿ ಗಣತಿಗೆ ಚಾಲನೆ ನೀಡಿದ ಸಾರಿಗೆ ಸಚಿವ ಪೊನ್ನಂ ಪ್ರಭಾಕರ್ ಅವರು, ‘ಮಾಹಿತಿಗಳನ್ನು ಗೋಪ್ಯವಾಗಿ ಇರಿಸಲಾಗುವುದು. ಅಸಮಾನತೆಯನ್ನು ಹೋಗಲಾಡಿಸಿ, ಎಲ್ಲರಿಗೂ ಸಮಾನ ನ್ಯಾಯ ಸಿಗುವಂತೆ ಮಾಡುವುದು ಈ ಗಣತಿಯ ಉದ್ದೇಶ’ ಎಂದು ಹೇಳಿದ್ದಾರೆ.

‘ಸಮಾಜದ ವಿವಿಧ ವರ್ಗಗಳ ಕಲ್ಯಾಣ ಮತ್ತು ಅಭಿವೃದ್ಧಿಗೆ ಸರ್ಕಾರ ಯೋಜನೆ ರೂಪಿಸಲು ಜಾತಿಗಣತಿ ಸಹಕಾರಿಯಾಗುತ್ತದೆ’ ಎಂದು ರಾಜ್ಯ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಡಿ.ಶ್ರೀಧರ್ ಬಾಬು ಅವರು ಹೇಳಿದ್ದಾರೆ.

‘ಸಂವಿಧಾನದ ಕೆಂಪು ಹೊದಿಕೆಯ ಚಿಕ್ಕ ಪುಸ್ತಕ ಪ್ರದರ್ಶನ ಏಕೆ?’

‘ರಾಹುಲ್ ಗಾಂಧಿ ಸುತ್ತ ನಗರ ನಕ್ಸಲರು’

ಪ್ರಜಾವಾಣಿ ವಾರ್ತೆ



ದೇವೇಂದ್ರ ಫಡಣವೀಸ್

ಮುಂಬೈ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಚಾರ ಸಭೆಗಳಲ್ಲಿ ಕೆಂಪು ಹೊದಿಕೆ ಇರುವ, ಸಂವಿಧಾನದ ಚಿಕ್ಕ ಪುಸ್ತಕವನ್ನು ಏಕೆ ಪ್ರದರ್ಶಿಸುತ್ತಾರೆ ಎಂದು ಬಿಜೆಪಿ ನಾಯಕ ಹಾಗೂ ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರಶ್ನಿಸಿದ್ದಾರೆ.

ಈ ವಿಚಾರವನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿರುವ ಫಡಣವೀಸ್, ‘ಕೆಂಪು ಬಣ್ಣದ ಚಿಕ್ಕ ಪುಸ್ತಕವನ್ನು ಪ್ರದರ್ಶಿಸುವುದರ ಹಿಂದಿನ ತರ್ಕವೇನು’ ಎಂದು ಪ್ರಶ್ನಿಸಿದ್ದಾರೆ.

‘ಸಂವಿಧಾನದ ಪ್ರತಿಯ ಹೊದಿಕೆಯ ಬಣ್ಣ ಸಾಮಾನ್ಯವಾಗಿ ನೀಲಿ ಇರುತ್ತದೆ. ಆದರೆ, ರಾಹುಲ್ ಗಾಂಧಿ ಪ್ರದರ್ಶಿಸುವ ಪುಸ್ತಕದ ಬಣ್ಣ ಕೆಂಪು ಬಣ್ಣ ಹೊಂದಿದೆ. ಈಗ, ರಾಹುಲ್ ಗಾಂಧಿ ಸುತ್ತ ನಗರ ನಕ್ಸಲರು ಹಾಗೂ ಅರಾಜಕತಾವಾದಿ ಶಕ್ತಿಗಳೇ ಇದ್ದಾರೆ. ಅವರು ಕಾಂಗ್ರೆಸ್ ವ್ಯಕ್ತಿಯಾಗಿ ಉಳಿಯದೇ ಈಗ ‘ಉಗ್ರ ಎಡಪಂಥೀಯ ವಿಚಾರವಾದಿ’ಯಾಗಿ ಬದಲಾಗಿದ್ದಾರೆ’ ಎಂದು ಟೀಕಿಸಿದ್ದಾರೆ.

‘ಕೆಂಪು ಬಣ್ಣದ ಹೊದಿಕೆ ಇರುವ ಸಂವಿಧಾನದ ಪ್ರತಿಯನ್ನು ಪ್ರದರ್ಶಿಸುವ ಮೂಲಕ ರಾಹುಲ್ ಗಾಂಧಿ ಯಾವ ಸಂದೇಶ ಕೊಡಲು ಹೊರಟಿದ್ದಾರೆ’ ಎಂದು ಕೊಲ್ಹಾಪುರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಫಡಣವೀಸ್ ಪ್ರಶ್ನಿಸಿದ್ದಾರೆ.

ರಾಹುಲ್ ಗಾಂಧಿ ಅವರು ಮಹಾ ವಿಕಾಸ ಅಘಾಡಿ (ಎಂವಿಎ) ಪರ ಪ್ರಚಾರ ನಡೆಸುವುದಕ್ಕಾಗಿ ನಾಗ್ಪುರ ಹಾಗೂ ಮುಂಬೈನಲ್ಲಿ ನಡೆದ ರ‍್ಯಾಲಿಗಳಲ್ಲಿ ಪಾಲ್ಗೊಂಡಿರುವ ಸಂದರ್ಭದಲ್ಲಿಯೇ ಫಡಣವೀಸ್ ಈ ವಾಗ್ದಾಳಿ ನಡೆಸಿದ್ದಾರೆ.

‘ರಾಹುಲ್ ಗಾಂಧಿ ಮಾಡಿಕೊಂಡಿರುವ ಮೈತ್ರಿಕೂಟ ಮಹಾರಾಷ್ಟ್ರ ಹಾಗೂ ಇಡೀ ದೇಶಕ್ಕೆ ಅಪಾಯಕಾರಿ. ಅವರು ಭಾರತ ಜೋಡೊ ಯಾತ್ರೆ ಆರಂಭಿಸಿದರು. ಹೆಸರೂ ಆಕರ್ಷಕವಾಗಿತ್ತು. ಇದೊಂದು ಉತ್ತಮ ಕಾರ್ಯಕ್ರಮ ಎಂದೂ ನಾವು ಭಾವಿಸಿದ್ದೆವು’ ಎಂದರು.

‘ಭಾರತ ಜೋಡೊ ಯಾತ್ರೆಗೆ 150–200 ಸಂಘಟನೆಗಳು ಕೈಜೋಡಿಸಿದ್ದವು. ಇವುಗಳ ಪೈಕಿ 100ರಷ್ಟು ಸಂಘಟನೆಗಳು ದೇಶದಲ್ಲಿ ಅರಾಜಕತೆ ಸೃಷ್ಟಿಗೆ ಯತ್ನಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಈ ಸಂಘಟನೆಗಳೆಲ್ಲ ಉಗ್ರ ಎಡಪಂಥೀಯ ವಿಚಾರಧಾರೆ ಹೊಂದಿವೆ. ಸಮಾಜದಲ್ಲಿ ಒಡಕು ಉಂಟು ಮಾಡುವಲ್ಲಿ ಈ ಸಂಘಟನೆಗಳು ನಿರತವಾಗಿರುವುದು ಇವುಗಳ ಇತಿಹಾಸ ಗಮನಿಸಿದಾಗ ಗೊತ್ತಾಗುತ್ತದೆ’ ಎಂದು ಟೀಕಾಪ್ರಹಾರ ನಡೆಸಿದ್ದಾರೆ.

ರಾಹುಲ್ ತಿರುಗೇಟು: ನಾಗ್ಪುರದಲ್ಲಿ ನಡೆದ ಸಂವಿಧಾನ ಸಮ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಡಾ. ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ ಕೇವಲ ಪುಸ್ತಕವಲ್ಲ, ಅದು ಜೀವನಮಾರ್ಗ. ಆದರ, ‘ಬಿಜೆಪಿ, ಆರ್‌ಎಸ್‌ಎಸ್‌ನವರು ಸಂವಿಧಾನದ ಮೇಲೆ ಸದ್ದಿಲ್ಲದೇ ದಾಳಿ ನಡೆಸುತ್ತಿದ್ದಾರೆ’ ಎಂದು ಟೀಕಿಸಿದರು.

ರಾಹುಲ್ ಗಾಂಧಿ ಅವರು ಸಂವಿಧಾನದ ಪ್ರತಿ ಪ್ರದರ್ಶಿಸುವುದು ನಾಟಕ ಎಂದು ಬಿಜೆಪಿ ಹೇಳುತ್ತಿದೆ. ಬಿಜೆಪಿಯವರು ರಾಹುಲ್‌ಗೆ ಹೆದರಿದ್ದಾರೆ ಎಂದರ್ಥ
ನಾನಾ ಪಟೋಲೆ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ

ರಾಹುಲ್ ಕಾರ್ಯಕ್ರಮದಲ್ಲಿ ಪಾಲ್ಗೊಂಡವರನ್ನು ನಗರ ನಕ್ಸಲರು ಎಂದು ಕರೆಯುವುದು ಸಾಮಾಜಿಕ ಸಂಘಟನೆಗಳನ್ನು ಅವಮಾನಿಸಿದಂತೆ
ವಿಜಯ ವಡೆಟ್ಟಿವಾರ್ ವಿಧಾನಸಭೆ ವಿರೋಧ ಪಕ್ಷದ ನಾಯಕ

ಗಡಿಯಾರ ಚಿಹ್ನೆ ಬಗ್ಗೆ ಪ್ರಕಟಣೆ ನೀಡಿ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಪಕ್ಷಕ್ಕೆ ನೀಡಿರುವ ‘ಗಡಿಯಾರ’ದ ಚಿಹ್ನೆಯ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ ಎಂಬುದನ್ನು ದಿನಪತ್ರಿಕೆಗಳ ಮೂಲಕ ಜನರಿಗೆ ತಿಳಿಸಬೇಕು ಎಂದು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚನೆ ನೀಡಿದೆ.

ಕೋರ್ಟ್ ಆದೇಶ ಬಂದ 36 ಗಂಟೆಗಳಲ್ಲಿ ಈ ಬಗ್ಗೆ ಪತ್ರಿಕೆಗಳ ಮೂಲಕ ಪ್ರಕಟಣೆ ನೀಡಬೇಕು, ಮರಾಠಿ ಪತ್ರಿಕೆಗಳಲ್ಲಿಯೂ ಈ ಪ್ರಕಟಣೆ ಇರಬೇಕು ಎಂದು ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಾಂಕರ್ ದತ್ತ ಮತ್ತು ಉಜ್ವಲ್ ಭೂಯಾನ್ ಅವರು ಇರುವ ಪೀಠವು ಶರದ್ ಪವಾರ್ ಮತ್ತು ಅಜಿತ್ ಪವಾರ್ ನೇತೃತ್ವದ ಬಣಗಳು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

‘ನೀವು ನಿಮ್ಮ ಶಕ್ತಿಯನ್ನು ಕೋರ್ಟ್‌ನಲ್ಲಿ ವ್ಯರ್ಥ ಮಾಡಬೇಡಿ. ಮತದಾರರ ಬಳಿ ಹೋಗಿ, ಅವರ ಮನ ಒಲಿಸುವ ಕೆಲಸ ಮಾಡಿ’ ಎಂದು ಪೀಠವು ಹೇಳಿತು.



ಒತ್ತುವರಿ ತೆರವು: ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ – ಉತ್ತರಪ್ರದೇಶ ಸರ್ಕಾರಕ್ಕೆ ತರಾಟೆ

‘ರಾತ್ರೋರಾತ್ರಿ ಕಟ್ಟಡ ನೆಲಸಮ ಮಾಡುವಂತಿಲ್ಲ’

ನವದೆಹಲಿ (ಪಿಟಿಐ): ರಸ್ತೆ ವಿಸ್ತರಣೆ ಮತ್ತು ಒತ್ತುವರಿ ತೆರವು ಸಂದರ್ಭದಲ್ಲಿ ಸಂಬಂಧಪಟ್ಟವರಿಗೆ ಮುಂಚಿತವಾಗಿ ನೋಟಿಸ್ ನೀಡದೇ, ಕಟ್ಟಡಗಳನ್ನು ‘ರಾತ್ರೋರಾತ್ರಿ ನೆಲಸಮಗೊಳಿಸು-ವಂತಿಲ್ಲ’ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ವಿಚಾರವಾಗಿ ಅನು-ಸರಿಸಬೇಕಾದ ಪ್ರಕ್ರಿಯೆ ಕುರಿತು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬುಧವಾರ ನಿರ್ದೇಶನ ನೀಡಿದೆ.

2019ರಲ್ಲಿ ಕಟ್ಟಡವೊಂದನ್ನು ‘ಅಕ್ರಮ’ವಾಗಿ ನೆಲಸಮಗೊಳಿಸಿದ್ದಕ್ಕಾಗಿ ಉತ್ತರ ಪ್ರದೇಶ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ವೇಳೆ ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ-ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, ರಸ್ತೆ ವಿಸ್ತರಣೆಗಾಗಿ 2019ರಲ್ಲಿ ಮಹಾರಾಜಗಂಜ್ ಜಿಲ್ಲಾಡಳಿತ ನೆಲ-ಸಮಗೊಳಿಸಿದ್ದ ಮನೆಯ ಮಾಲೀಕ, ಪತ್ರಕರ್ತ ಮನೋಜ್ ತಿಬ್ರೇವಾಲ್ ಆಕಾಶ್ ಅವರಿಗೆ ₹25 ಲಕ್ಷ ಪರಿಹಾರ ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನಿರ್ದೇಶಿಸಿತು.

ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಈ ಪೀಠದಲ್ಲಿದ್ದರು.

ರಸ್ತೆ ವಿಸ್ತರಣೆ ಕುರಿತ ನಿರ್ದೇಶನ-ಗಳನ್ನು ಒಳಗೊಂಡ ತನ್ನ ಆದೇಶದ ಪ್ರತಿಗಳನ್ನು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸುವಂತೆ ರಿಜಿಸ್ಟ್ರಾರ್(ನ್ಯಾಯಿಕ) ಅವರಿಗೆ ನ್ಯಾಯಪೀಠ ಸೂಚಿಸಿತು.

ತಮ್ಮ ಮನೆಯನ್ನು ನೆಲಸಮಗೊಳಿ-ಸಿದ್ದನ್ನು ವಿವರಿಸಿ ಮನೋಜ್ ಅವರು ಪತ್ರ ಬರೆದಿದ್ದರು. ಇದರ ಆಧಾರದ ಮೇಲೆ ಸುಪ್ರೀಂ ಕೋರ್ಟ್ ದೂರು ದಾಖಲಿಸಿಕೊಂಡಿತ್ತು. ಮನೋಜ್ ಪರ ವಕೀಲರಾದ ಸಿದ್ಧಾರ್ಥ ಭಟ್ನಾಗರ್ ಹಾಗೂ ಶುಭಂ ಕುಲಶ್ರೇಷ್ಠ ಅವರು ವಾದಿಸಿದ್ದರು.

‘ನೀವು ರಾತ್ರೋರಾತ್ರಿ ಬುಲ್ಡೋ-ಜರ್‌ನೊಂದಿಗೆ ಸ್ಥಳಕ್ಕೆ ತೆರಳಿ ಕಟ್ಟ-ಡಗಳನ್ನು ಧ್ವಂಸ ಮಾಡುವಂತಿಲ್ಲ. ಮನೆ ತೆರವು ಮಾಡುವುದಕ್ಕೆ ನೀವು ಕುಟುಂಬಕ್ಕೆ ಕಾಲಾವಕಾಶ ಕೊಡುವುದಿಲ್ಲ ಅಂದರೆ ಹೇಗೆ? ಅಲ್ಲಿರುವ ಗೃಹೋಪಯೋಗಿ ವಸ್ತುಗಳ ಗತಿಯೇನು’ ಎಂದು ಉತ್ತರ ಪ್ರದೇಶ ಪರ ವಕೀಲರನ್ನು ಪೀಠ ಪ್ರಶ್ನಿಸಿದೆ.

ಈ ಸಂಬಂಧ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದೆ.

‘ಈ ಪ್ರಕರಣದಲ್ಲಿ, ಕಾನೂನು ಪಾಲನೆಯಾಗಿಲ್ಲ. 3.7 ಚದರ ಮೀಟರ್ ಒತ್ತುವರಿಯನ್ನು ಮಾತ್ರ ತೆರವು ಗೊಳಿಸಬೇಕಿತ್ತು ಎಂದು ದಾಖಲೆಗಳು ಹೇಳುತ್ತವೆ. ಆದರೆ, ಮನೆಗಳನ್ನು ಹೇಗೆ ಧ್ವಂಸ ಮಾಡಿದಿರಿ’ ಎಂದು ಪ್ರಶ್ನಿಸಿದ ಪೀಠ, ‘ಭಾರಿ ಒತ್ತಡಕ್ಕೆ ಮಣಿದು ಕಾರ್ಯಾಚರಣೆ ನಡೆಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ’ ಎಂದಿದೆ.

ಸುಪ್ರೀಂ ಕೋರ್ಟ್ ಸೂಚನೆ ಏನು?

- ರಸ್ತೆ ವಿಸ್ತರಣೆ ಕಾರ್ಯ ಕೈಗೆತ್ತಿಕೊಳ್ಳುವ ಮುನ್ನ, ದಾಖಲೆಗಳು/ನಕಾಶೆಯಲ್ಲಿ ನಮೂದಾಗಿರುವ ರಸ್ತೆಯ ಸದ್ಯದ ಅಗಲ ಗುರುತಿಸಿ, ಸಮೀಕ್ಷೆ ನಡೆಸಬೇಕು. ಇದರಿಂದ ರಸ್ತೆ ಒತ್ತುವರಿ ಆಗಿದೆಯೇ ಎಂಬುದು ಗೊತ್ತಾಗಲಿದೆ
- ಒತ್ತುವರಿ ಆಗಿರುವುದು ಕಂಡುಬಂದಲ್ಲಿ, ಒತ್ತುವರಿ ತೆರವುಗೊಳಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಿ ನೋಟಿಸ್ ನೀಡಬೇಕು. ಒಂದು ವೇಳೆ, ಈ ನೋಟಿಸ್‌ಗೆ ಆಕ್ಷೇಪ ವ್ಯಕ್ತವಾದಲ್ಲಿ ತೆರವು ಕಾರ್ಯ ಕುರಿತು ಸಕಾರಣಗಳಿರುವ ಆದೇಶ ಜಾರಿ ಮಾಡಿ, ಕ್ರಮ ತೆಗೆದುಕೊಳ್ಳಬೇಕು
- ಯಾವುದೇ ವ್ಯಕ್ತಿ ಆದೇಶದ ಅನುಸಾರ ಒತ್ತುವರಿ ತೆರವು ಮಾಡದಿದ್ದಲ್ಲಿ ಹಾಗೂ ತೆರವಿಗೆ ಸಕ್ಷಮ ಪ್ರಾಧಿಕಾರದಿಂದ ತಡೆಯಾಜ್ಞೆ ಇಲ್ಲದಿದ್ದಾಗ, ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಪ್ರಾಧಿಕಾರ ಅತಿಕ್ರಮಣವನ್ನು ತೆರವುಗೊಳಿಸಬಹುದು
- ಸದ್ಯದ ರಸ್ತೆ ಹಾಗೂ ಅದಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಾಗದ ಬಳಕೆ ನಂತರವೂ ಅಗತ್ಯದಷ್ಟು ವಿಸ್ತರಣೆ ಸಾಧ್ಯವಾಗದಿದ್ದಾಗ, ಕಾನೂನು ಪ್ರಕಾರ ಜಮೀನಿನ ಸ್ವಾಧೀನಕ್ಕೆ ಕ್ರಮ ಕೈಗೊಳ್ಳಬೇಕು



ಸಲ್ಮಾನ್ ಖಾನ್‌ಗೆ ಬೆದರಿಕೆ ಹಾವೇರಿಯಲ್ಲಿ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಬಿಖಾ ರಾಮ್

ಹಾವೇರಿ: ನಟ ಸಲ್ಮಾನ್ ಖಾನ್ ಅವರಿಗೆ ಕೊಲೆ ಬೆದರಿಕೆಯೊಡ್ಡಿದ್ದ ಆರೋಪದಡಿ ಬಿಖಾ ರಾಮ್ ಅಲಿಯಾಸ್ ವಿಕ್ರಮ್ (32) ಎಂಬುವವರನ್ನು ಹಾವೇರಿ ಜಿಲ್ಲಾ ಪೊಲೀಸರು ಬುಧವಾರ ಬಂಧಿಸಿದ್ದು, ಮುಂಬೈನ ಭಯೋತ್ಪಾದನಾ ನಿಗ್ರಹ ಪಡೆಯ ವಶಕ್ಕೆ ಒಪ್ಪಿಸಿದ್ದಾರೆ.

‘ರಾಜಸ್ಥಾನದ ಜಲೂರ್ ನಿವಾಸಿ ಬಿಖಾ ರಾಯ್, ಕೆಲಸ ಹುಡುಕಿಕೊಂಡು ಇತ್ತೀಚೆಗೆ ಹಾವೇರಿಗೆ ಬಂದಿದ್ದ. ಇಲ್ಲಿಯ ಗೌಡರ ಓಣಿಯ ಕೊಠಡಿಯೊಂದ-ರಲ್ಲಿ ನೆಲಸಿದ್ದ. ಈತನ ಇರುವಿಕೆ ಬಗ್ಗೆ ಮುಂಬೈ ಭಯೋತ್ಪಾದನಾ ನಿಗ್ರಹ ಪಡೆ ಮಾಹಿತಿ ನೀಡಿತ್ತು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ತಿಳಿಸಿದರು. ‘ನಿರ್ಮಾಣ ಹಂತದ ಕಟ್ಟಡಗಳಲ್ಲಿ ಕೆಲಸ ಮಾಡಿಕೊಂಡಿದ್ದ ಬಿಖಾ ರಾಯ್, ಸಲ್ಮಾನ್ ಖಾನ್ ಕೊಲೆ ಮಾಡುವುದಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಬೆದರಿಕೆಯೊಡ್ಡಿದ್ದ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಮುಂಬೈ ಪೊಲೀಸರು, ಈತನಿಗಾಗಿ ಹುಡುಕಾಟ ನಡೆಸಿದ್ದರು’ ಎಂದರು.

‘ಹಲವು ತಿಂಗಳ ಹಿಂದೆಯೇ ಆರೋಪಿ, ರಾಜ್ಯಕ್ಕೆ ಬಂದಿದ್ದಾನೆ. ಮೊದಲು ಬೇರೆ ನಗರದಲ್ಲಿ ಈತ ನೆಲಸಿದ್ದ. ಒಂದೂವರೆ ತಿಂಗಳ ಹಿಂದೆಯಷ್ಟೇ ಈತ ಹಾವೇರಿಗೆ ಬಂದಿದ್ದ ಎಂದು ಗೊತ್ತಾಗಿದೆ. ಈತನನ್ನು ಬಂಧಿಸಿ ಮುಂಬೈ ಭಯೋತ್ಪಾದನಾ ನಿಗ್ರಹ ಪಡೆಗೆ ಒಪ್ಪಿಸಲಾಗಿದೆ’ ಎಂದರು.

7,500 ಕೆ.ಜಿ ತೂಕ ಮೀರದ ಸಾರಿಗೆ ವಾಹನ ಚಾಲನೆ ಮಾಡಬಹುದು: ‘ಸುಪ್ರೀಂ’

ಎಲ್‌ಎಂವಿ ಲೈಸನ್ಸ್ ಇದ್ದವರಿಗೆ ಅನುಮತಿ

ನವದೆಹಲಿ(ಪಿಟಿಐ): ಲಘು ಮೋಟಾರು ವಾಹನ (ಎಲ್‌ಎಂವಿ) ಚಾಲನಾ ಪರವಾನಗಿ ಹೊಂದಿರುವವರು 7,500 ಕೆ.ಜಿ ತೂಕ ಮೀರದ ಸಾರಿಗೆ ವಾಹನಗಳನ್ನು ಚಾಲನೆ ಮಾಡಲು ಅರ್ಹರಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಮಹತ್ವದ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರು ಇದ್ದ ಸಂವಿಧಾನ ಪೀಠ ನೀಡಿರುವ ಈ ಸರ್ವಾನುಮತದ ತೀರ್ಪಿನಿಂದ ವಾಣಿಜ್ಯಿಕ ವಾಹನಗಳ ಚಾಲಕರಿಗೆ ಪ್ರಯೋಜನವಾಗಲಿದೆ.

ಈ ತೀರ್ಪಿನಿಂದ ಚಾಲನಾ ಪರವಾನಗಿಗೆ ಸಂಬಂಧಿಸಿದ ನಿಯಮಾವಳಿಗಳ ಕುರಿತು ಸ್ಪಷ್ಟತೆ ಲಭಿಸಿದಂತಾಗಿದೆ. ಅಲ್ಲದೇ, ಅಪಘಾತ ಪ್ರಕರಣಗಳಲ್ಲಿ, ಚಾಲಕರು ಹೊಂದಿರುವ ಪರವಾನಗಿಯ ಮಾದರಿಯನ್ನು ಆಧಾರವನ್ನಾಗಿಟ್ಟುಕೊಂಡು ವಿಮಾ ಕಂಪನಿಗಳು ಕ್ಲೇಮುಗಳನ್ನು ತಿರಸ್ಕರಿಸುವುದನ್ನು ಕೂಡ ಈ ತೀರ್ಪು ತಡೆಯಲಿದೆ ಎಂದು ನಿರೀಕ್ಷಿಸಲಾಗಿದೆ.

ಪೀಠದ ಪರವಾಗಿ 126 ಪುಟಗಳ ತೀರ್ಪನ್ನು ಬರೆದಿರುವ ನ್ಯಾಯಮೂರ್ತಿ ಹೃಷಿಕೇಶ್ ರಾಯ್, ‘ಅಪಾಯಕಾರಿ ಸರಕುಗಳನ್ನು ಸಾಗಿಸುವ ವಾಹನಗಳ ಚಾಲನೆಗೆ ನಿಗದಿಪಡಿಸಿರುವ ವಿಶೇಷ ಅರ್ಹತೆಗೆ ಸಂಬಂಧಿಸಿದ ನಿಯಮಗಳು ಮುಂದುವರಿಯಲಿವೆ’ ಎಂದು ಹೇಳಿದರು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಪಂಕಜ್ ಮಿತ್ತಲ್ ಹಾಗೂ ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿದ್ದಾರೆ.

ಪೀಠವು, ಮುಕುಂದ ದೇವಾಂಗನ್ ವರ್ಸಸ್ ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಪ್ರಕರಣದಲ್ಲಿ 2017ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಎತ್ತಿ ಹಿಡಿದಿದೆ. ಎಲ್‌ಎಂವಿ ಚಾಲನಾ ಪರವಾನಗಿ ಹೊಂದಿರುವವರು 7,500 ಕೆ.ಜಿ ವರೆಗೆ ತೂಕ ಹೊಂದಿರುವ ಸಾರಿಗೆ ವಾಹನಗಳನ್ನು ಚಲಾಯಿಸಬಹುದು ಎಂದು ಆಗ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ರಸ್ತೆ ಸುರಕ್ಷತೆ ಎಂಬುದು ಜಾಗತಿಕವಾಗಿಯೂ ಪ್ರಮುಖ ಸಾರ್ವಜನಿಕ ವಿಷಯ. ಭಾರತದಲ್ಲಿ ರಸ್ತೆ ಅಪಘಾತಗಳಲ್ಲಿ ಲಕ್ಷಾಂತರ ಜನರು ಸಾವಿಗೀಡಾಗುತ್ತಿರುವುದು ಕಳವಳಕಾರಿ ಸಂಗತಿ. ಎಲ್‌ಎಂವಿ ಚಾಲನಾ ಪರವಾನಗಿ ಹೊಂದಿರುವ ಚಾಲಕರು ಸಾರಿಗೆ ವಾಹನಗಳನ್ನು ಚಲಾಯಿಸುವುದರಿಂದ ಅಪಘಾತಗಳು ಸಂಭವಿಸುತ್ತವೆ ಎಂಬುದು ಆಧಾರರಹಿತವಾಗಿದೆ’ ಎಂದು ಪೀಠ ಹೇಳಿದೆ.

ಎಲ್‌ಎಂವಿ ಚಾಲನಾ ಪರವಾನಗಿ ಹೊಂದಿರುವ ಚಾಲಕರು ಸಾರಿಗೆ ವಾಹನಗಳನ್ನು ಚಲಾಯಿಸುವುದರಿಂದ ಅಪಘಾತಗಳು ಸಂಭವಿಸುತ್ತವೆ ಎಂಬುದನ್ನು ಪುಷ್ಟೀಕರಿಸುವಂತಹ ದತ್ತಾಂಶಗಳನ್ನು ಯಾವ ಕಕ್ಷಿದಾರರೂ ಸಲ್ಲಿಸಿಲ್ಲ ಎಂದಿದೆ.

ಈ ವಿಚಾರವಾಗಿ, ಬಜಾಜ್ ಅಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಹಾಗೂ ಇತರರು ಸಲ್ಲಿಸಿದ್ದ 76 ಅರ್ಜಿಗಳ ವಿಚಾರಣೆಯನ್ನು ಪೀಠವು ಕಳೆದ ವರ್ಷ ಜುಲೈ 18ರಂದು ಆರಂಭಿಸಿತ್ತು. ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಪೀಠ, ಆಗಸ್ಟ್ 21ರಂದು ತೀರ್ಪು ಕಾಯ್ದಿರಿಸಿತ್ತು.

ತೀರ್ಪಿನ ಪ್ರಮುಖಾಂಶಗಳು

- ಎಲ್‌ಎಂವಿ ಚಾಲನಾ ಪರವಾನಗಿ ಹೊಂದಿರುವ ಚಾಲಕ ಒಟ್ಟು 7,500 ಕೆ.ಜಿ ತೂಕವಿರುವ ಸಾಗಣೆ ವಾಹನ ಚಾಲನೆ ಮಾಡಲು ಅರ್ಹತೆ ಹೊಂದಿರುತ್ತಾರೆ. ಇದಕ್ಕಾಗಿ, ಮೋಟಾರು ವಾಹನ ಕಾಯ್ದೆಯಡಿ ಹೆಚ್ಚುವರಿ ದೃಢೀಕರಣದ ಅಗತ್ಯ ಇರುವುದಿಲ್ಲ
- ಚಾಲನಾ ಪರವಾನಗಿ ನೀಡುವ ಉದ್ದೇಶಕ್ಕೆ ಸಂಬಂಧಿಸಿ, ಎಲ್‌ಎಂವಿಗಳು ಹಾಗೂ ಸಾರಿಗೆ ವಾಹನಗಳು ಸಂಪೂರ್ಣವಾಗಿ ಪ್ರತ್ಯೇಕ ವರ್ಗಗಳಿಗೆ ಸೇರಿದವುಗಳಲ್ಲ
- ಇ-ಕಾರ್ಟ್‌ಗಳು, ಇ-ರಿಕ್ಷಾಗಳು ಹಾಗೂ ಅಪಾಯಕಾರಿ ವಸ್ತುಗಳನ್ನು ಸಾಗಣೆ ಮಾಡುವ ವಾಹನಗಳ ಚಾಲನಾ ಪರವಾನಗಿಗೆ ಸಂಬಂಧಿಸಿ ವಿಶೇಷ ಅರ್ಹತೆ ಕುರಿತ ನಿಯಮಗಳು ಅನ್ವಯವಾಗಲಿವೆ
- ರಸ್ತೆ ಅಪಘಾತಗಳು ಸಂಭವಿಸುವುದಕ್ಕೆ ಅನೇಕ ಕಾರಣಗಳಿವೆ. ಅಜಾಗರೂಕತೆಯಿಂದ ಚಾಲನೆ, ವೇಗದ ಚಾಲನೆ, ರಸ್ತೆಗಳ ವಿನ್ಯಾಸ, ನಿಯಮಗಳನ್ನು ಪಾಲನೆ ಮಾಡದಿರುವುದು ಪ್ರಮುಖ ಕಾರಣಗಳು
- ವಾಹನ ಚಾಲನೆ ವೇಳೆ ಮೊಬೈಲ್ ಫೋನ್ ಬಳಸುವುದು, ಸೀಟ್ ಬೆಲ್ಟ್ ಹಾಕಿಕೊಳ್ಳದೇ ಇರುವುದು, ಹೆಲ್ಮೆಟ್ ಧರಿಸದೇ ಇರುವುದು ಕೂಡ ಅಪಘಾತ ಸಂಭವಿಸಲು ಕಾರಣಗಳಾಗಿವೆ
- 7,500 ಕೆ.ಜಿಗಿಂತಲೂ ಕಡಿಮೆ ತೂಕವಿರುವ ಹಾಗೂ ಸಾರಿಗೆ ವಾಹನವು ಅಪಘಾತಕ್ಕೆ ಒಳಗಾದ ಸಂದರ್ಭದಲ್ಲಿ, ಚಾಲಕನು ಹೊಂದಿರುವ ಪರವಾನಗಿ ಕಾರಣ ಒಡ್ಡಿ, ನ್ಯಾಯಯುತವಾಗಿ ಸಿಗಬೇಕಾದ ವಿಮಾ ಪರಿಹಾರ ನೀಡದಿರುವ ವಿಮಾ ಕಂಪನಿಗಳ ಧೋರಣೆಗೆ ಈ ತೀರ್ಪು ಅಂತ್ಯ ಹಾಡಲಿದೆ
- ಮೋಟಾರು ವಾಹನಗಳ ಕಾಯ್ದೆಗೆ ತರಲಾಗಿರುವ ತಿದ್ದುಪಡಿಗಳು ಇಂತಹ ಎಲ್ಲ ವಿಚಾರಗಳನ್ನು ಒಳಗೊಂಡಿರಲಿಕ್ಕಿಲ್ಲ. ಆದರೆ, ಇಂತಹ ನ್ಯೂನತೆಗಳನ್ನು ಸರಿಪಡಿಸುವ ಕ್ರಮಗಳನ್ನು ಉದ್ದೇಶಿತ ತಿದ್ದುಪಡಿಗಳು ಒಳಗೊಂಡಿರುತ್ತವೆ ಎಂದು ಆಶಿಸುತ್ತೇವೆ

ವಿಶೇಷ ಸ್ಥಾನಮಾನ: ನಿರ್ಣಯ ಅಂಗೀಕಾರ

ಜಮ್ಮು ಮತ್ತು ಕಾಶ್ಮೀರ: ಪ್ರತಿ ಹರಿದು ಪ್ರತಿಭಟನೆ ನಡೆಸಿದ ಬಿಜೆಪಿ ಸದಸ್ಯರು

ಶ್ರೀನಗರ (ಪಿಟಿಐ): ಬಿಜೆಪಿ ಸದಸ್ಯರ ಪ್ರತಿಭಟನೆ, ಗದ್ದಲದ ನಡುವೆಯೂ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನ-ಮಾನವನ್ನು ಮತ್ತೆ ನೀಡುವಂತೆ ಆಗ್ರಹಿಸಿ ವಿಧಾನಸಭೆಯಲ್ಲಿ ಬುಧವಾರ ನಿರ್ಣಯ ಅಂಗೀಕರಿಸಲಾಯಿತು.

ಈ ವಿಚಾರವಾಗಿ ಕೇಂದ್ರ ಸರ್ಕಾರವು ಇಲ್ಲಿನ ಚುನಾಯಿತ ಪ್ರತಿನಿಧಿಗಳ ಜತೆ ಸಂವಾದ ನಡೆಸಬೇಕು ಎಂದೂ ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಈ ನಿರ್ಣಯದ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು ನಿರ್ಣಯದ ಪ್ರತಿಗಳನ್ನು ಹರಿದು, ಸ್ಪೀಕರ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ‘ಜೈ ಶ್ರೀ ರಾಮ್’ ಘೋಷಣೆಗಳು ಪ್ರತಿಧ್ವನಿಸಿದವು.

ವಿರೋಧ ಪಕ್ಷದ ಸದಸ್ಯರ ಗದ್ದಲಗಳ ನಡುವೆಯೇ ಸ್ಪೀಕರ್ ನಿರ್ಣಯದ ಪ್ರಸ್ತಾವವನ್ನು ಧ್ವನಿ ಮತಕ್ಕೆ ಹಾಕಿದರು. ಗದ್ದಲವಿದ್ದರಿಂದ ಚರ್ಚೆ ನಡೆಯದೇ ನಿರ್ಣಯ ಅಂಗೀಕಾರವಾಯಿತು. ಧ್ವನಿ ಮತದ ವೇಳೆ ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ), ಪಿಡಿಪಿ, ಪೀಪಲ್ಸ್ ಕಾನ್ಫರೆನ್ಸ್, ಸಿಪಿಐ (ಎಂ) ಸದಸ್ಯರು ನಿರ್ಣಯವನ್ನು ಬೆಂಬಲಿಸಿದರು.

ಪ್ರತಿಧ್ವನಿಸಿದ ಘೋಷಣೆಗಳು: ನಿರ್ಣಯ ವಿರೋಧಿಸಿದ ಬಿಜೆಪಿ ಸದಸ್ಯರು, ‘ಆಗಸ್ಟ್ 5 ಜಿಂದಾಬಾದ್’, ‘ಜೈ ಶ್ರೀ ರಾಮ್’, ‘ವಂದೇ ಮಾತರಂ’, ‘ದೇಶ ವಿರೋಧಿ ಕಾರ್ಯಸೂಚಿ ನಡೆಯಲ್ಲ’, ‘ಜಮ್ಮು ವಿರೋಧಿ ಕಾರ್ಯಸೂಚಿ ನಡೆಯಲ್ಲ’, ‘ಪಾಕಿಸ್ತಾನಿ ಕಾರ್ಯಸೂಚಿಯೂ ನಡೆಯಲ್ಲ’ ಎಂದು ಘೋಷಣೆಗಳನ್ನು ಕೂಗಿದರು. ಅಲ್ಲದೆ ‘ಸ್ಪೀಕರ್ ಗೋ ಬ್ಯಾಕ್’, ‘ಕಾನೂನುಬಾಹಿರ ನಿರ್ಣಯವನ್ನು ಹಿಂಪಡೆಯಿರಿ’ ಎಂಬ ಘೋಷಣೆಗಳನ್ನೂ ಕೂಗಿದರು.

ನಿರ್ಣಯ ಅಂಗೀಕಾರವಾದ ಬೆನ್ನಲ್ಲೇ ಎನ್‌ಸಿ, ತನ್ನ ಪ್ರಣಾಳಿಕೆಯ ಭರವಸೆಗಳಲ್ಲಿ ಒಂದನ್ನು ಈಡೇರಿಸಲಾಗಿದೆ ಎಂದು ಪ್ರತಿಕ್ರಿಯಿಸಿದೆ. ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು, ‘ವಿಧಾನಸಭೆಯು ತನ್ನ ಕೆಲಸ ಮಾಡಿದೆ’ ಎಂದು ಹೇಳಿದರು. ನಿರ್ಣಯ ಅಂಗೀಕಾರವನ್ನು ವಿವಿಧ ರಾಜಕೀಯ ಪಕ್ಷಗಳು ಸ್ವಾಗತಿಸಿವೆ.

ಜಮ್ಮು ಮತ್ತು ಕಾಶ್ಮೀರದ ಉಪ ಮುಖ್ಯಮಂತ್ರಿ ಸುರಿಂದರ್ ಚೌಧರಿ ನಿರ್ಣಯ ಮಂಡಿಸಿದರು. ವಿಶೇಷ ಸ್ಥಾನಮಾನವನ್ನು ಏಕಪಕ್ಷೀಯವಾಗಿ ತೆಗೆದುಹಾಕಿದ್ದಕ್ಕೆ ನಿರ್ಣಯದಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ. ಮರುಸ್ಥಾಪನೆಯ ಯಾವುದೇ ಪ್ರಕ್ರಿಯೆಯು ರಾಷ್ಟ್ರೀಯ ಏಕತೆ, ಜಮ್ಮು ಮತ್ತು ಕಾಶ್ಮೀರದ ಜನರ ಕಾನೂನುಬದ್ಧ ಆಕಾಂಕ್ಷೆಗಳನ್ನು ರಕ್ಷಿಸಬೇಕು ಎಂದೂ ಹೇಳಲಾಗಿದೆ.



ಸ್ಪೀಕರ್ ಪೀಠದ ಮುಂಭಾಗ ಮತ್ತು ಅಲ್ಲಿನ ಮೇಜಿನ ಮೇಲೆ ನಿಂತು ಬಿಜೆಪಿ ಸದಸ್ಯರು ಪ್ರತಿಭಟಿಸಿದರು ಎಎಫ್‌ಪಿ ಚಿತ್ರ

ತಿರಸ್ಕರಿಸಿದ ಬಿಜೆಪಿ

ಬಿಜೆಪಿ ಸದಸ್ಯರು ಕಲಾಪದಲ್ಲಿ ನಿರ್ಣಯವನ್ನು ವಿರೋಧಿಸಿದರು. ‘ಇದು ಕಲಾಪಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಪಟ್ಟಿಯ ಭಾಗವಲ್ಲ. ಲೆಫ್ಟಿನೆಂಟ್ ಜನರಲ್ ಅವರ ಭಾಷಣದ ಮೇಲಿನ ಚರ್ಚೆಯಿದೆ ಎಂದು ನಮಗೆ ನೀಡಿರುವ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಹೀಗಾಗಿ ನಿರ್ಣಯವನ್ನು ತಿರಸ್ಕರಿಸುತ್ತೇವೆ’ ಎಂದು ಸದಸ್ಯರು ಹೇಳಿದರು.

‘ಇಲ್ಲಿ ನಿರ್ಣಯ ವಿಷಯದಲ್ಲಿ ಪಕ್ಷಗಳ ನಡುವೆ ಸ್ಪರ್ಧೆಯಿದೆ. ಆದರೆ ಏನೂ ಆಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಏಕೆಂದರೆ ಈ ಕಾಯ್ದೆಯು ದೇಶದ ಪ್ರಜಾಪ್ರಭುತ್ವದ ಅತಿದೊಡ್ಡ ದೇವಾಲಯವಾದ ಸಂಸತ್ತಿನಲ್ಲಿ ಅಂಗೀಕಾರವಾಗಿದೆ’ ಎಂದರು.

ಮಿಥುನ್ ಚಕ್ರವರ್ತಿ ವಿರುದ್ಧ ಎಫ್‌ಐಆರ್




ಕೋಲ್ಕತ್ತ (ಪಿಟಿಐ): ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ, ಬಿಜೆಪಿ ನಾಯಕ ಮಿಥುನ್ ಚಕ್ರವರ್ತಿ ಅವರು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಕಾರ್ಯಕ್ರಮವೊಂದ-ರಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಬಿಧಾನನಗರ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿದ್ದಾರೆ.

‘ಅಕ್ಟೋಬರ್ 27ರಂದು ಸಾಲ್ಟ್ ಲೇಕ್ ಪ್ರದೇಶದಲ್ಲಿ ನಡೆದ ಬಿಜೆಪಿ ಕಾರ್ಯಕ್ರಮದಲ್ಲಿ ಮಿಥುನ್ ಚಕ್ರವರ್ತಿ ಪ್ರಚೋದನಕಾರಿ ಭಾಷಣ ಮಾಡಿದ್ದರು. ಆ ಸಂಬಂಧ ಎಫ್‌ಐಆರ್ ದಾಖಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಕುರಿತು ನಡೆದ ಈ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಉಪಸ್ಥಿತರಿದ್ದರು.

ಈ ಕುರಿತು ಮಿಥುನ್ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ. ಆದರೆ, ಈ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಸುಕಾಂತ ಮಜುಂದಾರ್, ‘ಇದು ಸೇಡಿನ ರಾಜಕಾರಣ. ಮಿಥುನ್ ಅವರ ಭಾಷಣದಲ್ಲಿ ಪ್ರಚೋದನಾರಿ ಅಂಶವೇ ಇರಲಿಲ್ಲ. ಪೊಲೀಸರು ಇದನ್ನು ರಾಜಕೀಯ ಸಾಧನವಾಗಿ ಬಳಸಿಕೊಂಡು, ಬೆದರಿಸುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

‘2026ರ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಸಿಂಹಾಸನ ಬಿಜೆಪಿಗೆ ದೊರೆಯುತ್ತಿದೆ. ಈ ಗುರಿ ಸಾಧನೆಗೆ ನಾವು ಎಲ್ಲವನ್ನೂ ಮಾಡುತ್ತೇವೆ’ ಎಂದು ಮಿಥುನ್ ಭಾಷಣದಲ್ಲಿ ಹೇಳಿದ್ದರು.

ಲೋಕಸಭಾ ಚುನಾವಣೆ ವೇಳೆ ಟಿಎಂಸಿ ಶಾಸಕ ಹುಮಾಯೂನ್ ಕಬೀರ್ ಅವರು ಕೋಮುವಾದಿ ಹೇಳಿಕೆಗಳನ್ನು ನೀಡಿದ್ದರು ಎಂದೂ ಉಲ್ಲೇಖಿಸಿದ್ದ ಮಿಥುನ್, ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಕೇಸರಿ ಪಕ್ಷದ ಮತದಾರರನ್ನು ಹೆದರಿಸಿ, ಮತದಾನದಿಂದ ದೂರವಿರುವಂತೆ ಮಾಡಲು ಯಾರೂ ಯತ್ನಿಸಬಾರದು ಎಂದು ಎಚ್ಚರಿಸಿದ್ದರು.



❦ ಸುಭಾಷಿತ ❦

ಧೈರ್ಯಶಾಲಿಗಳಾಗಿರಿ, ನಂಬಿಕೆ ಇಡಿ, ಮುಂದುವರಿಯಿರಿ.
-ಥಾಮಸ್ ಅಲ್ವ ಎಡಿಸನ್

ಮದರಸಾ ಮಂಡಳಿ ಕುರಿತ ತೀರ್ಪು ಧರ್ಮನಿರಪೇಕ್ಷ ತತ್ವಕ್ಕೆ ರಕ್ಷೆ

‘ಉತ್ತರಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯ್ದೆ- 2004’ರ ಸಾಂವಿಧಾನಿಕ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿಯುವ ಮೂಲಕ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಕೆಲಸ ಮಾಡಿದೆ. ಅಲ್ಲದೆ, ದೇಶದ ಸಂವಿಧಾನದ ಧರ್ಮನಿರಪೇಕ್ಷ ತತ್ವಗಳನ್ನು ರಕ್ಷಿಸಲಾಗುತ್ತದೆ ಎಂಬ ಭರವಸೆಯನ್ನು ಸುಪ್ರೀಂ ಕೋರ್ಟ್ ಈ ತೀರ್ಪಿನ ಮೂಲಕ ನೀಡಿದೆ. ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದವರು ಸೇರಿದಂತೆ, ವಿವಿಧ ಧಾರ್ಮಿಕ ಸಮುದಾಯಗಳಿಗೆ ಸೇರಿದವರ ಸಂಸ್ಥೆಗಳ ಅಧೀನದಲ್ಲಿ ಇರುವ ಶಿಕ್ಷಣ ಸಂಸ್ಥೆಗಳ ಸಂಖ್ಯೆ ದೊಡ್ಡದಾಗಿಯೇ ಇದೆ. ಈ ಕಾರಣದಿಂದಾಗಿ ಸುಪ್ರೀಂ ಕೋರ್ಟ್‌ನ ಈ ತೀರ್ಪು ಮಹತ್ವ ಪಡೆದುಕೊಳ್ಳುತ್ತದೆ. ಮದರಸಾಗಳನ್ನು ಆರಂಭಿಸುವುದು, ಸಂವಿಧಾನವು ಧಾರ್ಮಿಕ ಅಲ್ಪಸಂಖ್ಯಾತರಿಗೆ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಲು ನೀಡಿರುವ ಹಕ್ಕಿಗೆ ಅನುಗುಣವಾಗಿಯೇ ಇದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಆದರೆ, ಅವು ಒದಗಿಸುವ ಶಿಕ್ಷಣದ ಗುಣಮಟ್ಟದ ಮೇಲೆ ಕಾನೂನಿನ ನಿಯಂತ್ರಣ ಇರುವಂತಾಗಲು ಶಾಸನವೊಂದರ ಅಗತ್ಯವನ್ನು ಕೋರ್ಟ್ ಅನುಮೋದಿಸಿದೆ. ಮದರಸಾಗಳಲ್ಲಿನ ಶಿಕ್ಷಣ ಕ್ರಮಕ್ಕೆ ಸಂಬಂಧಿಸಿದ ಈ ಕಾಯ್ದೆಯನ್ನು ಅಲಹಾಬಾದ್ ಹೈಕೋರ್ಟ್ ರದ್ದುಪಡಿಸಿದ ನಂತರದಲ್ಲಿ, ಉತ್ತರಪ್ರದೇಶದ ಮದರಸಾಗಳು ಸಂಕಷ್ಟಕ್ಕೆ ಸಿಲುಕಿದ್ದವು. ಈ ಮದರಸಾಗಳಲ್ಲಿ ಆಧುನಿಕ ಜ್ಞಾನ ಶಾಖೆಗಳನ್ನು ಇಸ್ಲಾಮಿಕ್ ಪಠ್ಯಗಳ ಜೊತೆಯಲ್ಲೇ ಕಲಿಸಲಾಗುತ್ತದೆ. ಈ ಶಿಕ್ಷಣ ಸಂಸ್ಥೆಗಳು ಸಂವಿಧಾನ ಹೇಳುವ ಧರ್ಮನಿರಪೇಕ್ಷ ತತ್ವವನ್ನು ಉಲ್ಲಂಘಿಸುತ್ತಿವೆ ಎಂದು ಹೈಕೋರ್ಟ್ ಹೇಳಿತ್ತು.



ವಿವಿಧ ಧರ್ಮ ಹಾಗೂ ಸಂಸ್ಕೃತಿಗಳ ಸಂಗಮ ಎಂದು ಪರಿಗಣಿತವಾಗಿರುವ ಈ ದೇಶದಲ್ಲಿ ಮದರಸಾಗಳ ಮಹತ್ವದ ಪಾತ್ರವನ್ನು ಕೋರ್ಟ್ ಸ್ಪಷ್ಟವಾಗಿ ಹೇಳಿದೆ

ಮದರಸಾಗಳಲ್ಲಿ ಅಭ್ಯಾಸ ಮಾಡುತ್ತಿರುವ ಲಕ್ಷಾಂತರ ಮಂದಿ ವಿದ್ಯಾರ್ಥಿಗಳನ್ನು ಹೈಕೋರ್ಟ್ ಆದೇಶದ ಪರಿಣಾಮವಾಗಿ ಸಾಂಪ್ರದಾಯಿಕ ಶಾಲೆಗಳಿಗೆ ಕಳುಹಿಸಬೇಕಾದ ಅಗತ್ಯ ಎದುರಾಗುತ್ತದೆ, ಮದರಸಾಗಳು ಅಸಂಗತ ಆಗುತ್ತವೆ ಎಂಬ ಆತಂಕ ವ್ಯಕ್ತವಾಗಿತ್ತು. ಆದರೆ ಈ ಆತಂಕವನ್ನು ಸುಪ್ರೀಂ ಕೋರ್ಟ್ ದೂರ ಮಾಡಿದೆ. ಮದರಸಾಗಳು ವಹಿಸಿರುವ ಮಹತ್ವದ ಪಾತ್ರವನ್ನು ಸುಪ್ರೀಂ ಕೋರ್ಟ್ ಗುರುತಿಸಿದೆ. ಇದರ ಜೊತೆಯಲ್ಲೇ, ರಾಜ್ಯದಲ್ಲಿ 13,364 ಮದರಸಾಗಳು 12 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸುತ್ತಿವೆ ಎಂಬುದನ್ನು ಕೋರ್ಟ್ ಗುರುತಿಸಿದೆ. ‘ಮದರಸಾಗಳು ಧಾರ್ಮಿಕ ಬೋಧನೆಯಲ್ಲಿ ತೊಡಗಿವೆಯಾದರೂ, ಅವುಗಳ ಮೂಲ ಉದ್ದೇಶ ಶಿಕ್ಷಣ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಬೇಕಾದ ಹೊಣೆ ಸರ್ಕಾರಗಳ ಮೇಲೆ ಇದೆಯಾದರೂ, ತಮ್ಮ ಸಂಸ್ಥೆಗಳ ವಿಚಾರವಾಗಿ ಧಾರ್ಮಿಕ ಅಲ್ಪಸಂಖ್ಯಾತರು ಹೊಂದಿರುವ ಹಕ್ಕುಗಳು ಈ ಹೊಣೆಗೆ ಅಡ್ಡಿಯಾಗುವ ರೀತಿಯಲ್ಲೇನೂ ಇಲ್ಲ. ‘ಶಿಕ್ಷಣ ಸಂಸ್ಥೆಯೊಂದನ್ನು ಅಲ್ಪಸಂಖ್ಯಾತ ಸಮುದಾಯ ನಡೆಸುತ್ತಿದೆ ಎಂದಮಾತ್ರಕ್ಕೆ ಅಥವಾ ಬಹುಸಂಖ್ಯಾತ ಸಮುದಾಯ ನಡೆಸುತ್ತಿದೆ ಹಾಗೂ ಅದು ಆ ಸಮುದಾಯದ ಬೋಧನೆಗಳನ್ನು ಹೇಳಿಕೊಡುತ್ತಿದೆ ಎಂದಮಾತ್ರಕ್ಕೆ, ಅಂತಹ ಸಂಸ್ಥೆಗಳಲ್ಲಿನ ಬೋಧನೆಗಳು ಶಿಕ್ಷಣದ ವ್ಯಾಪ್ತಿಗೆ ಹೊರತಾಗಿವೆ ಎನ್ನಲಾಗದು’ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಮದರಸಾಗಳ ಮೇಲೆ ಉತ್ತರಪ್ರದೇಶ ಮಾತ್ರವೇ ಅಲ್ಲದೆ ಬೇರೆ ರಾಜ್ಯಗಳಲ್ಲಿಯೂ ಒಂದಿಷ್ಟು ಒತ್ತಡಗಳು ಇವೆ. ಅದರಲ್ಲೂ ಮುಖ್ಯವಾಗಿ ಅಸ್ಸಾಂ ಹಾಗೂ ಮಧ್ಯಪ್ರದೇಶದಲ್ಲಿ ಈ ಸಮಸ್ಯೆ ಇದೆ. ಮಕ್ಕಳ ಹಕ್ಕುಗಳ ರಕ್ಷಣೆಗಾಗಿನ ರಾಷ್ಟ್ರೀಯ ಆಯೋಗವು (ಎನ್‌ಸಿಪಿಸಿಆರ್) ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಈಚೆಗೆ ಪತ್ರವೊಂದನ್ನು ಬರೆದು, ಮದರಸಾ ಮಂಡಳಿಗಳನ್ನು ಮುಚ್ಚಬೇಕು, ಸರ್ಕಾರದಿಂದ ಈ ಸಂಸ್ಥೆಗಳಿಗೆ ಕೊಡುವ ಅನುದಾನ ನಿಲ್ಲಿಸಬೇಕು, ಆ ಸಂಸ್ಥೆಗಳಲ್ಲಿ ಓದುತ್ತಿರುವ ಮಕ್ಕಳನ್ನು ಬೇರೆ ಶಾಲೆಗಳಿಗೆ ಸೇರಿಸಬೇಕು ಎಂದು ಶಿಫಾರಸು ಮಾಡಿದೆ. ಮದರಸಾಗಳಲ್ಲಿ ಮಕ್ಕಳಿಗೆ ಒದಗಿಸುವ ಶಿಕ್ಷಣವು ಸಮಗ್ರವಾಗಿ ಇಲ್ಲ, ಅದು ಸೂಕ್ತವಾಗಿಲ್ಲ ಎಂದು ಎನ್‌ಸಿಪಿಸಿಆರ್ ಹೇಳಿದೆ. ಈ ಸಂಸ್ಥೆಗಳು ಶಿಕ್ಷಣ ಹಕ್ಕು ಕಾಯ್ದೆಯ ಆಶಯಗಳನ್ನು ಪಾಲಿಸುತ್ತಿಲ್ಲ ಎಂದು ದೂರಿದೆ. ಎನ್‌ಸಿಪಿಸಿಆರ್‌ನ ಈ ಕ್ರಮ ಹಾಗೂ ಕೆಲವು ರಾಜ್ಯ ಸರ್ಕಾರಗಳ ಕ್ರಮವನ್ನು ಮುಸ್ಲಿಂ ಸಮುದಾಯ ಮತ್ತು ಅದಕ್ಕೆ ಸೇರಿದ ಸಂಸ್ಥೆಗಳನ್ನು ಗುರಿಯಾಗಿಸಿಕೊಳ್ಳುವ ಕ್ರಮವೆಂದೇ ಪರಿಗಣಿಸಬೇಕಾಗುತ್ತದೆ. ಈಗ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಮದರಸಾಗಳ ವಿರುದ್ಧದ ಅಭಿಯಾನವನ್ನು ಎದುರಿಸಲು ನೆರವಾಗುತ್ತದೆ. ವಿವಿಧ ಧರ್ಮ ಹಾಗೂ ಸಂಸ್ಕೃತಿಗಳ ಸಂಗಮ ಎಂದು ಪರಿಗಣಿತವಾಗಿರುವ ಈ ದೇಶದಲ್ಲಿ ಮದರಸಾಗಳ ಮಹತ್ವದ ಪಾತ್ರವನ್ನು ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ದಿನದ ಟ್ವೀಟ್


ದತ್ತಾಂಶ ಸಂಗ್ರಹ: ಕಾನೂನು ಬಿಗಿಯಾಗಲಿ



ಸೂಕ್ಷ್ಮವಾದ ಮಾಹಿತಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ದತ್ತಾಂಶ ಸಂಗ್ರಹಿಸಿದ್ದಕ್ಕಾಗಿ ದಕ್ಷಿಣ ಕೊರಿಯಾವು ಮೆಟಾ ಕಂಪನಿಗೆ 15.6 ದಶಲಕ್ಷ ಡಾಲರ್ ದಂಡ ವಿಧಿಸಿದೆ. ಭಾರತೀಯ ನಾಗರಿಕರ ಖಾಸಗಿತನವನ್ನು ಸಂರಕ್ಷಿಸುವುದಕ್ಕಾಗಿ ಭಾರತದಲ್ಲಿ ಕಟ್ಟುನಿಟ್ಟಾದ ದತ್ತಾಂಶ ಸಂರಕ್ಷಣಾ ಕಾನೂನನ್ನು ತುರ್ತಾಗಿ ಜಾರಿಗೆ ತರಬೇಕಾದ ಅಗತ್ಯವನ್ನು ಈ ಪ್ರಕರಣವು ಒತ್ತಿ ಹೇಳುತ್ತಿದೆ.

ಸಿಂಗೈ ಜಿ. ರಾಮಚಂದ್ರನ್, ತಮಿಳುನಾಡು ರಾಜಕಾರಣಿ, ಉದ್ಯಮಿ

ಕಿಡಿನುಡಿ



ಇಡೀ ಸರ್ಕಾರ ನನ್ನ ಕ್ಷೇತ್ರಕ್ಕೆ ದಂಡೆತ್ತಿ ಬಂದಿದೆ. ಇಲ್ಲಿ ಬಂದಿರುವ ಮಂತ್ರಿಗಳು, ಕಾಂಗ್ರೆಸ್ ಶಾಸಕರ ಕ್ಷೇತ್ರಗಳು ಹೇಗಿವೆ ಎಂದು ಹೇಳಲಿ. ನಾನು ಮುಖ್ಯಮಂತ್ರಿ ಆಗಿದ್ದಾಗ ಅಲ್ಪಸಂಖ್ಯಾತರ ದರ್ಗಾ, ಮಸೀದಿಗಳ ಅಭಿವೃದ್ಧಿಗೆ ₹ 10 ಕೋಟಿ ಕೊಟ್ಟಿದ್ದೆ. ಕಾಂಗ್ರೆಸ್‌ನವರು ಬಂದು ಅದನ್ನು ವಾಪಸ್ ಪಡೆದಿದ್ದಾರೆ. ಅಲ್ಪಸಂಖ್ಯಾತರ ಬಗ್ಗೆ ಅವರೇನು ಮಾತನಾಡುವುದು?

ಬಸವರಾಜ ಬೊಮ್ಮಾಯಿ, ಗದಗ-ಹಾವೇರಿ ಕ್ಷೇತ್ರದ ಬಿಜೆಪಿ ಸಂಸದ

50 ವರ್ಷಗಳ ಹಿಂದೆ

ಗುರುವಾರ, 7-11-1974

• ‘ಮಿಸಾ’ ಬಂಧನಗಳನ್ನು ಪಕ್ಕಾ ಮಾಡಲು ಯತ್ನ

ನವದೆಹಲಿ, ನ. 6– ಆಂತರಿಕ ಭದ್ರತಾ ಶಾಸನದ (ಮಿಸಾ) ಮೇರೆಗೆ ಬಂಧಿತರಾದ ಕೆಲವು ಮಂದಿ ಕಳ್ಳಸಾಗಾಣಿಕೆದಾರರನ್ನು ಕೆಲವು ಶ್ರೇಷ್ಠ ನ್ಯಾಯಾಲಯಗಳು ಬಿಡುಗಡೆ ಮಾಡಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ.

ಕೇಂದ್ರ ಹಣಕಾಸು ಮಂತ್ರಿ ಸಿ. ಸುಬ್ರಹ್ಮಣ್ಯಂ ಅವರು ಇಂದು ಇಲ್ಲಿ ಈ ವಿಷಯ ತಿಳಿಸಿದರು.

ತಮ್ಮ ಸಚಿವ ಖಾತೆಗೆ ಸಂಬಂಧಿಸಿದ ಸಂಸತ್ ಸಲಹಾ ಸಮಿತಿ ಸದಸ್ಯರ ಜತೆ ನಡೆಸಿದ ಚರ್ಚೆಯಲ್ಲಿ ಸುಬ್ರಹ್ಮಣ್ಯಂ ಅವರು ‘ನ್ಯಾಯಾಲಯಗಳ ಬಿಡುಗಡೆ ಆಜ್ಞೆ ಅಪಾಯಕಾರಿ ಸೂಚನೆ’ ಎಂದು ಉತ್ತರಿಸಿದರು.

ನ್ಯಾಯಾಲಯದ ತೀರ್ಪುಗಳು ಶಾಸನದಲ್ಲಿನ ಲೋಪ-ದೋಷಗಳೇನು ಎಂಬುದನ್ನು ಹೇಳಿಲ್ಲ. ಆದರೆ ಬಂಧನದ ಮೊಕದ್ದಮೆಗಳ ಸಿದ್ಧತೆಯಲ್ಲಿಯ ಲೋಪಗಳನ್ನು ಮಾತ್ರ ಪ್ರಮುಖವಾಗಿ ಎತ್ತಿ ಹೇಳಿವೆ ಎಂದೂ ಅವರು ನುಡಿದರು.

‘ಮಿಸಾ’ವನ್ನು ಸೂಕ್ತ ರೀತಿಯಲ್ಲಿ ಜಾರಿಗೆ ತರುವಂತೆ ಮಾಡುವುದು ಕೇಂದ್ರದ ಹೊಣೆಗಾರಿಕೆ ಎಂಬುದನ್ನು ಒಪ್ಪಿಕೊಂಡ ಸುಬ್ರಹ್ಮಣ್ಯಂ ಅವರು, ‘ಕಳ್ಳಸಾಗಾಣಿಕೆದಾರರನ್ನು ಬಂಧಿಸಿರುವುದು ಬಹುಮಟ್ಟಿಗೆ ರಾಜ್ಯ ಸರ್ಕಾರಗಳು’ ಎಂದರು.

ನ್ಯಾಯಾಲಯಗಳ ತೀರ್ಪಿನ ಪೂರ್ಣ ಪಾಠವನ್ನು ಸರ್ಕಾರ ನಿರೀಕ್ಷಿಸುತ್ತಿದೆ ಎಂದು ಕೇಂದ್ರ ಹಣಕಾಸು ಖಾತೆ ಸ್ಟೇಟ್ ಸಚಿವ ಪ್ರಣವ ಕುಮಾರ್ ಮುಖರ್ಜಿ ಅವರು ಪತ್ರಕರ್ತರ ಜತೆ ಅನೌಪಚಾರಿಕವಾಗಿ ಮಾತನಾಡುತ್ತಾ ತಿಳಿಸಿದರು.

• ನಗರದಲ್ಲಿ ಖೋಟಾ ನೋಟು ಮುದ್ರಕರ ತಂಡ ಪತ್ತೆ

ಬೆಂಗಳೂರು, ನ. 6– ಖೋಟಾನೋಟುಗಳ ಮುದ್ರಣ ಮತ್ತು ಪ್ರಸಾರದಲ್ಲಿ ನಿರತರಾಗಿದ್ದರೆಂದು ಹೇಳಲಾದ ಮೂವರ ತಂಡವೊಂದನ್ನು ನಗರದ ಪೊಲೀಸರು ಪತ್ತೆ ಮಾಡಿದ್ದಾರೆ.

ಮೈಸೂರು ರೋಡ್‌ನಲ್ಲಿರುವ ಮುದ್ರಣಾಲಯವೊಂದರ ಮಾಲೀಕನ ಮನೆಯ ಮೇಲೆ ಪೊಲೀಸರು ನಿನ್ನೆ ದಾಳಿ ಮಾಡಿ ಖೋಟಾ ನೋಟುಗಳ ಕಟ್ಟುಗಳನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ. ಬಾಗಲಕೋಟೆ ಈ ವ್ಯವಹಾರದ ಕೇಂದ್ರವಾಗಿದ್ದಿತೆಂದು ಹೇಳಲಾಗಿದೆ.

ಪೊಲೀಸರು ಈ ಸಂಬಂಧದಲ್ಲಿ ಹೊಸಪೇಟೆಯ ಹುಲಗಪ್ಪ, ಮೆಹಬೂಬ್ ಮತ್ತು ಪಿ. ಅಲಿಖಾನ್ ಎಂಬುವರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ.

• ಕಳ್ಳಸಾಗಾಣಿಕೆ ಜೊತೆಗೆ ಅರಿವಿಲ್ಲದೆ ರೋಗಾಣು ಜೀವಿಗಳ ರವಾನೆ

ನವದೆಹಲಿ, ನ. 6– ಕಳ್ಳಸಾಗಾಣಿಕೆದಾರರು ವಿದೇಶಗಳಿಂದ ಬೆಲೆಬಾಳುವ ಸರುಕುಗಳನ್ನು ಸಾಗಿಸಿ ತರುವಾಗ ರೋಗಕಾರಕ ಕ್ರಿಮಿಗಳನ್ನೂ ವೈರಸ್ ಸಂಶೋಧನಾ ಕೇಂದ್ರದ ಅರಿವಿಗೆ ಬರದಂತೆ ದೇಶದೊಳಕ್ಕೆ ತರುತ್ತಾರೆ ಎಂದು ಪುಣೆಯಲ್ಲಿರುವ ವೈರಸ್ ಸಂಶೋಧನಾ ಕೇಂದ್ರದ ಡೈರೆಕ್ಟರ್ ಎನ್.ಪಿ.ಗುಪ್ತ ಅವರು ಮಂಗಳವಾರ ಆಕಾಶವಾಣಿ ಕಾರ್ಯಕ್ರಮವೊಂದರಲ್ಲಿ ತಿಳಿಸಿದರು.

ಕಳ್ಳಸಾಗಾಣಿಕೆದಾರರು ಸರಕನ್ನು ಹೊತ್ತುತರುವ ಅರಬ್ ದೋಣಿಗಳು ಮತ್ತು ಇತರ ವಾಹನಗಳಿಗೆ ಯಾವ ಆರೋಗ್ಯ ರಕ್ಷಣಾ ಕ್ರಮಗಳೂ ಅನ್ವಯಿಸುವುದಿಲ್ಲ, ಅವುಗಳ ತಪಾಸಣೆ ಸಾಧ್ಯವಾಗುವುದಿಲ್ಲ ಎಂದು ಅವರು ಹೇಳಿದರು.

ವಿಜ್ಞಾನ–ತಂತ್ರಜ್ಞಾನದ ಕೆಲಸಗಳ ಕುರಿತು ಜನ ಚರ್ಚಿಸಿ ಆನಂದಿಸಬೇಕು

ವಿಜ್ಞಾನದ ಬಗೆಗೇಕೆ ಅಜ್ಞಾನ?



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಅಡುಗೆ ಮನೆಯ ಗ್ಯಾಸ್‌ಲೈಟರ್‌ನಿಂದ ಹಿಡಿದು ಉಪಗ್ರಹ ಹಾರಿಸುವ ತಂತ್ರಜ್ಞಾನಗಳೆಲ್ಲ ವಿಜ್ಞಾನದ ತತ್ವಗಳ ಮೇಲೆಯೇ ರೂಪುಗೊಂಡಿವೆ. ಆದರೆ, ಅವುಗಳನ್ನು ಬಳಸುವ ಮೂಲಕ ವಿಜ್ಞಾನದಿಂದ ಬಂದ ಪ್ರಯೋಜನಗಳನ್ನು ಕಣ್ಮುಚ್ಚಿ ಸ್ವೀಕರಿಸುವ ಜನ, ತಮ್ಮ ಜೀವನದಲ್ಲಿ ಅದರ ಪಾತ್ರ, ಪ್ರಾಮುಖ್ಯ ಮತ್ತು ಅನಿವಾರ್ಯದ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ಏಕೆ ಹೀಗೆ ಎಂದು ಕೇಳಿದಾಗ ವಿಜ್ಞಾನಿ ರಾಜಾರಾಮಣ್ಣ, ‘ಅದೇನು ರಾಕೆಟ್ ಸೈನ್ಸ್ ಅಲ್ಲ. ಮನೆಗಳಲ್ಲಿ ಉಪಯೋಗಿಸುವ ಇಸ್ತ್ರಿ ಪೆಟ್ಟಿಗೆ, ಟಿ.ವಿ. ರಿಮೋಟ್, ಲೈಟ್ ಸ್ವಿಚ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬುದು ಗೊತ್ತಿರದ ದೊಡ್ಡ ಸಂಖ್ಯೆಯ ಜನ ಪ್ರತಿ ದೇಶದಲ್ಲೂ ಇದ್ದಾರೆ. ಅವರಿಗೆಲ್ಲ ಅದು ಗೊತ್ತಾದ ದಿನ ವಿಜ್ಞಾನ ಜೀವಿಸುತ್ತದೆ, ಇಲ್ಲದಿದ್ದರೆ ಜಡವಾಗುತ್ತದೆ’ ಎಂದಿದ್ದರು.

ಇದೇ ಪ್ರಶ್ನೆಗೆ ಉತ್ತರ ನೀಡಿದ್ದ ಐನ್‌ಸ್ಟೀನ್, ವಿಜ್ಞಾನದ ಅನುಕೂಲ ಪಡೆದುಕೊಂಡರೆ ಸಾಲದು, ಅದರ ಸಾರವನ್ನು ಸವಿಯಬೇಕು. ರುಚಿಯಾದ ಖಾದ್ಯವನ್ನು ಸೇವಿಸುವಾಗ ರುಚಿಗೆ ಕಾರಣವಾದ ಅಂಶಗಳನ್ನು ಹೊಗಳುತ್ತಾ ವಿಮರ್ಶಿಸುತ್ತಾ ರುಚಿಯನ್ನು ಆಸ್ವಾದಿಸುತ್ತೇವಲ್ಲವೇ? ರುಚಿಯಾಗಿ ಇರದಿದ್ದರೆ ರುಚಿಯಾಗಿಲ್ಲ ಎಂದು ಸಿಟ್ಟು ತೋರಿಸುತ್ತೇವೆ, ಸರಿಮಾಡಲು ಹೇಳುತ್ತೇವೆ. ಹಾಗೆಯೇ ವಿಜ್ಞಾನ- ತಂತ್ರಜ್ಞಾನದ ಕೆಲಸಗಳನ್ನು ಜನ ಚರ್ಚಿಸಿ ಆನಂದಿಸಬೇಕು, ಅನನುಕೂಲಗಳಾದಾಗ ಟೀಕಿಸಬೇಕು. ವಿಜ್ಞಾನದ ವಿಷಯಗಳು ರಾಜಕೀಯ, ಆಟ, ಸಿನಿಮಾ ಗಾಸಿಪ್‌ಗಳಂತೆ ಎಲ್ಲೆಡೆ ಚರ್ಚೆಗೆ ಒಳಪಡಬೇಕು’ ಎಂದಿದ್ದರು.

ಈ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವ ಅಗತ್ಯದ ಬಗ್ಗೆ 25 ವರ್ಷಗಳ ಹಿಂದೆ ಹಂಗೆರಿಯ ಬುಡಾಪೆಸ್ಟ್‌ನಲ್ಲಿ ಜರುಗಿದ ವಿಶ್ವ ವಿಜ್ಞಾನ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ವಿಜ್ಞಾನದ ಕೆಲಸಗಳನ್ನು ಜನರ ಬಳಿಗೆ ಕೊಂಡೊಯ್ಯಲು ಮತ್ತು ವಿಜ್ಞಾನದಿಂದ ವಿಶ್ವಶಾಂತಿ ಹಾಗೂ ಅಭಿವೃದ್ಧಿಯನ್ನು ಸಾಧಿಸುತ್ತೇವೆಂದು ಪಣ ತೊಡಲು ಪ್ರತಿವರ್ಷ ನವೆಂಬರ್ 10ರಂದು ವಿಶ್ವ ವಿಜ್ಞಾನ ದಿನವನ್ನು ಆಚರಿಸಬೇಕೆಂದು ನಿರ್ಧರಿಸಲಾಯಿತು. ವೈಜ್ಞಾನಿಕ ಸಂಶೋಧನೆಗಳ ಗುರಿಗಳ ಬಗ್ಗೆ ಜನರಿಗೆ ತಿಳಿದಿರಬೇಕು ಮತ್ತು ಅನ್ವೇಷಣೆಯೊಂದು ತಪ್ಪಾಗಿ ಬಳಕೆಯಾದಲ್ಲಿ ಅದನ್ನು ವಿರೋಧಿಸಲು ಜನ ಹಿಂಜರಿಯಬಾರದು ಎಂಬ ಆಶಯದೊಂದಿಗೆ ದಿನಾಚರಣೆಯನ್ನು ಪ್ರಾರಂಭಿಸಲಾಯಿತು.

ವಿಜ್ಞಾನ- ತಂತ್ರಜ್ಞಾನದ ಮಹತ್ವದ ಫಲಗಳಾದ ಯಾಂತ್ರಿಕ ಬುದ್ಧಿಮತ್ತೆ (ಯಾಂಬು), ಕ್ವಾಂಟಮ್ ಕಂಪ್ಯೂಟರ್, ಹೈಪರ್ ಲೂಪ್ ರೈಲು, ಚಾಲಕನಿಲ್ಲದ ಕಾರು, ಖಾಸಗಿ ಬಾಹ್ಯಾಕಾಶ ಪ್ರವಾಸ, ಹಾರಿದ ಜಾಗಕ್ಕೆ ಹಿಂತಿರುಗಿಬರಬಲ್ಲ ರಾಕೆಟ್ ಲಾಂಚರ್‌ಗಳು, ಸ್ಯಾಟಲೈಟ್ ಇಂಟರ್ನೆಟ್, ಐ.ಒ.ಟಿ. (ಇಂಟರ್ನೆಟ್ ಆಫ್ ಥಿಂಗ್ಸ್), ಹೆಲಿಟ್ಯಾಕ್ಸಿ, ಹೊಸ ಹೊಸ ಲಸಿಕೆ, ಔಷಧ, ಬಗೆ ಬಗೆಯ ವಸ್ತ್ರ, ನ್ಯಾನೊ ಮತ್ತು ತ್ರೀಡಿ ಪ್ರಿಂಟೆಡ್ ಸಾಧನಗಳು, ಆಹಾರ, ತರಕಾರಿಗಳು ಇಡೀ ವಿಶ್ವವನ್ನೇ ತನ್ನ ತೆಕ್ಕೆಯಲ್ಲಿ ಇರಿಸಿಕೊಂಡಿವೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಾಗುವ ಕೆಲಸಗಳು ಯಾವುದೇ ದೇಶದ ದೀರ್ಘಕಾಲೀನ ಬೆಳವಣಿಗೆ ಮತ್ತು ಕ್ರಿಯಾಶೀಲತೆಯನ್ನು ಉದ್ದೀಪಿಸಿ, ಆ ದೇಶವನ್ನು ಒಳಗಿನಿಂದ ಗಟ್ಟಿಗೊಳಿಸುತ್ತವೆ. ಆದರೆ ಅಣುಬಾಂಬಿನ ವಿಷಯದಲ್ಲಿ ಆದದ್ದೇ ಬೇರೆ. ‘ಹಿಟ್ಲರ್‌ನ ನಾಜಿ ಗುಂಪಿನ ವಿಜ್ಞಾನಿಗಳು ಪರಮಾಣು ಬಾಂಬ್ ತಯಾರಿಸುವಲ್ಲಿ ಯಶಸ್ಸು ಗಳಿಸುವುದರಲ್ಲಿದ್ದಾರೆ, ನೀವು ಸಹ ಅದರ ತಯಾರಿಕೆಗೆ ಗಮನಹರಿಸಬೇಕು’ ಎಂದು ವಿಜ್ಞಾನಿ ಐನ್‌ಸ್ಟೀನ್ ಸಹವಿಜ್ಞಾನಿ ಲಿಯೊ ಜಿರಾಲ್ಡ್ ಅವರೊಂದಿಗೆ ಚರ್ಚಿಸಿ, ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಅವರಿಗೆ 1939ರಲ್ಲಿ ಪತ್ರ ಬರೆದರು. ಅಧ್ಯಕ್ಷ ಎಚ್ಚೆತ್ತುಕೊಂಡರು. ‘ಮ್ಯಾನ್‌ಹಟನ್’ ಯೋಜನೆಗೆ ಚಾಲನೆ ದೊರೆಯಿತು. ಬಾಂಬ್ ತಯಾರಿಸಲಾಯಿತು. ಆರು ವರ್ಷಗಳ ನಂತರ ಜಪಾನ್‌ನ ನಗರಗಳ ಮೇಲೆ ಬಾಂಬ್ ಹಾಕಿ, ಆ ನಗರಗಳನ್ನು ಅಕ್ಷರಶಃ ನೆಲಸಮಗೊಳಿಸಲಾಯಿತು. 2 ಲಕ್ಷಕ್ಕೂ ಹೆಚ್ಚು ಜನರ ಪ್ರಾಣಹರಣವಾಯಿತು. ಕಾಯಬೇಕಾಗಿದ್ದ ವಿಜ್ಞಾನವು ಕೊಲ್ಲುವ ಕೆಲಸ ಮಾಡಿ ವಿನಾಶದ ಮುನ್ನುಡಿ ಬರೆದಿತ್ತು. ಇತ್ತೀಚೆಗೆ ಪ್ರವರ್ಧಮಾನಕ್ಕೆ ಬರುತ್ತಿರುವ ಯಾಂಬು ತನ್ನ ತರಹೇವಾರಿ ಕೆಲಸಗಳಿಂದ ಅಣುಬಾಂಬಿಗಿಂತ ದೊಡ್ಡ ತಲ್ಲಣ ಸೃಷ್ಟಿಸಿದೆ. ಸ್ವಯಂ ಕಲಿಕೆಯ ಪಟ್ಟುಗಳನ್ನು ವ್ಯವಸ್ಥಿತವಾಗಿ ಕಲಿಯುತ್ತಿರುವ ಯಂತ್ರಗಳು ಭಾವನಾತ್ಮಕ ಆಯಾಮ ಪಡೆದರೆ ಮನುಕುಲದ ಅಸ್ತಿತ್ವವೇ ಪ್ರಶ್ನೆಗೆ ಒಳಗಾಗಬಹುದು ಎಂಬ ದೊಡ್ಡ ಆತಂಕ ಎದುರಾಗಿದೆ.

ವಿಜ್ಞಾನ ವಿಕಾಸಗೊಂಡಂತೆಲ್ಲ ಅದರ ಸಿದ್ಧಾಂತಗಳು ಆಯಾ ಕಾಲದ ಗುಣಧರ್ಮ ಮತ್ತು ವಾಸ್ತವತೆಗೆ ಸಂಬಂಧಿಸಿದಂತೆ ಪರೀಕ್ಷೆ ಎದುರಿಸುತ್ತವೆ. ತಂತ್ರಜ್ಞಾನ ಕಾಲಿಟ್ಟ ಜಾಗದಲ್ಲೆಲ್ಲ ದೌರ್ಬಲ್ಯಕ್ಕೆ, ತಾರತಮ್ಯಕ್ಕೆ ಸ್ಥಳವೇ ಇಲ್ಲ. ಆಗ ಸಬಲರು, ದುರ್ಬಲರು ಎಂಬ ವ್ಯತ್ಯಾಸ ಇರುವುದಿಲ್ಲ. ಉದಾಹರಣೆಗೆ, ಹಿಂದೆಲ್ಲಾ ವಿಜ್ಞಾನಕ್ಕಾಗಿ ದುಡಿದ, ಸಂಶೋಧನೆಗೆ ತಲೆಕೆಡಿಸಿಕೊಂಡ, ಇಂತಿಷ್ಟು ವಿದ್ಯಾಭ್ಯಾಸ ಮಾಡಿ ಕೌಶಲ ಉಳ್ಳವರು, ತರಬೇತಿ ಪಡೆದವರು ಕೃತಕ ಉಪಗ್ರಹ ನೌಕೆಗಳಲ್ಲಿ ಬಾಹ್ಯಾಕಾಶಕ್ಕೆ ಪ್ರಯಾಣಿಸಬಹುದಿತ್ತು. ಈಗ ಹಣ ಎಲ್ಲ ಗೆರೆಗಳನ್ನು ಅಳಿಸಿಹಾಕಿ ಸಾಮಾನ್ಯ, ಅಸಾಮಾನ್ಯರಿಬ್ಬರನ್ನೂ ಒಟ್ಟಿಗೆ ಕೂಡಿಸಿ, ರಾಕೆಟ್ ಚಿಮ್ಮಿಸಿ, ಎಲ್ಲರನ್ನೂ ಮೇಲೆ ಕಳಿಸಿ, ಸಮಾನರು ಎನ್ನುತ್ತದೆ.



ಪ್ರಕೃತಿಯ ರಹಸ್ಯಗಳನ್ನು ತೆರೆದಿಡುವಲ್ಲಿ ವಿಜ್ಞಾನದ ಪಾತ್ರ ಬಹಳ ದೊಡ್ಡದು ಮತ್ತು ಜನಜನಿತ. ಹಿಂದಿನ ನಾಲ್ಕುನೂರು ವರ್ಷಗಳಲ್ಲಿ ನಮ್ಮ ಭೌತಿಕ ಜಗತ್ತಿನ ಕುರಿತು ಬೃಹತ್ ಜ್ಞಾನ ಭಂಡಾರವನ್ನೇ ವಿಜ್ಞಾನ ನಮಗೆ ನೀಡಿದೆ. ಆರ್ಥಿಕತೆಯ ಬೆನ್ನೆಲುಬಾಗಿಯೂ ನಿಂತು ಕೋಟ್ಯಂತರ ಜನರ ಮನಸ್ಸಿನ ಮತ್ತು ಹೊಟ್ಟೆಯ ಹಸಿವು ನೀಗಿಸುತ್ತಿದೆ. ಆದರೂ ಹಲವು ಕಾರಣಗಳಿಗೆ ವಿಜ್ಞಾನವು ಜನರಿಂದ ದೂರವೇ ಉಳಿದಿದೆ. ವಿಜ್ಞಾನದ ಬಗ್ಗೆ ಆಸಕ್ತಿ ಹೊಂದಿರುವ ಜನ ಚದುರಿದಂತೆ ಇರುವುದು ಮತ್ತು ಸಂವಹನರಹಿತರಾಗಿ ಇರುವುದು, ವಿಜ್ಞಾನಿಗಳು ಸಾಮಾನ್ಯ ಜನರಿಂದ ದೂರ ಇರುವುದು, ಸಂಕಷ್ಟಗಳ ಸಮಯದಲ್ಲಿ ಜನರ ಅನುಮಾನ ಮತ್ತು ಭಯವನ್ನು ವೈಜ್ಞಾನಿಕವಾಗಿ ದೂರ ಮಾಡದಿರುವುದು, ಜನಪ್ರಿಯ ಮಾಧ್ಯಮಗಳು ವಿಜ್ಞಾನಕ್ಕೆ ಪ್ರಾಮುಖ್ಯ ನೀಡದಿರುವುದು, ವಿಜ್ಞಾನಿಯ ಕೆಲಸ ಹಾಗೂ ದೈನಂದಿನ ಜೀವನ ಎರಡೂ ತಾಳೆ ಆಗದಿರುವಂತಹ ಕಾರಣಗಳು ಇದರ ಹಿಂದಿವೆ.

ವೈಜ್ಞಾನಿಕ ಕೆಲಸಗಳು ಸಾಮಾಜಿಕ ಕೆಲಸಗಳೆ. ವಿಜ್ಞಾನದ ಬಳಕೆಯಿಂದ ಜನ ಸಂತೋಷಪಟ್ಟಾಗ ಅದರ ಶಕ್ತಿಯ ಅರಿವಾಗುತ್ತದೆ. ನಂತರ ಅದು ಜನರ ಚಿಂತನಾ ಕ್ರಮವನ್ನು ಸರಿಪಡಿಸಿ ಜೀವನದ ಬಗೆಗಿನ ದೃಷ್ಟಿಕೋನವನ್ನು ವೈಜ್ಞಾನಿಕ ನೆಲೆಯಲ್ಲಿ ಪುನರ್ ರೂಪಿಸುತ್ತದೆ. ಹಾಗೆ ವಿಜ್ಞಾನದಲ್ಲಿ ಉತ್ತರವಿದೆ ಎಂಬ ಭರವಸೆ ನೀಡಿ, ವಿಜ್ಞಾನವನ್ನು ಕಲಿಯಲು, ಪ್ರೀತಿಸಲು, ಬಳಸಲು ಪ್ರೇರೇಪಿಸುತ್ತದೆ. ಪ್ರಶ್ನಿಸುವ ಗುಣವನ್ನು ಬೆಳೆಸುತ್ತದೆ. ಜ್ಞಾನೋದಯವನ್ನು ಉಂಟುಮಾಡುತ್ತದೆ. ವರ್ತನೆಗಳನ್ನು ಸುಧಾರಿಸುತ್ತದೆ. ವೈಜ್ಞಾನಿಕ ಸಂಶೋಧನೆಗಳಿಗೆ ಬೆಂಬಲ ನೀಡುವಂತೆ ಜನರ ಮನವೊಲಿಸುತ್ತದೆ. ಸ್ಪರ್ಧಾ ಮನೋಭಾವವನ್ನು ಉದ್ದೀಪಿಸಿ ಜನಸಮುದಾಯವನ್ನು ಸದಾ ಮುಖ್ಯವಾಹಿನಿಯಲ್ಲಿ ಇರಿಸುತ್ತದೆ.

ವೈಜ್ಞಾನಿಕ ಪ್ರಗತಿಯು ಎರಡು ಅಲಗಿನ ಕತ್ತಿಯಂತೆ. ವಿಜ್ಞಾನದ ಪ್ರಯೋಜನಗಳನ್ನು ಗುರುತಿಸುವಾಗ ಅವು ಸಮುದಾಯದ ಸಮಸ್ಯೆಗಳಿಗೆ ಪರಿಹಾರ ನೀಡುತ್ತವೆಯೇ ಎಂದು ಲೆಕ್ಕ ಹಾಕಿ ಕೆಲಸ ಮಾಡಬೇಕು ಎಂಬುದು ಈಗಿನ ಸಮಾಜ ಚಿಂತಕರ ವಾದ. ವಿಜ್ಞಾನವನ್ನು ಸಂಪ್ರದಾಯದ ಪಂಜರದಲ್ಲಿ ಕೂಡಿಹಾಕಿದ್ದೇವೆ ಎಂಬ ಆರೋಪವು ನಮ್ಮ ಮೇಲಿದೆ. ಜನರು ವಿಜ್ಞಾನದ ಕಾಣಿಕೆಗಳನ್ನು ಸುಲಭವಾಗಿ ನಂಬುವುದಿಲ್ಲ. ಅದು ಗೆಲಿಲಿಯೊ, ನ್ಯೂಟನ್‌ನ ಕಾಲದಿಂದಲೂ ರುಜುವಾತಾಗಿದೆ. ಧಾರ್ಮಿಕ ನಂಬಿಕೆಗಳನ್ನು ಮೀರಿದ ಸತ್ಯವನ್ನು ಹೇಳಿದ ಯಾವೊಬ್ಬ ವಿಜ್ಞಾನಿಯೂ ನೆಮ್ಮದಿಯಾಗಿ ಬದುಕಲಿಲ್ಲ. ಯಾವಾಗ ವಿಜ್ಞಾನಿಗಳು ಹೇಳಿದಂತೆ, ತೋರಿಸಿದಂತೆ ಪ್ರಕೃತಿಯಲ್ಲಿ ಕಾಣಿಸುತ್ತಿತ್ತೋ ಆಗ ಜನ ಅವರನ್ನು ನಂಬಲು ಶುರು ಮಾಡಿದರು. ವಿಜ್ಞಾನದ ಹೊಸತೆಲ್ಲ ತಂತ್ರಜ್ಞಾನವಾಗಿ ಮನೆ ಮನೆಗೆ ಬರುವುದರಿಂದ ಅದರ ಬಳಕೆಯು ಜನರ ಚಿಂತನೆ, ನಡವಳಿಕೆ, ಹವ್ಯಾಸ, ವರ್ತನೆ ಮತ್ತು ನಂಬಿಕೆಗಳನ್ನು ಬಹುಬೇಗ ಬದಲಾಯಿಸುತ್ತದೆ. ಹಾಗೆಂದ ಮಾತ್ರಕ್ಕೆ ಅವರೆಲ್ಲ ಅದನ್ನು ಒಪ್ಪಿಕೊಂಡಿದ್ದಾರೆ ಎಂದೇನೂ ಅಲ್ಲ. ಭೂಮಿಯ ಬಿಸಿ ಏರುವುದನ್ನು ತಡೆಯಲು, ಬರಗಾಲ, ಪ್ರವಾಹ ನಿಯಂತ್ರಿಸಲು, ರೋಗ ವಾಸಿಮಾಡಲು, ಬೆಳೆ ಇಳುವರಿ ಹೆಚ್ಚಿಸಲು, ಜನರ ಹಸಿವು ನೀಗಿಸಲು ವಿಜ್ಞಾನ ಬೇಕೇ ಬೇಕು. ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಅದು ಸೋಪಾನವಾಗಬೇಕು.

ಚುರುಮುರಿ



ಕರುಳ ಸಂಬಂಧ ಸಾಹಿತ್ಯ!

• ಗುರು ಪಿ.ಎಸ್.

‘ಈ ಬಸ್‌ಗಳಲ್ಲಿ ಈಗೀಗ ಬರೋಕೇ ಆಗಲ್ಲ ರೀ, ಬರೀ ಜಗಳ’ ವಟಗುಡುತ್ತಾ ಒಳಗೆ ಬಂದಳು ಹೆಂಡತಿ.

‘ಏನು ಗಲಾಟೆ, ಯಾರ ನಡುವೆ ಜಗಳ’ ಕೇಳಿದೆ ಶಾಂತವಾಗಿ.

ಸೀಟಿಗಾಗಿ ಯಾರೋ ಇಬ್ಬರು ಜಗಳ ಮಾಡ್ತಿದ್ರು, ಆಗ ಒಬ್ಬ ಇದ್ದಕ್ಕಿದ್ದಂತೆ ಎದ್ದು, ಓಯ್, ಯಾರೂ ಮಾತಾಡೋ ಹಾಗಿಲ್ಲ, ಇದು ನಮ್ಮಪ್ಪನ ಬಸ್ ಅನ್ನೋದಾ?’

‘ಸರ್ಕಾರಿ ಬಸ್‌ನಲ್ಲೂ ಹಾಗಂದ್ರಾ?’

‘ಹ್ಞೂಂ ರೀ, ಅವನು ಆ ಬಸ್ ಡ್ರೈವರ್ ಮಗನಂತೆ’.

‘ಬಸ್‌ನಲ್ಲಿ ಪ್ರಯಾಣಿಕರು ಏನೂ ಹೇಳಲಿಲ್ವ?’

‘ಕ್ವಶ್ಚನ್ ಮಾಡಿದ್ರು, ರಾಜಕಾರಣಿಗಳ ಮಕ್ಕಳು ಇದು ನಮ್ಮಪ್ಪ ಮಾಡಿದ ರಸ್ತೆ ಅಂತೆಲ್ಲ ಹೇಳಿದ್ರೆ ಸುಮ್ನಿರ್ತೀರಿ, ಈ ಬಸ್ ನಮ್ಮಪ್ಪಂದು ಅಂದ್ರೆ ಸಿಟ್ಟು ಬರುತ್ತಾ ಅಂತ ಕೇಳಿದ, ಆಗ ಎಲ್ಲರೂ ಗಪ್‌ಚುಪ್’.

‘ಇದೊಳ್ಳೆ ಆಯ್ತಲ್ಲ, ನಾಳೆ ಸಿಎಂ, ಮಾಜಿ ಸಿಎಂ, ಮಿನಿಸ್ಟರ್ ಮಕ್ಕಳೆಲ್ಲ ವಿಧಾನಸೌಧ ನಮ್ಮಪ್ಪಂದು, ಯಾರೂ ಬರೋ ಹಾಗಿಲ್ಲ ಅಂದ್ರೆ ಏನ್ ಮಾಡೋದು’ ಎನ್ನುತ್ತಾ ನಕ್ಕೆ.

‘ತಲೆ ಕೆಟ್ಟುಹೋಗಿದೆ ರೀ, ಸಾಹಿತ್ಯ ಸಮ್ಮೇಳನ ನಡೆಯಲಿರೋ ಮಂಡ್ಯಕ್ಕಾದರೂ ಸುಮ್ಮನೆ ಹೋಗಿ, ಸಿದ್ಧತೆ ಹೇಗಿದೆ ನೋಡ್ಕೊಂಡ್ ಬರ್ತೀನಿ’ ಎಂದಳು ಹೆಂಡತಿ.

‘ಹುಷಾರು, ನೀನು ಮಧ್ಯೆ ಚನ್ನಪಟ್ಟಣದಲ್ಲಿ ಇಳಿದುಬಿಟ್ಟರೆ, ನಮ್ಮಪ್ಪ-ನಮ್ಮ ಅಜ್ಜನ ಹೆಸರೇ ನನಗೆ ಮುಳುವಾಯಿತು ಅಂತ ಒಬ್ಬರು ಅಳ್ತಿರ್ತಾರೆ, ಮತ್ತೆ ನಿನ್ ಮೂಡ್ ಹಾಳಾಗುತ್ತೆ’ ಎಂದೆ.

‘ಕಣ್ಣೀರ ಕಥೆ ಕೇಳೋಕೆ ನನಗಿಷ್ಟ ಇಲ್ಲ ರೀ... ಅಲ್ಲೆಲ್ಲೂ ನಾನು ಇಳಿಯೋದಿಲ್ಲ. ನೇರವಾಗಿ ಮಂಡ್ಯದಲ್ಲಿಯೇ ಇಳಿತೀನಿ’.

‘ಅಲ್ಲಿಯೂ ಕರುಳ ಸಂಬಂಧ ಸಾಹಿತ್ಯದ ಬಗ್ಗೆ ಹೇಳೋರಿದಾರೆ’.

‘ಹೌದಾ, ಅಂಥವರು ಯಾರಿದ್ದಾರೆ, ಏನಂತಾರೆ?’

‘ಅವರು ಮಾತು ಶುರು ಮಾಡೋದೇ ನಾನು ಇಂಥವರ ಮರಿ ಮೊಮ್ಮಗ ಅಂತ’ ಎಂದೆ. ಹೆಂಡತಿಗೆ ನಗು ತಡೆಯಲಾಗಲಿಲ್ಲ.

ಸಂಗತ

ನಾಡಗೀತೆ ಆಶಯಕ್ಕೀಗ 100 ವರ್ಷ!

ಕರ್ನಾಟಕ ಸುವರ್ಣಮಹೋತ್ಸವ ಆಚರಣೆಯ ಈ ಸಂದರ್ಭದಲ್ಲಿ, ನಾಡಗೀತೆ ಆಶಯದ ಶತಮಾನೋತ್ಸವವನ್ನೂ ನಾವು ಸಂಭ್ರಮಿಸಬೇಕಾಗಿದೆ

• ಬಿ.ಆರ್.ಸತ್ಯನಾರಾಯಣ

1930ರಲ್ಲಿ ಪ್ರಕಟವಾದ ಕುವೆಂಪು ಅವರ ‘ಕೊಳಲು’ ಕವನ ಸಂಕಲನದಲ್ಲಿ ನಾಡಗೀತೆ ರಚನೆಯ ದಿನಾಂಕವನ್ನು 7.12.1928 ಎಂದು ಸೂಚಿಸಲಾಗಿದೆ. ಆದರೆ, ಆ ಕವಿತೆಯ ಆಶಯ 1924ರ ಸಮಯದ್ದು ಎಂಬುದು ಕುವೆಂಪು ಅವರ ಆತ್ಮಕಥೆಯಿಂದ ಸ್ಪಷ್ಟವಾಗುತ್ತದೆ. ಕೊಳಲು ಸಂಗ್ರಹದಲ್ಲಿ ಕವಿತೆಯ ಶೀರ್ಷಿಕೆ ‘ಜಯ ಹೇ ಕರ್ನಾಟಕ ಮಾತೆ!’ ಎಂದಿದ್ದು, ಅದರಲ್ಲೆಲ್ಲೂ ಅದನ್ನು ನಾಡಗೀತೆ ಎಂದಾಗಲಿ, ರಾಷ್ಟ್ರಗೀತೆ ಎಂದಾಗಲಿ ಉಲ್ಲೇಖಿಸಿಲ್ಲ. ಆದರೆ, ತಮ್ಮ ಆತ್ಮಕಥೆ ‘ನೆನಪಿನ ದೋಣಿಯಲ್ಲಿ’ 1924-25ರ ಹಸ್ತಪ್ರತಿಯಿಂದ ಉಲ್ಲೇಖಿಸಿರುವ ‘ಕರ್ನಾಟ ರಾಷ್ಟ್ರಗೀತೆ’ ಎಂಬ ಶೀರ್ಷಿಕೆಯ ಕವನಕ್ಕೆ ಕೊಟ್ಟಿರುವ ವಿವರಣೆಯಲ್ಲಿ ‘ಅದು ನನ್ನ ‘ಜಯ ಹೇ ಕರ್ನಾಟಕ ಮಾತೆ’ ಎಂಬ ನಾಡಗೀತೆಯ ಪ್ರಪಿತಾಮಹನೋ ಪ್ರಪ್ರಪಿತಾಮಹನೋ ಆಗಿರಬೇಕು. ಠಾಕೂರರ ‘ಜನಗಣಮನ’ದಂತೆ ನಮ್ಮ ಕನ್ನಡ ನಾಡಿಗೂ ಒಂದು ರಾಷ್ಟ್ರಗೀತೆಯನ್ನು ನೀಡುವ ಪ್ರಯತ್ನದ ಭ್ರೂಣಸ್ಥಿತಿಯಂತಿದೆ ಅದು. ಅದರ ರಚನೆಯ ರೂಪಾಂಶ ನಾನು ಬೆಳೆದಂತೆಲ್ಲ ಬದಲಾವಣೆ ಹೊಂದುತ್ತಾ (ಭಾವ ಮತ್ತು ಭಾಷೆ ಎರಡರಲ್ಲಿಯೂ) ಕಡೆಗೆ ‘ಕೊಳಲು’ ಕವನ ಸಂಗ್ರಹ ಅಚ್ಚಾದಾಗ ಒಂದು ಸ್ತಿಮಿತಕ್ಕೆ ನಿಂತಿತ್ತು’ ಎಂದು ಬರೆದಿದ್ದಾರೆ.

ಇಲ್ಲಿ ಮುಖ್ಯವಾಗಿ ಮೂರು ವಿಷಯಗಳನ್ನು ಗಮನಿಸಬೇಕು. ಮೊದಲನೆಯದು, ಆ ಕವಿತೆಯ ಶೀರ್ಷಿಕೆ ‘ಕರ್ನಾಟ ರಾಷ್ಟ್ರಗೀತೆ’ ಎಂದಿರುವುದು. 1925ರ ಸುಮಾರಿಗೆ, ಭಾರತ ಒಂದು ಗಣರಾಜ್ಯವಾಗುತ್ತದೆ, ಭಾಷಾವಾರು ಪ್ರಾಂತ್ಯಗಳ ರಚನೆಯಾಗುತ್ತದೆ, ಕನ್ನಡ ನಾಡು ಏಕೀಕರಣ ಆಗಿ ಅದಕ್ಕೆ ‘ಕರ್ನಾಟಕ’ ಎಂಬ ಹೆಸರು ಬರುತ್ತದೆ ಎನ್ನುವ ಯಾವ ಕಲ್ಪನೆಗಳೂ ಇರಲಿಲ್ಲ. ಆದರೂ ಕರ್ನಾಟಕವನ್ನು ಒಂದು ರಾಷ್ಟ್ರವನ್ನಾಗಿ ಕಲ್ಪಿಸಿ, ಅದಕ್ಕೊಂದು ರಾಷ್ಟ್ರಗೀತೆಯನ್ನು ರಚಿಸಿರುವುದು ಗಮನಾರ್ಹ. ಬಹುಶಃ ಕವಿಯ ಮನಸ್ಸಿನಲ್ಲಿ ಭಾಷೆಯಾಧಾರಿತ ದೇಶಗಳ ಅಂದಿನ ಯುರೋಪ್ ಇದ್ದಿರಬಹುದು ಎನ್ನಿಸುತ್ತದೆ.

ಎರಡನೆಯದಾಗಿ, ‘ಕರ್ನಾಟ ರಾಷ್ಟ್ರಗೀತೆ’ ಎಂಬ ಶೀರ್ಷಿಕೆ ಅದಕ್ಕಿದ್ದರೂ, ಅದರ ಐದೂ ಭಾಗಗಳಲ್ಲಿ ‘ಭಾರತ ಜನನಿಯ ತನುಜಾತೆ’ ಎಂಬ ಸಾಲು ಬಂದಿರುವುದು. ಕನ್ನಡ ನಾಡನ್ನು ಭಾರತದ ಅವಿಭಾಜ್ಯ ಅಂಗ ಎಂಬುದನ್ನು ಒಪ್ಪಿಕೊಂಡು, ಭಾರತ ಮಾತೆಯ ಮಗಳು ಎಂದು ಕನ್ನಡ ನಾಡನ್ನು ಸ್ತುತಿಸಿರುವುದು ಮತ್ತು ಅದೇ ಆಶಯವನ್ನು ಕವಿತೆಯ ಅಂತಿಮ ಅವತರಣಿಕೆಯಲ್ಲಿ ಉಳಿಸಿಕೊಂಡಿರುವುದು ಗಮನಾರ್ಹ. ಬಹುಶಃ ‘ಕರ್ನಾಟ ರಾಷ್ಟ್ರಗೀತೆ’ ಎಂಬ ಶೀರ್ಷಿಕೆಯಲ್ಲಿನ ರಾಷ್ಟ್ರ ಎಂಬ ಪದವು ದೇಶದ ಬದಲು ನಾಡನ್ನೇ ಸೂಚಿಸುತ್ತಿರಬಹುದು. ಆಗ ಭಾಷೆಯಾಧಾರಿತ ದೇಶಗಳ ಯುರೋಪ್ ಮಾದರಿಯನ್ನು ನಿರಾಕರಿಸಬಹುದಾಗಿದೆ.

ಮೂರನೆಯದಾಗಿ, ಮೊದಲಿನ ಕವಿತೆಯಲ್ಲಿನ ಹಲವಾರು ಸಾಲುಗಳು ಅಂತಿಮ ರೂಪದಲ್ಲಿಯೂ ಉಳಿದುಕೊಂಡಿರುವುದನ್ನು ಗಮನಿಸಿದರೆ, ಕವಿಯ ಆಶಯ ಬದಲಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮುಖ್ಯವಾಗಿ ‘ಭಾರತ ಜನನಿಯ ತನುಜಾತೆ’, ‘ಜಯ ಹೇ ಕರ್ನಾಟಕ ಮಾತೆ!’, ‘ಜನನಿಯ ಜೋಗುಳ’, ‘ಕಪಿಲ ಪತಂಜಲ ಗೌತಮ(ಜಿನ)ನುತ’, ‘ಶಂಕರ ರಾಮಾನುಜ’, ‘ಕೃಷ್ಣ ಶರಾವತಿ (ವರ) ತುಂಗಾ’, ‘ಸರ್ವ ಜನಾಂಗದ ಶಾಂತಿ(ನಿಕೇತನ)ಯ ತೋಟ’, ‘ಗಾಯಕ ವೈಣಿಕ’ ಎಂಬಂತಹ ಪದಪುಂಜಗಳನ್ನು ಗಮನಿಸಬಹುದು. ಆದ್ದರಿಂದ, ರಚನೆಯ ರೂಪಾಂಶ, ಭಾವ, ಭಾಷೆ ಬದಲಾಗಿದ್ದರೂ ಮೂಲ ಆಶಯ ಮಾತ್ರ ಮೂಲದ್ದೇ ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ, ಮೂಲದ ‘ಪಚ್ಚೆಯ ನವ ಕಂಠೀಮಾಲೆ’ಯಂತಹ ಉಕ್ತಿಗೆ ಬದಲಾಗಿ ‘ಹಸುರಿನ ಗಿರಿಗಳ ಸಾಲೆ ನಿನ್ನಯ ಕೊರಳಿನ ಮಾಲೆ’ ಎಂಬಂತಹ ಸಾಲುಗಳು ಬಂದಿರುವುದು ಅವರ ‘ಭಾವ’ ಬೆಳವಣಿಗೆಯ ಸಂಕೇತವಾಗಿದೆ.

‘ಭಾರತ ಜನನಿಯ ತನುಜಾತೆ’ ಮತ್ತು ‘ಸರ್ವ ಜನಾಂಗದ ಶಾಂತಿಯ ತೋಟ’ ಈ ನಾಡಗೀತೆಯ ಮೂಲ ಆಶಯಗಳೆಂಬುದು ಸ್ಪಷ್ಟ. ಅವರೇ ಒಂದು ಲೇಖನದಲ್ಲಿ ಸ್ಪಷ್ಟಪಡಿಸಿರುವಂತೆ, ಕನ್ನಡ ನಾಡಿನ ವಿಸ್ತೀರ್ಣವನ್ನು ಚದರ ಮೈಲಿಗಳಲ್ಲಿ ಅಳೆಯುವುದಕ್ಕಿಂತ ಚದರ ವರ್ಷಗಳಲ್ಲಿ ಅಳೆಯಬೇಕಾಗಿದೆ. ನಾಡು ಅಥವಾ ದೇಶ ಎಂದರೆ ಅದರ ಭೂಭಾಗ ಮಾತ್ರವಲ್ಲ, ಅದರ ಜನ-ಭಾಷೆ-ಸಂಸ್ಕೃತಿ ಎಲ್ಲವೂ ಸೇರುತ್ತವೆ. ಇವು ತಮ್ಮತನವನ್ನು ಉಳಿಸಿಕೊಂಡೂ ವಿಶ್ವಾತ್ಮಕವಾಗುವ ಆಶಯಗಳೆಂದರೂ ತಪ್ಪಾಗುವುದಿಲ್ಲ. ಮುಂದೆ ಅವರೇ ಪ್ರತಿಪಾದಿಸಿದ ‘ವಿಶ್ವಮಾನವ ಸಂದೇಶ’ಕ್ಕೂ ಈ ಆಶಯಗಳು ಬೀಜಮಾತ್ರವಾಗಿವೆ ಎನ್ನಬಹುದು.



ವಿಶಾಲ ಜಗತ್ತಿಗೆ ಹೋಲಿಸಿದರೆ ಕರ್ನಾಟಕದ ವಿಸ್ತೀರ್ಣ ತುಂಬಾ ಚಿಕ್ಕದು. ಆದರೆ, ಕನ್ನಡಿಗರ ಕರ್ನಾಟಕ, ಅದನ್ನೊಳಗೊಂಡ ಭಾರತ, ಜಗತ್ತು ಮತ್ತು ಎಲ್ಲರೂ ನನ್ನಂತೆಯೇ ಎಂದು ಭಾವಿಸುವ, ತನ್ಮೂಲಕ ಇಡೀ ಜಗತ್ತನ್ನು ಶಾಂತಿಯ ತೋಟವಾಗಿರಲೆಂದು ಆಶಿಸುವ ಉದಾತ್ತ ಭಾವವನ್ನು ಇಲ್ಲಿ ಕಾಣಬಹುದು. ಇಂತಹ ಆಶಯದ ಬೇರೆ ಯಾವುದಾದರೂ ರಾಷ್ಟ್ರ(ನಾಡ)ಗೀತೆ ಇದ್ದರೆ, ತೌಲನಿಕವಾಗಿ ಅಧ್ಯಯನಕ್ಕೆ ಯೋಗ್ಯ ವಸ್ತುವಾಗುತ್ತದೆ.

ಅಂದಹಾಗೆ, ಈ ‘ಕರ್ನಾಟ ರಾಷ್ಟ್ರಗೀತೆ’ಯನ್ನು ರಚಿಸಿದಾಗ ಕವಿಯ ವಯಸ್ಸು ಬರೀ 20 ವರ್ಷಗಳು! ಈಗ ನಾಡು ‘ಕರ್ನಾಟಕ’ ಎಂಬ ಹೆಸರು ಪಡೆದ ಸುವರ್ಣ ಮಹೋತ್ಸವದ ಆಚರಣೆಯಲ್ಲಿ ತೊಡಗಿದೆ. ಕವಿಯ 120ನೇ ಜನ್ಮದಿನೋತ್ಸವದ ಸಂದರ್ಭವೂ ಹೌದು. ಹಾಗೆಯೇ, ಅದು ನಾಡಗೀತೆಯ ಆಶಯದ ಶತಮಾನೋತ್ಸವವೂ ಆಗಬೇಕಿದೆ. ಈ ದಿಸೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕಾರ್ಯೋನ್ಮುಖವಾಗಬೇಕಿದೆ.

ವಾಚಕರ ವಾಣಿ

ಕೋರ್ಟ್ ತೀರ್ಪು: ದಕ್ಷಿಣದ ರಾಜ್ಯಗಳು ನಿರಾಳ

ಸುಪ್ರೀಂ ಕೋರ್ಟ್ ಕಲಾಪಗಳನ್ನು ಹಿಂದಿ ಭಾಷೆಯಲ್ಲೂ ನಡೆಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿರುವುದು ಸರಿಯಾಗಿದೆ. ಸುಪ್ರೀಂ ಕೋರ್ಟ್‌ನ ಕಲಾಪಗಳು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ನಡೆಯಬೇಕು ಎನ್ನುವ ಸಂವಿಧಾನದ 348(1)ನೇ ವಿಧಿಯನ್ನು ಪ್ರಶ್ನಿಸಿದ್ದ ಅರ್ಜಿದಾರರಿಗೆ, ಹಿಂದಿ ಭಾಷೆಗೆ ಮಾನ್ಯತೆ ಕೊಟ್ಟರೆ, ಸಂವಿಧಾನದಲ್ಲಿ ಮಾನ್ಯತೆ ಪಡೆದಿರುವ ಎಲ್ಲ ಭಾಷೆಗಳಲ್ಲೂ ಕಲಾಪ ನಡೆಸಬೇಕಾಗುತ್ತದೆ ಎಂದು ಕೋರ್ಟ್ ಹೇಳಿರುವುದು ಒಂದು ಶ್ಲಾಘನೀಯ ನಿಲುವಾಗಿದೆ. ಇದರಿಂದ, ಹಿಂದಿಯೇತರ ರಾಜ್ಯಗಳು, ಮುಖ್ಯವಾಗಿ ದಕ್ಷಿಣದ ರಾಜ್ಯಗಳು ನಿಟ್ಟುಸಿರುಬಿಡುವಂತಾಗಿದೆ. ಇನ್ನೊಂದು ಭಾಷಾ ವಿವಾದ ಸೃಷ್ಟಿಯಾಗದಂತೆ ಕೋರ್ಟ್ ಎಚ್ಚರಿಕೆಯ ಮತ್ತು ದೂರದೃಷ್ಟಿಯ ತೀರ್ಪು ನೀಡಿದೆ.

ರಮಾನಂದ ಶರ್ಮಾ, ಬೆಂಗಳೂರು

ಡಿಜಿಟಲ್ ಅರೆಸ್ಟ್: ಜನ ಹೆದರುವುದೇಕೆ?

ಸೈಬರ್ ಅಪರಾಧಕ್ಕೆ ಇತ್ತೀಚೆಗೆ ಸೇರ್ಪಡೆಯಾದ ತಂತ್ರಜ್ಞಾನ ಆಧಾರಿತ ‘ಡಿಜಿಟಲ್ ಅರೆಸ್ಟ್’ನ ವೈಖರಿ (ಆಳ- ಅಗಲ, ನ. 6) ನಿಜಕ್ಕೂ ಆಶ್ಚರ್ಯ ಹುಟ್ಟಿಸುವುದರ ಜೊತೆಗೆ ಹಾಸ್ಯಾಸ್ಪದವೂ ಆಗಿದೆ. ನಮ್ಮ ಕಣ್ಣ ಮುಂದೆ ಕಾಣಿಸುವ ಪೊಲೀಸರು, ಕೋರ್ಟಿಗೆ ಹೆದರದಿರುವ ನಾವು, ಎಲ್ಲೋ ಕಣ್ಣಿಗೆ ಕಾಣದ ವ್ಯಕ್ತಿಯ ಫೋನ್ ಕರೆಗೆ ಹೆದರಿ ಲಕ್ಷಾಂತರ ರೂಪಾಯಿ ಕಳೆದುಕೊಳ್ಳುವುದು ನಂಬಲು ಕಷ್ಟವಾಗುವಂತಹ ವಿಚಾರ. ಅದರಲ್ಲೂ ವಿದ್ಯಾವಂತ, ಬುದ್ಧಿವಂತ ಜನರೇ ಇವರ ಬಲೆಗೆ ಬೀಳುತ್ತಿರುವುದು ಇನ್ನಷ್ಟು ಸೋಜಿಗ. ಈ ರೀತಿಯ ವಿಡಿಯೊ ಕರೆ ಬಂದಾಗ ಅದನ್ನು ಸ್ಥಗಿತಗೊಳಿಸಿ ಆ ಸಂಖ್ಯೆಯನ್ನು ಬ್ಲಾಕ್ ಮಾಡಬಹುದು ಅಥವಾ ತಮ್ಮದೇ ಫೋನನ್ನು ಸ್ತಬ್ಧಗೊಳಿಸಬಹುದು. ಅದನ್ನು ಬಿಟ್ಟು, ಅವರು ಹೇಳಿದಂತೆ ಕೇಳಿಕೊಂಡು, ತಾಸುಗಟ್ಟಲೆ, ದಿನಗಟ್ಟಲೆ ಹೇಗೆ ಸಮಯ ಕಳೆಯುತ್ತಾರೆ ಎಂಬುದೇ ಅರ್ಥವಾಗುವುದಿಲ್ಲ.

ಈ ರೀತಿಯ ಅಪರಾಧ ಎಸಗುವವರು ಅನೈತಿಕವಾಗಿ ಸಂಪತ್ತು ಗಳಿಸಿರುವವರನ್ನು ಹೆಚ್ಚಾಗಿ ಗುರಿಯಾಗಿಸಿಕೊಂಡಿರುತ್ತಾರೆ ಎನ್ನಲಾಗುತ್ತದೆ. ಆದರೆ ಇತ್ತೀಚಿನ ಕೆಲವು ಪ್ರಕರಣಗಳನ್ನು ಗಮನಿಸಿದಾಗ, ಹಾಗೇನೂ ಅನಿಸುವುದಿಲ್ಲ. ಚಿತ್ರದುರ್ಗದ ವೈದ್ಯರೊಬ್ಬರು 40 ವರ್ಷಗಳಿಂದ ನಡೆಸಿಕೊಂಡು ಬಂದಿದ್ದ ತಮ್ಮ ಡಯಾಗ್ನೋಸ್ಟಿಕ್ ಲ್ಯಾಬೊರೇಟರಿಯನ್ನು ಮಾರಿದ್ದರಿಂದ ಬಂದ ₹ 1 ಕೋಟಿಗೂ ಹೆಚ್ಚು ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದುದನ್ನು ಈ ರೀತಿ ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ. ಈ ಕುರಿತು ಎಷ್ಟೇ ಪ್ರಚಾರ ಮಾಡಿ ಜನರಿಗೆ ತಿಳಿವಳಿಕೆ ನೀಡುವ ಜಾಹೀರಾತುಗಳನ್ನು ಕೊಟ್ಟರೂ, ಸರ್ಕಾರಗಳು ಯಾವುದೇ ಕ್ರಮಗಳನ್ನು ತೆಗೆದುಕೊಂಡರೂ ಜನ ಎಲ್ಲಿಯವರೆಗೆ ಸ್ವತಃ ಎಚ್ಚೆತ್ತುಕೊಂಡು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಇಂತಹ ಸಮಸ್ಯೆಗಳಿಗೆ ಪರಿಹಾರವಿಲ್ಲ.

ಟಿ.ವಿ.ಬಿ. ರಾಜನ್, ಬೆಂಗಳೂರು

ಪ್ರಾಬಲ್ಯಕ್ಕೆ ಜಯ!

ಎಂದಿನಂತೆ ಈ ಸಲವೂ
ಪುರುಷರ ಪ್ರಾಬಲ್ಯವೇ
ಅಮೆರಿಕದಲ್ಲಿ ಮೆರೆದಿದೆ,
ಶ್ವೇತಭವನದ ಆಳ್ವಿಕೆಯಲ್ಲಿ
ಬದಲಾವಣೆ ನಿರೀಕ್ಷಿಸಿದ್ದ
‘ಕಮಲ’ ಮುದುಡಿದೆ!

ಆರ್.ನಾಗರಾಜ್
ಗೊರೂರು

ಜೀವನ ಪ್ರಮಾಣಪತ್ರ: ಎಲ್ಲರಿಗೂ ಅನ್ವಯಿಸಲಿ

ಪಿಂಚಣಿದಾರರು ತಮ್ಮ ಪಿಂಚಣಿ ಜಮಾ ಆಗುವ ಬ್ಯಾಂಕು ಮತ್ತು ಅಂಚೆ ಕಚೇರಿಗೆ ನವೆಂಬರ್ ತಿಂಗಳಲ್ಲಿ ಜೀವನ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂಬ ನಿಯಮವಿದೆ. ತಪ್ಪಿದಲ್ಲಿ ಅದು ಸಲ್ಲಿಕೆ ಆಗುವವರೆಗೂ ಪಿಂಚಣಿ ಜಮಾ ಆಗುವುದಿಲ್ಲ. ಪಿಂಚಣಿದಾರ ಜೀವಂತವಿಲ್ಲವೆಂದರೆ ಆತನಿಗೆ ಪಿಂಚಣಿ ಸೌಲಭ್ಯ ನಿಲ್ಲಿಸಬೇಕೆಂಬುದೇ ಈ ಪತ್ರ ಸಲ್ಲಿಕೆಯ ಮೂಲ ಉದ್ದೇಶ. ಈ ಪತ್ರದ ಸುಲಭ ಸಲ್ಲಿಕೆಗಾಗಿ ಕೇಂದ್ರ ಸರ್ಕಾರವು ‘ಜೀವನ್ ಪ್ರಮಾಣ್’ ಎಂಬ ವಿದ್ಯುನ್ಮಾನ ಪೋರ್ಟಲ್ ಕೂಡ ಸಿದ್ಧಪಡಿಸಿ ಜಾಹೀರಾತುಗಳನ್ನು ನೀಡಿ ಪಿಂಚಣಿದಾರರಲ್ಲಿ ಜಾಗೃತಿ ಉಂಟು ಮಾಡುತ್ತಿರುವುದು ಶ್ಲಾಘನೀಯ. ಆದರೆ ಇದೇ ಬಗೆಯ ಜೀವನ ಪ್ರಮಾಣಪತ್ರವನ್ನು ರಾಜ್ಯ ಸರ್ಕಾರಗಳು ಬಡವರ ಸೌಕರ್ಯಕ್ಕೆಂದು ಜಾರಿಗೊಳಿಸಿರುವ ವೃದ್ಧಾಪ್ಯ ವೇತನದಂತಹ ಯೋಜನೆಗಳ ಫಲಾನುಭವಿಗಳಿಂದಲೂ ಪಡೆಯಬೇಕಲ್ಲವೇ? ಹಾಗೆ ಮಾಡದೆ, ಫಲಾನುಭವಿಗಳು ಜೀವಂತ ಇಲ್ಲದಿರುವಾಗಲೂ ಅವರ ಬ್ಯಾಂಕ್ ಖಾತೆಗಳಿಗೆ ಮಾಹೆಯಾನ ಪಿಂಚಣಿ ಹಣ ಜಮಾ ಆದರೆ ಅದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ? ಹಾಗಾಗಿ, ಈ ಪ್ರಮಾಣಪತ್ರ ಸಲ್ಲಿಕೆಯನ್ನು ಇವರಿಗೂ ಕಡ್ಡಾಯಗೊಳಿಸುವುದು ಸೂಕ್ತ.

ರಮೇಶ್, ಬೆಂಗಳೂರು

ಆರೋಗ್ಯ ಕೇಂದ್ರದ ಅವ್ಯವಸ್ಥೆ: ಉತ್ತರ ಸಿಗದ ಪ್ರಶ್ನೆ

ಆರೋಗ್ಯ ಕೇಂದ್ರದಲ್ಲಿ ಮೂಲ ಸೌಕರ್ಯ ಕೊರತೆ, ವೈದ್ಯರ ಅಲಭ್ಯತೆಯಂತಹ ಸಮಸ್ಯೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಸಿಪಿಎಂ ವತಿಯಿಂದ ಬೆಳಕವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆಯ ಸುದ್ದಿಯನ್ನು ಓದಿದಾಗ, ಇತ್ತೀಚೆಗಷ್ಟೇ ನನಗಾದ ಒಂದು ಅನುಭವವನ್ನು ಹೇಳಬೇಕೆನಿಸಿತು. ಕಫ ಮತ್ತು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ನಮ್ಮ ಐದು ತಿಂಗಳ ಮೊಮ್ಮಗುವನ್ನು ನಮ್ಮ ಗ್ರಾಮವಾದ ಚಿನಕುರಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೊಂಡೊಯ್ದೆವು. ಅಲ್ಲಿಗೆ ಮಕ್ಕಳ ವೈದ್ಯರು ಬರುವುದಿಲ್ಲವೆಂಬುದು ತಿಳಿದುಬಂತು. ಬಳಿಕ, ತಾಲ್ಲೂಕು ಕೇಂದ್ರವಾದ ಪಾಂಡವಪುರದ ವಿಭಾಗೀಯ ಆಸ್ಪತ್ರೆಯಲ್ಲಿ ತೋರಿಸಲು ಪ್ರಯತ್ನಿಸಿದೆವು. ಅಲ್ಲಿ ಮಕ್ಕಳ ವೈದ್ಯರು ಅದಾಗಲೇ ಆಸ್ಪತ್ರೆಯಿಂದ ಹೊರಟುಹೋಗಿದ್ದುದು ತಿಳಿಯಿತು. ಆಗ ಜಿಲ್ಲಾ ಆರೋಗ್ಯಾಧಿಕಾರಿಗೆ ಕರೆ ಮಾಡಿ, ಸಮಸ್ಯೆಯನ್ನು ತಿಳಿಸಿ, ಸರಿಪಡಿಸುವಂತೆ ವಿನಂತಿಸಿದೆ. ಆ ಬಳಿಕ ನನಗೆ ಕರೆ ಮಾಡಿದ ತಾಲ್ಲೂಕು ವೈದ್ಯಾಧಿಕಾರಿ, ಮಕ್ಕಳ ವೈದ್ಯರು ಇಲ್ಲದಿರುವುದರಿಂದ ಇಎನ್‌ಟಿ ವೈದ್ಯರಿಗೆ ಮಗುವನ್ನು ತೋರಿಸುವಂತೆ ಸೂಚಿಸಿದರು. ನಾವು ಅದನ್ನು ಒಪ್ಪದೆ, ಶ್ರೀರಂಗಪಟ್ಟಣದಲ್ಲಿನ ಖಾಸಗಿ ಮಕ್ಕಳ ತಜ್ಞರ ಬಳಿ ತೋರಿಸಿ ಔಷಧೋಪಚಾರ ಪಡೆದೆವು.

ಕಡೆಗೆ ಆಕ್ರೋಶಗೊಂಡ ನಾನು, ಗೂಗಲ್‌ನಲ್ಲಿ ಆರೋಗ್ಯ ಸಚಿವರ ಮೊಬೈಲ್ ನಂಬರ್ ಹುಡುಕಿ ಫೋನಾಯಿಸಿದಾಗ, ಮಹಿಳೆಯೊಬ್ಬರು ‘ರಾಂಗ್ ನಂಬರ್’ ಎಂದು ಹೇಳಿ ಇಟ್ಟರು. ಈ ಅವ್ಯವಸ್ಥೆಯನ್ನು ನೋಡಿ, ಯಾರಿಗೂ ಹೇಳಲಿಕ್ಕಾಗದೆ ನಮ್ಮ ನೋವನ್ನು ನಾವೇ ನುಂಗಿಕೊಳ್ಳಬೇಕಾಯಿತು. ಇದನ್ನೆಲ್ಲ ಯಾರು ಸರಿಪಡಿಸಬೇಕು ಎಂಬ ಪ್ರಶ್ನೆಯು ಪ್ರಶ್ನೆಯಾಗಿಯೇ ಉಳಿಯಿತು.

ಸಿ.ಎಂ.ಕಾಳೇಗೌಡ, ಚಿನಕುರಳಿ, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಕ್ಫ್ ಆಸ್ತಿಗಳ ಪಹಣಿ ಬದಲಾವಣೆ ಏನು, ಎತ್ತ?

ರಾಜ್ಯದ ಹಲವು ಜಿಲ್ಲೆಗಳಲ್ಲಿ ರೈತರ ಜಮೀನು, ಮಠದ ಜಮೀನು, ಸ್ಮಶಾನ ಮತ್ತು ಖಬರಸ್ಥಾನಗಳು, ವಸತಿ ಪ್ರದೇಶಗಳಿಗೆ ಸಂಬಂಧಿಸಿದಂತೆ 'ವಕ್ಫ್ ಆಸ್ತಿ' ವಿವಾದವನ್ನು ಮುನ್ನೆಲೆಗೆ ತರಲಾಗಿದೆ. ವಿರೋಧ ಪಕ್ಷ ಬಿಜೆಪಿ–ಆಡಳಿತ ಪಕ್ಷದ ನಾಯಕರ ಮಧ್ಯೆ ವಾಕ್ಸಮರ ಜೋರಾಗಿದ್ದು, ರಾಜಕೀಯ ಬೆಳೆ ತೆಗೆಯುವ ತರಾತುರಿ ರಾಜಕಾರಣಿಗಳಲ್ಲಿ ಕಾಣಿಸುತ್ತಿದೆ. ವಕ್ಫ್ ಆಸ್ತಿ ಸಂಬಂಧ ಕೆಲವು ರೈತರಿಗೆ ನೋಟಿಸ್ ಹೋಗಿದ್ದು ವಿವಾದದ ಕೇಂದ್ರ ಬಿಂದು. ಈ ವಿಚಾರ ಈಗ ಇದ್ದಕ್ಕಿದ್ದಂತೆ ಭುಗಿಲೆದ್ದಿದ್ದು ಏಕೆ ಎಂದು ಹುಡುಕುತ್ತಾ ಹೋದರೆ, ಅದರ ಇತಿಹಾಸ 1970ರ ದಶಕದವರೆಗೂ ಚಾಚುತ್ತದೆ. ಈಚಿನ 15 ವರ್ಷಗಳಲ್ಲಿ ರಾಜ್ಯದಲ್ಲಿ ಆಳ್ವಿಕೆ ನಡೆಸಿದ ಬಿಜೆಪಿ, ಕಾಂಗ್ರೆಸ್ ಸರ್ಕಾರಗಳೆಲ್ಲವೂ ವಕ್ಫ್ ಆಸ್ತಿ ಮರುವಶಕ್ಕೆ ಪಡೆಯಲು ಹಲವು ಕ್ರಮಗಳನ್ನು ತೆಗೆದುಕೊಂಡಿವೆ. ಆದರೆ, ರೈತರಿಗೆ ನೋಟಿಸ್ ನೀಡುವ ಹಂತಕ್ಕೆ ಬಂದ ಕಾರಣದಿಂದಲೇ, ವಿಷಯ ಈಗ ಎಲ್ಲರ ಗಮನಕ್ಕೆ ಬಂದಿದೆ

• ಜಯಸಿಂಹ ಆರ್.

ಧಾರ್ಮಿಕ ಮತ್ತು ಸಾಮಾಜಿಕ ಸೇವೆಯ ಉದ್ದೇಶಕ್ಕೆಂದು ವ್ಯಕ್ತಿಗಳು ಮತ್ತು ಸಂಘಸಂಸ್ಥೆಗಳು ವಕ್ಫ್ ಮಂಡಳಿಗೆ ನೀಡಿದ ಜಮೀನನ್ನು 'ವಕ್ಫ್ ಆಸ್ತಿ' ಎಂದು ಪರಿಗಣಿಸಲಾಗುತ್ತದೆ. ಹೀಗೆ ಒಮ್ಮೆ ವಕ್ಫ್ ಮಂಡಳಿಗೆ ನೀಡಿದ ಯಾವುದೇ ರೀತಿಯ ಸ್ವತ್ತು, ಶಾಶ್ವತವಾಗಿ ವಕ್ಫ್ ಆಸ್ತಿಯಾಗುತ್ತದೆ ಎನ್ನುತ್ತದೆ ವಕ್ಫ್ ಕಾಯ್ದೆ. ಮಸೀದಿ, ದರ್ಗಾ, ಖಬರಸ್ಥಾನ, ಈದ್ಗಾಗಳ ನಿರ್ವಹಣೆ ಮಾಡುವ ವ್ಯಕ್ತಿಗಳಿಗೆ ವಕ್ಫ್ ಮಂಡಳಿಯು ಇಂತಿಷ್ಟು ಜಮೀನನ್ನು ಇನಾಂ ರೂಪದಲ್ಲಿ ನೀಡುವ ಪದ್ಧತಿ ಜಾರಿಯಲ್ಲಿತ್ತು. ಧಾರ್ಮಿಕ ಸ್ಥಳಗಳ ನಿರ್ವಹಣೆಗೆ ತಗಲುವ ವೆಚ್ಚ ಮತ್ತು ಆ ಕರ್ತವ್ಯಕ್ಕೆ ನಿಯೋಜನೆಗೊಂಡ ವ್ಯಕ್ತಿಯ ಕುಟುಂಬ ನಿರ್ವಹಣೆಗೆಂದು ಜಮೀನು ನೀಡಲಾಗುತ್ತಿತ್ತು. ಅಂತಹ ವ್ಯಕ್ತಿ ಕರ್ತವ್ಯದಿಂದ ವಿಮುಖನಾದರೆ ಆತನಿಂದ ಆ ಜಮೀನನ್ನು ವಾಪಸ್ ಪಡೆದು, ಹೊಸದಾಗಿ ನಿಯೋಜನೆಯಾದವರಿಗೆ ನೀಡಲಾಗುತ್ತಿತ್ತು.

ಬ್ರಿಟಿಷ್ ಭಾರತದುದ್ದಕ್ಕೆ ಮತ್ತು ಸ್ವತಂತ್ರ ಭಾರತದ ಮೊದಲ ಎರಡು–ಎರಡೂವರೆ ದಶಕಗಳವರೆಗೂ ಇದೇ ಪದ್ಧತಿ ಜಾರಿಯಲ್ಲಿತ್ತು. ಈ ಪದ್ಧತಿ ಬದಲಾಗಿದ್ದು ಕರ್ನಾಟಕದಲ್ಲಿ ಮೊದಲ ಬಾರಿಗೆ ಜಾರಿಗೆ ತಂದ ಭೂಸುಧಾರಣಾ ಕಾಯ್ದೆಯ ಬಳಿಕ. ಅದೇ ಮಾದರಿಯ ಕಾಯ್ದೆಯನ್ನು ಕೇಂದ್ರ ಸರ್ಕಾರವೂ ತರುವಾಯ ಜಾರಿಗೊಳಿಸಿತು. ಈ ಕಾಯ್ದೆಯ ಅನುಸಾರ ಜಮೀನ್ದಾರಿ–ಇನಾಮದಾರಿ ಮತ್ತು ಗೇಣಿದಾರ ಪದ್ಧತಿ ರದ್ದಾಯಿತು. ನಂತರ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದಿತು. ಕರ್ನಾಟಕ ಸರ್ಕಾರವು 1974ರಿಂದ 1979ರವರೆಗೆ ಹಲವು ಕಾಯ್ದೆಗಳು, ತಿದ್ದುಪಡಿ ಕಾಯ್ದೆಗಳನ್ನು ಜಾರಿಗೆ ತಂದು ಭೂಸುಧಾರಣಾ ನೀತಿಗಳನ್ನು ಅನುಷ್ಠಾನಕ್ಕೆ ತಂದಿತು. ರಾಜ್ಯದಲ್ಲಿಯೂ ಜಮೀನ್ದಾರಿ–ಇನಾಮದಾರಿ ಮತ್ತು ಗೇಣಿದಾರ ಪದ್ಧತಿಗಳು ರದ್ದಾದವು.

1974ರಿಂದ 1979ರ ಮಧ್ಯೆ ಜಾರಿಗೆ ಬಂದ ಈ ಕಾಯ್ದೆಗಳ ಅನ್ವಯ ಇನಾಮದಾರಿ ಮತ್ತು ಗೇಣಿದಾರ ಪದ್ಧತಿಯಲ್ಲಿ ಉಳುಮೆ ಮಾಡುತ್ತಿದ್ದವರಿಗೇ ಜಮೀನಿನ ಪಟ್ಟಾ ಮಾಡಿಕೊಡಲಾಯಿತು. ಜಮೀನ್ದಾರರಿಂದ, ಭೂಮಾಲೀಕರಿಂದ, ಮಠಗಳಿಂದ ಮತ್ತು ವಕ್ಫ್ ಮಂಡಳಿಯಿಂದಲೂ ಉಳುವವರಿಗೆ ಭೂಮಾಲೀಕತ್ವವನ್ನು ವರ್ಗಾಯಿಸಿಕೊಡಲಾಯಿತು. ಉಳುವವನೇ ಭೂಒಡೆಯ ನೀತಿ ರಾಜ್ಯದಲ್ಲಿ ಅನುಷ್ಠಾನಕ್ಕೆ ಬರುವುದಕ್ಕೂ ಮುನ್ನ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಒಡೆತನದಲ್ಲಿ ರಾಜ್ಯದಾದ್ಯಂತ ಒಟ್ಟು 1.70 ಲಕ್ಷ ಎಕರೆಯಷ್ಟು ಜಮೀನು ಇತ್ತು. ಉಳುವವರಿಗೇ ಭೂಮಾಲೀಕತ್ವ ವರ್ಗಾವಣೆ ಪ್ರಕ್ರಿಯೆಯಲ್ಲಿ ವಕ್ಫ್‌ನ 79,000 ಎಕರೆಗಳಷ್ಟು ಜಮೀನು ಸಾರ್ವಜನಿಕರಿಗೆ ವರ್ಗಾವಣೆಯಾಯಿತು. ಆಗ ವರ್ಗಾವಣೆಯಾಗಿದ್ದ 79,000 ಎಕರೆಗಳಲ್ಲಿ ಕೆಲವು ಜಮೀನಿಗೆ ಸಂಬಂಧಿಸಿದ ಪಹಣಿಗಳಲ್ಲೇ 'ವಕ್ಫ್ ಆಸ್ತಿ' ಎಂದು ಈಚೆಗೆ ನಮೂದಾಗಿದ್ದು.

ಸರ್ಕಾರವೇ ಅಧಿಸೂಚನೆ ಮೂಲಕ ನೀಡಿದ್ದ ಜಮೀನನ್ನು ಮರುವಶಕ್ಕೆ ಪಡೆಯಲು ವಕ್ಫ್ ಈಗ ಯತ್ನಿಸುವುದು ಏಕೆ ಎಂಬುದನ್ನು ಹುಡುಕುತ್ತಾ ಹೋದರೆ, ಅದರ ಮೂಲ ಸುಪ್ರೀಂ ಕೋರ್ಟ್ 26 ವರ್ಷಗಳ ಹಿಂದೆ ನೀಡಿದ್ದ ಆದೇಶದಲ್ಲಿದೆ. 1974–79ರ ಅವಧಿಯಲ್ಲಿ ಉಳುವವರ ಹೆಸರಿಗೆ ವರ್ಗಾವಣೆಯಾದ ಜಮೀನಿಗೆ ಸಂಬಂಧಿಸಿದಂತೆ 1998ರವರೆಗೆ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ 'ಸಯ್ಯದ್ ಅಲಿ ಮತ್ತು ಇತರರು ವರ್ಸಸ್ ಆಂಧ್ರಪ್ರದೇಶ ವಕ್ಫ್ ಮಂಡಳಿ' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 1998ರ ಜನವರಿ 28ರಂದು ನೀಡಿದ ತೀರ್ಪು ಎಲ್ಲವನ್ನೂ ಬದಲಿಸಿತು.

'ಸುಪ್ರೀಂ' ತೀರ್ಪು

ಒಮ್ಮೆ ವಕ್ಫ್ ಎಂದು ಜಮೀನು ದಾಖಲೆಯಾಗಿದ್ದಲ್ಲಿ ಅದು ಕಾಯಂ ಆಗಿ ವಕ್ಫ್ ಆಸ್ತಿ ಆಗಿರುತ್ತದೆ. ಇನಾಮದಾರಿ ಮತ್ತು ಗೇಣಿದಾರ ಪದ್ಧತಿ, ಭೂಸುಧಾರಣಾ ಕಾಯ್ದೆಗಳ ಅನ್ವಯ ಅನ್ಯರ ಹೆಸರಿಗೆ ವಕ್ಫ್ ಜಮೀನು ವರ್ಗಾವಣೆಯಾಗಿದ್ದಲ್ಲಿ, ಅದನ್ನು ರದ್ದುಪಡಿಸಿ ಜಮೀನನ್ನು ವಕ್ಫ್ ಮರುವಶಕ್ಕೆ ಪಡೆಯಬೇಕು.

–1998ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪು

ಸುಪ್ರೀಂ ಕೋರ್ಟ್, 'ಒಮ್ಮೆ ವಕ್ಫ್ ಎಂದು ಜಮೀನು ದಾಖಲೆಯಾಗಿದ್ದಲ್ಲಿ ಅದು ಕಾಯಂ ಆಗಿ ವಕ್ಫ್ ಆಸ್ತಿ ಆಗಿರುತ್ತದೆ. ಇನಾಮದಾರಿ ಮತ್ತು ಗೇಣಿದಾರ ಪದ್ಧತಿ, ಭೂಸುಧಾರಣಾ ಕಾಯ್ದೆಗಳ ಅನ್ವಯ ಅನ್ಯರ ಹೆಸರಿಗೆ ವಕ್ಫ್ ಜಮೀನು ವರ್ಗಾವಣೆಯಾಗಿದ್ದಲ್ಲಿ, ಅದು ಅನೂರ್ಜಿತ. ಅದನ್ನು ರದ್ದುಪಡಿಸಿ ಜಮೀನನ್ನು ವಕ್ಫ್ ಮರುವಶಕ್ಕೆ ಪಡೆಯಬಹುದು. ವಕ್ಫ್ ಜಮೀನುಗಳ ಒತ್ತುವರಿಯನ್ನೂ ತೆರವು ಮಾಡಬೇಕು' ಎಂದು ತೀರ್ಪಿತ್ತಿತು. ದೇಶದ ಇತರ ರಾಜ್ಯಗಳಲ್ಲೂ ಇದು ಜಾರಿಯಾಯಿತು.


ಕರ್ನಾಟಕದಲ್ಲೂ ಈ ತೀರ್ಪಿನ ಅನುಷ್ಠಾನಕ್ಕೆ ಹಲವು ಯತ್ನಗಳು ನಡೆದವು. 2000ನೇ ಇಸವಿಯ ನಂತರ ವಕ್ಫ್ ಮಂಡಳಿ, ಕಾನೂನು ಇಲಾಖೆ, ಅಲ್ಪಸಂಖ್ಯಾತ ಆಯೋಗಗಳು ಇದನ್ನು ಜಾರಿಗೆ ತರುವ ಕಾನೂನು ಪ್ರಕ್ರಿಯೆಗಳನ್ನು ಕೈಗೊಳ್ಳುತ್ತಾ ಬಂದವು. ಈಗ ಅದು ಕಡೆಯ ಹಂತಕ್ಕೆ ಬಂದಿದ್ದು, ಈ ಜಮೀನುಗಳ ಪಹಣಿಯಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಿಸಲಾಗಿದೆ. ರೈತರಿಂದ ಮತ್ತು ಇತರ ಸ್ವತ್ತುಗಳ ಸದ್ಯದ ಮಾಲೀಕರಿಂದ ವಿವರಣೆ ಪಡೆದುಕೊಳ್ಳಲು ನೋಟಿಸ್ ನೀಡಲಾಗಿದೆ.

ಸರ್ಕಾರಿ ಸಂಸ್ಥೆ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ರಾಜ್ಯ ಸರ್ಕಾರದ ಸಂಸ್ಥೆ. ಈ ಮಂಡಳಿಗೆ ಸಚಿವರು ಇರುತ್ತಾರೆ. ಅಧ್ಯಕ್ಷರು ಸರ್ಕಾರದಿಂದಲೇ ನೇಮಕವಾಗುತ್ತಾರೆ ಮತ್ತು ಸಂಸ್ಥೆಯ ಎಲ್ಲ ಸಿಬ್ಬಂದಿ ಸರ್ಕಾರಿ ನೌಕರರೇ ಆಗಿರುತ್ತಾರೆ.

1.70 ಲಕ್ಷ ಎಕರೆ
1974ಕ್ಕೂ ಮುನ್ನ ರಾಜ್ಯ ವಕ್ಫ್ ಮಂಡಳಿ ಬಳಿ ಇದ್ದ ಒಟ್ಟು ಜಮೀನು

79,000 ಎಕರೆ
1974ರ ನಂತರ ಇನಾಮದಾರರಿಗೆ, ಗೇಣಿದಾರರಿಗೆ ವಕ್ಫ್ ಮಂಡಳಿ ಬಿಟ್ಟುಕೊಟ್ಟಿದ್ದ ಜಮೀನು



ಈ ಕ್ರಮಗಳಿಗೆ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ, 'ಮೂರ್ನಾಲ್ಕು ದಶಕಗಳ ಹಿಂದೆಯೇ ಈ ಜಮೀನುಗಳು ಕಾನೂನುಬದ್ಧವಾಗಿ ಸಾವಿರಾರು ಮಂದಿಗೆ ಹಂಚಿಕೆಯಾಗಿವೆ. ಅವುಗಳ ಮಾಲೀಕತ್ವ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾವಣೆಯಾಗಿದೆ. ಕೆಲವರು ಜಮೀನನ್ನು ಮಾರಾಟ ಮಾಡಿದ್ದಾರೆ. ಕೆಲವು ಜಮೀನು ಹಲವು ಬಾರಿ ಮಾರಾಟವಾಗಿವೆ. ಈ ಕೃಷಿ ಜಮೀನುಗಳು ಬಡಾವಣೆಗಳಾಗಿವೆ, ಹಲವೆಡೆ ದೊಡ್ಡ–ದೊಡ್ಡ ವಾಣಿಜ್ಯ ಸಂಕೀರ್ಣಗಳು ನಿರ್ಮಾಣವಾಗಿವೆ. ಪರಿಸ್ಥಿತಿ ಹೀಗಿರುವಾಗ, ನೋಟಿಸ್ ನೀಡಿದರೆ ಮತ್ತು 'ವಕ್ಫ್ ಆಸ್ತಿ' ಎಂದು ನಮೂದಿಸಿದರೆ ಗೊಂದಲ ಮತ್ತು ಆತಂಕ ಉಂಟಾಗಿಯೇ ಆಗುತ್ತದೆ. ನ್ಯಾಯಾಲಯದ ಆದೇಶದಂತೆಯೇ ಈ ಕ್ರಮಗಳನ್ನು ಕೈಗೊಂಡಿದ್ದರೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟುಗಳಿಗೆ ಇದು ಕಾರಣವಾಗುತ್ತದೆ' ಎಂದು ಚರ್ಚೆಯಾಗಿದೆ.

'ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಕಾನೂನು ತಜ್ಞರು, ವಕ್ಫ್ ಮಂಡಳಿ, ಸಮಾಜ ವಿಜ್ಞಾನಿಗಳ ಜತೆ ಚರ್ಚಿಸಬೇಕು. ಸಾಮಾಜಿಕ ಶಾಂತಿ ಕದಡದೇ ಇರುವಂತಹ ಮತ್ತು ಯಾರಿಗೂ ಸಮಸ್ಯೆಯಾಗದಂತಹ ಪರಿಹಾರ ಮಾರ್ಗವನ್ನು ಕಂಡುಕೊಳ್ಳಬೇಕು' ಎಂದು ಸಭೆಯಲ್ಲಿ ತೀರ್ಮಾನವಾಗಿದೆ. ಇದರ ಭಾಗವಾಗಿಯೇ ಪಹಣಿಗಳಲ್ಲಿನ ಬದಲಾವಣೆಯನ್ನು ರದ್ದುಪಡಿಸುವ ಮತ್ತು ನೋಟಿಸ್‌ಗಳನ್ನು ವಾಪಸ್ ಪಡೆಯುವ ಕೆಲಸ ಆರಂಭವಾಗಿದೆ.

ಅನ್ವರ್ ಮಾಣಿಪ್ಪಾಡಿ ವರದಿ ಸುತ್ತ ರಾಜಕಾರಣ

ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ 2012ರಲ್ಲಿ ವಕ್ಫ್ ಆಸ್ತಿಗಳನ್ನು ಮರುವಶಕ್ಕೆ ಪಡೆಯುವ ಕಾರ್ಯಕ್ಕೆ ದೊಡ್ಡಮಟ್ಟದ ಯತ್ನ ಆರಂಭವಾಗಿತ್ತು. ಅಲ್ಪಸಂಖ್ಯಾತ ಆಯೋಗದ ಅಂದಿನ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ಅವರು ವಕ್ಫ್ ಆಸ್ತಿಗಳ ಸ್ಥಿತಿಗತಿಗಳ ಸಂಬಂಧ ವರದಿ ಸಿದ್ದಪಡಿಸಿ, ಯಡಿಯೂರಪ್ಪ ಸರ್ಕಾರಕ್ಕೆ 2012ರ ಫೆಬ್ರುವರಿ 24ರಂದು ಸಲ್ಲಿಸಿದ್ದರು. ಆದರೆ ಸರ್ಕಾರವು ವರದಿಯನ್ನು ವಿಧಾನ ಮಂಡಲದಲ್ಲಿ ಮಂಡಿಸಿರಲಿಲ್ಲ. ಕಾಂಗ್ರೆಸ್‌ನ ಹಲವು ನಾಯಕರು, ಉದ್ಯಮಿಗಳು ಅಕ್ರಮವಾಗಿ ವಕ್ಫ್ ಆಸ್ತಿಗಳನ್ನು ಕಬಳಿಸಿದ್ದಾರೆ. ಅವರಿಂದ ಆ ಆಸ್ತಿಗಳನ್ನು ಮರುವಶಕ್ಕೆ ಪಡೆದುಕೊಳ್ಳಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2013ರಲ್ಲಿ ಅಧಿಕಾರಕ್ಕೆ ಬಂದಾಗ ವರದಿಯನ್ನು ಪರಿಶೀಲಿಸಲಾಗಿತ್ತು. ಆದರೆ 2016ರ ಮಾರ್ಚ್ ಮೂರರಂದು ಈ ವರದಿಯ ಶಿಫಾರಸುಗಳನ್ನು ತಿರಸ್ಕರಿಸಿ ಅಧಿಸೂಚನೆ ಹೊರಡಿಸಲಾಗಿತ್ತು. 2020ರಲ್ಲಿ ಯಡಿಯೂರಪ್ಪ ಅವರು ಮತ್ತೆ ಮುಖ್ಯಮಂತ್ರಿಯಾದಾಗ, ಅನ್ವರ್ ಮಾಣಿಪ್ಪಾಡಿ ವರದಿಯ ಶಿಫಾರಸುಗಳ ಜಾರಿಗೆ ಕ್ರಮವಹಿಸಿತು. 2020ರ ಸೆಪ್ಟೆಂಬರ್ 23ರಂದು ವಿಧಾನಸಭೆಯಲ್ಲಿ ಮತ್ತು ಅದೇ 25ರಂದು ವಿಧಾನ ಪರಿಷತ್ತಿನಲ್ಲಿ ವರದಿಯನ್ನು ಮಂಡಿಸಲಾಯಿತು. ವರದಿಯ ಬಗ್ಗೆ ಎರಡೂ ಸದನಗಳಲ್ಲಿ ಯಾವುದೇ ಚರ್ಚೆ ನಡೆಯಲಿಲ್ಲ. ಆದರೆ ವರದಿಯನ್ನು ಸ್ವೀಕರಿಸಿದ್ದ ಕಾರಣಕ್ಕೆ, ವಕ್ಫ್ ಆಸ್ತಿಗಳನ್ನು ಮರುವಶಕ್ಕೆ ಪಡೆದುಕೊಳ್ಳಲು ಕ್ರಮ ತೆಗೆದುಕೊಳ್ಳಲು ಸಂಬಂಧಿತ ಇಲಾಖೆಗಳಿಗೆ ಸೂಚಿಸಲಾಗಿತ್ತು. ಅದರಂತೆ ರಾಜ್ಯದಾದ್ಯಂತ ಎಲ್ಲ ವಕ್ಫ್ ಆಸ್ತಿಗಳ ಸರ್ವೆಯನ್ನು ಕೈಗೊಳ್ಳಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಕಂದಾಯ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮಟ್ಟದಲ್ಲಿ ಹಲವು ಆದೇಶಗಳನ್ನು ಹೊರಡಿಸಲಾಗಿತ್ತು. 2023ರಲ್ಲಿ ಸರ್ಕಾರ ಬದಲಾದರೂ ಈ ಕೆಲಸಗಳು ನಡೆಯುತ್ತಲೇ ಇದ್ದವು. ಈಗ ನೋಟಿಸ್ ಜಾರಿಯಾದ ಹೊತ್ತಲ್ಲೇ, 'ಅನ್ವರ್ ಮಾಣಿಪ್ಪಾಡಿ ವರದಿಯನ್ನು ಜಾರಿಗೆ ತನ್ನಿ' ಎಂದು ಬಿಜೆಪಿ ಪಟ್ಟು ಹಿಡಿದಿದೆ.

ಆಧಾರ: ಸಯ್ಯದ್ ಅಲಿ ಮತ್ತು ಇತರರು ವರ್ಸಸ್ ಆಂಧ್ರಪ್ರದೇಶ ವಕ್ಫ್ ಮಂಡಳಿ–ಸುಪ್ರೀಂ ಕೋರ್ಟ್ ತೀರ್ಪು, ವಿಧಾನಸಭೆ ಮತ್ತು ವಿಧಾನ ಪರಿಷತ್ ಪ್ರಶ್ನೋತ್ತರಗಳು, ರಾಜ್ಯ ಸರ್ಕಾರದ ಆದೇಶಗಳು, ಅನ್ವರ್ ಮಾಣಿಪ್ಪಾಡಿ ವರದಿ ಮೇಲಿನ ನಡಾವಳಿಗಳು ಮತ್ತು ಆದೇಶಗಳು

2017ರಲ್ಲೇ ಆದೇಶ– ಪ್ರಕ್ರಿಯೆ ನಿರಂತರ

ಸಿದ್ದರಾಮಯ್ಯ ಅವರ ಸರ್ಕಾರವು 2016ರಲ್ಲಿ ಅನ್ವರ್ ಮಾಣಿಪ್ಪಾಡಿ ವರದಿಯನ್ನು ತಿರಸ್ಕರಿಸಿದ್ದರೂ ವಕ್ಫ್ ಆಸ್ತಿ ಮರುವಶಕ್ಕೆ ಆ ಅವಧಿಯಲ್ಲೇ ಕ್ರಮ ತೆಗೆದುಕೊಂಡಿತ್ತು. ನಂತರ ಬಂದ ಎಚ್‌.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಗಳು ಈ ಪ್ರಕ್ರಿಯೆಯನ್ನು ಮುಂದುವರಿಸಿದ್ದವು.

2017ರಲ್ಲಿ ಈ ಪ್ರಕ್ರಿಯೆ ಆರಂಭಿಸುವ ಮುನ್ನ, 1998ರ ಸುಪ್ರೀಂ ಕೋರ್ಟ್ ಆದೇಶದ ಅನ್ವಯ ವಕ್ಫ್ ಆಸ್ತಿಗಳನ್ನು ಮರುವಶಕ್ಕೆ ಪಡೆಯುವ ಸಂಬಂಧ, ವಕ್ಫ್ ಮಂಡಳಿಯು ಕಾನೂನು ಇಲಾಖೆಯ ಅಭಿಪ್ರಾಯ ಕೇಳಿತ್ತು. ನಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು 2017ರ ಜುಲೈ 27ರಂದು ಆದೇಶ ಹೊರಡಿಸಿತ್ತು. 'ಸುಪ್ರೀಂ ಕೋರ್ಟ್‌ನ ಆದೇಶದಂತೆ ಇನಾಮದಾರಿ–ಗೇಣಿದಾರಿ ಪದ್ಧತಿಗಳ ರದ್ದತಿ ಮತ್ತು ಭೂಸುಧಾರಣಾ ಕಾಯ್ದೆ ಅಡಿ ನೀಡಲಾದ ವಕ್ಫ್ ಆಸ್ತಿಗಳನ್ನು ಮರುವಶಕ್ಕೆ ಪಡೆಯಬೇಕು' ಎಂದು ವಕ್ಫ್ ಮಂಡಳಿಗೆ 2017ರ ಡಿಸೆಂಬರ್ 19ರಂದು ಸೂಚಿಸಿತ್ತು.

2021ರಲ್ಲಿ ಖಾತೆ ಬದಲಾವಣೆಗೆ ಕ್ರಮ ಎಂದಿದ್ದ ಶಶಿಕಲಾ ಜೊಲ್ಲೆ


'ವಕ್ಫ್ ಆಸ್ತಿಗಳ ಮರುವಶಕ್ಕೆ ಸಂಬಂಧಿಸಿದಂತೆ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ' ಎಂದು 2021ರಲ್ಲಿ ಅಂದಿನ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾಗಿದ್ದ ಬಿಜೆಪಿಯ ಈಗಿನ ಶಾಸಕಿ ಶಶಿಕಲಾ ಜೊಲ್ಲೆ ಅವರು ವಿಧಾನ ಪರಿಷತ್ತಿನಲ್ಲಿ ಉತ್ತರ ನೀಡಿದ್ದರು. ವಕ್ಫ್ ಆಸ್ತಿಗಳ ರಕ್ಷಣೆಗೆ ವಕ್ಫ್ ಕಾಯ್ದೆ ಮತ್ತು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) ಕಾಯ್ದೆ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 2ನೇ ಸುತ್ತಿನ ಸರ್ವೆ ಕಾರ್ಯ ಪೂರ್ಣಗೊಂಡಿದೆ. ರಾಜ್ಯಪತ್ರದಲ್ಲಿ ಅಧಿಸೂಚನೆ ಮತ್ತು ಖಾತೆ ಬದಲಾವಣೆಗೆ ಕ್ರಮ ವಹಿಸಲಾಗುತ್ತಿದೆ' ಎಂದು ವಿವರಿಸಿದ್ದರು.

ಸಿನಿ ಬಿಟ್ಸ್

'ನಾ ನಿನ್ನ ಬಿಡಲಾರೆ'ಯ ರಾಯರ ಹಾಡು

ಅನಂತ್ ನಾಗ್, ಲಕ್ಷ್ಮಿ ಜೋಡಿಯಾಗಿ ನಟಿಸಿದ್ದ 'ನಾ ನಿನ್ನ ಬಿಡಲಾರೆ' ಚಿತ್ರದಲ್ಲಿ 'ಬಿಡೆನು ನಿನ್ನ ಪಾದ' ಹಾಡು ಬಹಳ ಜನಪ್ರಿಯವಾಗಿತ್ತು. ಇದೀಗ 'ನಾ ನಿನ್ನ ಬಿಡಲಾರೆ' ಶೀರ್ಷಿಕೆ ಹೊಂದಿರುವ ಚಿತ್ರವೊಂದು ಬಿಡುಗಡೆಗೆ ಸಿದ್ಧವಾಗಿದ್ದು, ಚಿತ್ರತಂಡ 'ಗುರು ಸಾರ್ವಭೌಮಂ.. ಗುರು ರಾಘವೇಂದ್ರಂ' ಎಂಬ ರಾಯರ ಕುರಿತಾದ ಭಕ್ತಿಗೀತೆಯನ್ನು ಇತ್ತೀಚೆಗಷ್ಟೇ ಬಿಡುಗಡೆಗೊಳಿಸಿದೆ. ನವೀನ್ ಜಿ.ಎಸ್ ನಿರ್ದೇಶಿಸಿರುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ ಹೊಂದಿರುವ ಚಿತ್ರ ನವೆಂಬರ್ 29ಕ್ಕೆ ತೆರೆಗೆ ಬರಲಿದೆ. ಕಮಲ ಉಮಾ ಭಾರತಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ, ಭಾರತಿ ಬಾಳಿಯವರು ಈ ಚಿತ್ರವನ್ನ ನಿರ್ಮಿಸಿದ್ದಾರೆ. ಪಂಚಿ ಚಿತ್ರದ ನಾಯಕ. ಅಂಬಾಲಿ ಭಾರತಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ವೀರೇಶ್ ಎಸ್.ಛಾಯಾಚಿತ್ರಗ್ರಹಣ, ಎಂ.ಎಸ್.ತ್ಯಾಗರಾಜು ಸಂಗೀತ, ದೀಪಕ್ ಸಿ.ಎಸ್ ಸಂಕಲನ ಚಿತ್ರಕ್ಕಿದೆ. ಸೀರುಂಡೆ ರಘು,ಕೆ.ಎಸ್. ಶ್ರೀಧರ್,ಶ್ರೀನಿವಾಸ್ ಪ್ರಭು,ಹರಿಣಿ ಮುಂತಾದವರು ಚಿತ್ರದಲ್ಲಿದ್ದಾರೆ. ❖


ಅಂಬಾಲಿ ಭಾರತಿ

'ದಿಂಸೋಲ್' ಫಸ್ಟ್‌ಲುಕ್ ಬಿಡುಗಡೆ

'ಕಿರಿಕ್ ಪಾರ್ಟಿ' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ನಾಗೇಂದ್ರ ಗಾಣಿಗ 'ಅಭಿರಾಮಚಂದ್ರ' ಸಿನಿಮಾ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದರು. ಇದೀಗ ಅವರ ಹೊಸ ಪ್ರಾಜೆಕ್ಟ್ ಸೆಟ್ಟೇರಿದೆ.

ಕರಾವಳಿ ಸಂಸ್ಕೃತಿಯ ಸೊಗಡನ್ನು 'ದಿಂಸೋಲ್' ಸಿನಿಮಾ ಮೂಲಕ ಹೇಳಲು ಹೊರಟಿದ್ದಾರೆ. ಇತ್ತೀಚೆಗೆ ಚಿತ್ರದ ಶೀರ್ಷಿಕೆ ಮತ್ತು ಫಸ್ಟ್‌ಲುಕ್ ಬಿಡುಗಡೆಗೊಂಡಿತು. ಕರಾವಳಿ ಭಾಗದಲ್ಲಿ ಶಿವರಾತ್ರಿ ಸಂದರ್ಭದಲ್ಲಿ ನಡೆಯುವ ಆಚರಣೆಯೇ ದಿಂಸೋಲ್. ಆದಿದೇವಿಯು ರಕ್ತೇಶ್ವರಿ ಉಗ್ರ ಅವತಾರ ತಾಳಿದ್ದು, ಪೋಸ್ಟರ್ ಗಮನಸೆಳೆದಿದೆ.


ಶಿವಾನಿ ರೈ, ರಥ ಕಿರಣ್

'ಅಭಿರಾಮಚಂದ್ರ' ಸಿನಿಮಾದಲ್ಲಿ ಜೋಡಿಯಾಗಿ ನಟಿಸಿದ್ದ ರಥಕಿರಣ್ ಹಾಗೂ ಶಿವಾನಿ ರೈ 'ದಿಂಸೋಲ್' ಚಿತ್ರದಲ್ಲಿಯೂ ನಾಯಕ-ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಉಳಿದಂತೆ ಮಾನಸಿ ಸುಧೀರ್, ದೇವದಾಸ್ ಕಾಪಿಕಾಡ್, ರಘು ಪಾಂಡೇಶ್ವರ್, ದೀಪಕ್ ರೈ ಪಣಾಜಿ, ಮೈಮ್ ರಾಮ್‌ದಾಸ್, ಗಣೇಶ್ ಕಾರಂತ್, ಸೂರಜ್ ಹಾಗೂ ಸುರಭಿ ಹಾಗೂ ಕರಾವಳಿ ಭಾಗದ ರಂಗಭೂಮಿ ಕಲಾವಿದರು ತಾರಾಬಳಗದಲ್ಲಿದ್ದಾರೆ. ಡಿಸೆಂಬರ್ ತಿಂಗಳಲ್ಲಿ ಚಿತ್ರತಂಡ ಚಿತ್ರೀಕರಣ ಆರಂಭಿಸಲಿದೆ. ಸಿನಿಮಾಗೆ ಸಂದೀಪ್ ವಲ್ಲೂರಿ ಛಾಯಾಚಿತ್ರಗ್ರಹಣ, ಪ್ರತೀಕ್ ಶೆಟ್ಟಿ ಸಂಕಲನ, ನಾಗೇಂದ್ರ ಗಾಣಿಗ ಸಾಹಿತ್ಯ, ಸಂಭಾಷಣೆ ಬರೆಯುತ್ತಿದ್ದು, ರವಿ ಬಸ್ರೂರ್ ಸಂಗೀತ ನಿರ್ದೇಶನವಿದೆ. ಸಂಹಿತಾ ಪ್ರೊಡಕ್ಷನ್‌ನಡಿ ಚಿತ್ರ ಮೂಡಿಬರಲಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಆರೋಗ್ಯದ ಕಲೆ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

61

ನಾವು ಉಣ್ಣುವ ಅನ್ನದಿಂದ ನಮ್ಮ ವಿಚಾರಗಳು ನಿರ್ಣಯವಾಗತ್ತೈತಿ ಅಂತ ನಮ್ಮ ಹಿರಿಯರು ಹೇಳಿದ್ದಾರೆ. ನಮ್ಮಲ್ಲಿ ಅಥಣಿ ಶಿವಯೋಗಿಗಳು ಅಂತಾ ಒಬ್ಬರು ಇದ್ದರು. ಬಹಳ ದೊಡ್ಡ ತಪಸ್ವಿಗಳು. ಅವರ ದೇವರ ಪೂಜೆಗೆ ಪ್ರತಿನಿತ್ಯ ಒಬ್ಬರು ಆಕಳ ಹಾಲು ತಂದುಕೊಡುತ್ತಿದ್ದರು. ಅದನ್ನು ಇವರು ದೇವರಿಗೆ ಅಭಿಷೇಕ ಮಾಡುತ್ತಿದ್ದರು. ಒಂದಿನ, 'ಇವತ್ತು ಈ ಹಾಲು ಅಭಿಷೇಕಕ್ಕೆ ಬೇಡ' ಎಂದು ಬದಿಗಿಟ್ಟರು. ಹಾಲು ವ್ಯರ್ಥವಾಗತ್ತೈತಿ ಅಂತ ಆಶ್ರಮದ ಸೇವಾ ಹುಡುಗ ಅದನ್ನು ಕುಡಿದುಬಿಟ್ಟ.

ಅದೇ ದಿನ ಒಬ್ಬ ಶ್ರೀಮಂತ ಭಕ್ತ ಸ್ವಾಮಿಗಳನ್ನು ನೋಡಲು ಬಂದರು. ಕೈಯಲ್ಲಿ ಬಂಗಾರದ ಉಂಗುರ ಇತ್ತು. ಸ್ವಾಮಿಗಳನ್ನು ನೋಡುವಾಗ ಉಂಗುರ ಬೇಡ ಎಂದು ಅದನ್ನು ಕಳಚಿ ಕೋಟಿನ ಜೇಬಿನಲ್ಲಿಟ್ಟು ಕೋಟನ್ನು ಗೂಟಕ್ಕೆ ನೇತು ಹಾಕಿ ಪೂಜೆಗೆ ಹೋದರು. ಪೂಜೆ ಮುಗಿಸಿ ಬಂದಾಗ ಕೋಟಿನಲ್ಲಿ ಬಂಗಾರದ ಉಂಗುರ ಇರಲಿಲ್ಲ. ಈ ವಿಚಾರವನ್ನು ಗುರುಗಳಿಗೆ ಹೇಳಿದರು. ಅದಕ್ಕೆ ಗುರುಗಳು 'ಇವತ್ತಿನ ಹಾಲು ಯಾರು ಉಂಡಾರ?' ಎಂದು ಕೇಳಿದರು. ಸೇವಾ ಹುಡುಗ ಉಂಡಾನ ಎನ್ನುವುದು ಪತ್ತೆಯಾಯಿತು. ಆತನನ್ನು ಕರೆದು 'ನೀನು ಉಂಗುರ ತಗಂಡಿಯೇನು?' ಎಂದು ಪ್ರಶ್ನಿಸಿದರು ಸ್ವಾಮೀಜಿ. 'ಹೌದು, ತಪ್ಪಾಯ್ತು' ಎಂದು ಹೇಳಿ ಉಂಗುರವನ್ನು ವಾಪಸು ಕೊಟ್ಟ ಹುಡುಗ. ಅದಕ್ಕೆ ಅಚ್ಚರಿಗೊಂಡ ಶ್ರೀಮಂತ ಭಕ್ತ 'ಸ್ವಾಮೀಜಿ ಇದೇ ಹುಡುಗನೇ ಉಂಗುರ ಕದ್ದಾನಂತ ನಿಮಗೆ ಹೇಗೆ ಗೊತ್ತಾಯಿತು' ಎಂದು ಕೇಳಿದರು. 'ಪ್ರತಿನಿತ್ಯ ಒಬ್ಬರು ನನ್ನ ಅಭಿಷೇಕಕ್ಕೆ ಹಾಲು ತಂದುಕೊಡುತ್ತಿದ್ದರು. ಇವತ್ತು ನಾನು ಅದನ್ನು ಉಪಯೋಗಿಸಿರಲಿಲ್ಲ. ಆ ಹಾಲನ್ನು ಇವ ಕುಡುದಾನ. ನಾನು ಯಾಕೆ ಅದನ್ನು ಅಭಿಷೇಕಕ್ಕೆ ಬಳಸಲಿಲ್ಲ ಅಂದರ ಪ್ರತಿ ದಿನ ಅವರು ತಮ್ಮ ಹೊಲದಲ್ಲಿಯೇ ದನ ಮೇಯಿಸುತ್ತಿದ್ದರು. ನಿನ್ನೆ ಅವರು ಕದ್ದು ಬೇರೆಯವರ ಹೊಲದಲ್ಲಿ ಮೇಯಿಸಿದ್ದರು. ಕದ್ದು ಹುಲ್ಲು ತಿಂದ ಗುಣ ಆ ಹಾಲಿನಲ್ಲಿತ್ತು. ಅದನ್ನು ಕುಡಿದಿದ್ದರಿಂದ ಆ ಹುಡುಗನಿಗೂ ಕಳ್ಳತನದ ಭಾವ ಬಂತು. ಉಣ್ಣುವ ಅನ್ನ ಯಾವ ಭಾವದಿಂದ ಇರತ್ತೈತಲ್ಲ ಅದೇ ಭಾವ ನಮ್ಮಲ್ಲೂ ಉಂಟಾಗತ್ತೈತಿ' ಎಂದರು. ಉಣ್ಣೋದು ಎಷ್ಟು ಮುಖ್ಯವೋ ಅದು ಯಾವುದರಿಂದ ಸಿದ್ಧವಾಗಿದ್ದು ಎನ್ನುವುದೂ ಅಷ್ಟೇ ಮುಖ್ಯ.

ಹಿತವಾದದ್ದು ಉಣ್ಣ ಬೇಕು. ಜೊತೆಗೆ ಮಿತವಾಗಿಯೂ ಉಣ್ಣಬೇಕು. ಮಿತ ಎಂದರೆ ಸ್ವಲ್ಪ ಉಣ್ಣಬೇಕು ಎಂದು ಅರ್ಥವಲ್ಲ. ಉಂಡಿದ್ದು ಕರಗಬೇಕು. ನೀವು ಎಷ್ಟು ಬೇಕಾದರೂ ಉಣ್ಣಬಹುದು. ಆದರೆ ಅದನ್ನು ಕರಗಿಸುವ ಶಕ್ತಿ ಇರಬೇಕು. ಯಾರೋ ಒಬ್ಬರು ಡಾಕ್ಟರ್ ಹತ್ತಿರ ಹೋಗಿ, 'ನಾನು ಥಿನ್ ಆಗಬೇಕು. ಅದಕ್ಕೆ ಏನು ಮಾಡಬೇಕು' ಅಂತ ಕೇಳಿದರಂತೆ. 'ಥಿನ್ ಆಗಬೇಕು ಅಂದರ ತಿನ್ನೋದು ಕಡಿಮೆ ಮಾಡಬೇಕು' ಎಂದು ಡಾಕ್ಟರ್ ಹೇಳಿದರಂತೆ.

ಹಣತೆಗೆ ಎಣ್ಣೆ ಬೇಕು ಅಂತ ಕೊಡದಲ್ಲಿ ಎಣ್ಣೆ ಸುರಿಯಬಾರದು. ಹಾಗಂತ ಹಾಕದೆಯೂ ಇರಬಾರದು. ಎಷ್ಟು ಹಾಕಬೇಕು ಅಂದರ ದೀಪ ಆರಿರಬಾರದು, ಎಣ್ಣೆ ಚೆಲ್ಲಿರಬಾರದು. ಎಣ್ಣೆ ಖಾಲಿಯೂ ಆಗಬಾರದು. ಹಾಗಿರಬೇಕು. ಅದು ದೀಪ ಬೆಳಗುವ ಕಲೆ. ಹಾಗೆಯೇ ಈ ದೇಹ ಸುಕ್ಕುಗಟ್ಟಿರಬಾರದು, ಚೈತನ್ಯದಿಂದ ಇರಲು ಬೇಕಾದಷ್ಟು ತಿನ್ನಬೇಕು. ಅದೇ ಆರೋಗ್ಯದ ಕಲೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ನವೆಂಬರ್ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಷಷ್ಠಿ ಗಂ. 24-35 ನಕ್ಷತ್ರ: ಪೂರ್ವಾಷಾಢ ಗಂ. 11-47 ಯೋಗ: ಧೃತಿ ಗಂ. 9-51 ಕರಣ: ಕೌಲವ ಗಂ. 12-42, ತುಲಾ ಮಾಸದ 21 ನೇ ದಿನ, ಮಳೆನಕ್ಷತ್ರ: ವಿಶಾಖ 1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-30 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 04 ಜುಮಾದುಲ್ಲಾವಲ್
ದಿನ ವಿಶೇಷ : ಪ್ರತಿಹರ ಷಷ್ಠಿ ಅಥವಾ ಸೂರ್ಯ ಷಷ್ಠಿ, ಅದೃಷ್ಟ ಸಂಖ್ಯೆ : 5, 11

ಮೇಷ: ಮೂಲಮನೆಯಲ್ಲಿ ಅಮೂಲ್ಯ ವಸ್ತುಗಳ ಚೋರ ಕೃತ್ಯಗಳು ನಡೆಯಲಿವೆ. ತುಂಬ ವಿಶ್ವಾಸವಿರುವಂಥ ವ್ಯಕ್ತಿಗಳು ಅಥವಾ ಸಂಬಂಧಿಗಳು ಮನೆಗೆ ಆಗಮಿಸಬಹುದು.

ವೃಷಭ: ಮಾತೃ ವರ್ಗದವರ ಸಹಾಯದಿಂದ ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು. ಕಳೆಗುಂದಿದ ಮನಸ್ಸಿಗೆ ಗೆಳೆಯರ ಜತೆ ಸ್ವಲ್ಪ ಮಾತುಕತೆ ನಡೆಸುವುದರಿಂದ ಸಮಾಧಾನ ಸಿಗಲಿದೆ.

ಮಿಥುನ: ಹೊಸ ಮನೆಗೆ ಬೇಕಾದ ವಸ್ತುಗಳ ಖರೀದಿಗೆ ಮುಂದಾಗುವಿರಿ. ಕಚೇರಿಯ ಕೆಲಸಗಳನ್ನು ಅಂದಿನದ್ದನ್ನು ಅಂದೇ ಮುಗಿಸುವ ಅಭ್ಯಾಸವನ್ನು ಮಾಡಿಕೊಳ್ಳಿ.

ಕರ್ಕಾಟಕ: ವ್ಯವಹಾರಗಳಲ್ಲಿ ಜಯವಿದ್ದು, ದೊಡ್ಡ ಕಂಪನಿಯೊಂದಿಗೆ ಪಾಲುದಾರಿಕೆಯ ಅವಕಾಶ ಸಿಗಲಿದೆ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸಿ. ಶುಚಿತ್ವ ಕಾಪಾಡಿಕೊಳ್ಳಿ.

ಸಿಂಹ: ಸಂಘ-ಸಂಸ್ಥೆಗಳ ಜವಾಬ್ದಾರಿ ನೋಡುವವರಿಗೆ ನಾಲ್ಕಾರು ಮಾತುಗಳನ್ನು ಕೇಳಬೇಕಾಗುವುದು. ಇತರರ ಮಾತುಗಳನ್ನು ಋಣಾತ್ಮಕವಾಗಿ ತೆಗೆದುಕೊಳ್ಳುವ ಬದಲು ತಪ್ಪುಗಳನ್ನು ಸರಿಪಡಿಸಿಕೊಳ್ಳಿ.

ಕನ್ಯಾ: ಸರ್ಕಾರಿ ಅಧಿಕಾರಿಗಳಲ್ಲಿ ವಿನಯಪೂರ್ವಕವಾಗಿ ನಡೆದುಕೊಳ್ಳುವುದರಿಂದ ಕೆಲಸ ಸರಾಗವಾಗಿ ನಡೆಯುವುದು. ಸಮಾಜದ ಹಿತಕ್ಕಾಗಿ ಮಾಡುತ್ತಿರುವ ಕೆಲಸದಲ್ಲಿ ಜಯ ದೊರೆಯುತ್ತದೆ.

ತುಲಾ: ಜನಗಳ ಕೆಟ್ಟ ದೃಷ್ಟಿಯ ಫಲ, ಸೋಮಾರಿತನವು ಸೇರಿಕೊಂಡು ಉದ್ಯೋಗ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ಎದುರಾಗಬಹುದು. ಸ್ಟೇಷನರಿ ವ್ಯಾಪಾರ ಕೈಗೊಳ್ಳುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಸುವಿರಿ.

ವೃಶ್ಚಿಕ: ನಿಮ್ಮ ದಿನಚರಿ ಹಾಗೂ ಕೈಗೊಳ್ಳಲಿರುವ ನಿರ್ಧಾರಗಳು ಅಗತ್ಯವಾಗಿ ತಿಳಿದಿರಲಿ. ಹೆಂಡತಿಯ ತವರುಮನೆಯ ಕಡೆಯಿಂದ ಅಗತ್ಯದ ಸಹಾಯವಾಗಲಿದೆ.

ಧನು: ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ. ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಸಂಗೀತವನ್ನು ಕಲಿಯುವ ಆಸಕ್ತರಿಗೆ ವಾದ್ಯಗಳ ಖರೀದಿಯ ಯೋಗವಿದೆ.

ಮಕರ: ಪರಿಸ್ಥಿತಿ ಸೂಕ್ಷ್ಮವಾಗಿ ಅವಲೋಕಿಸಿಕೊಂಡು ಕನಸುಗಳನ್ನು ಸಾಕಾರಗೊಳಿಸುವುದಕ್ಕಾಗಿ ಅವಿಶ್ರಾಂತವಾಗಿ ದುಡಿಯುವಿರಿ. ಕುಟುಂಬದ ಸಣ್ಣ ಸಮಸ್ಯೆಯನ್ನೂ ನಿರ್ಲಕ್ಷಿಸಬೇಡಿ.

ಕುಂಭ: ಸರಳ ಸ್ವಭಾವವನ್ನು ಇತರರು ದುರುಪಯೋಗಪಡಿಸಿಕೊಳ್ಳದಂತೆ ಜಾಗ್ರತೆ ವಹಿಸಿ. ವಿದ್ಯಾರ್ಥಿಗಳ ಆಲೋಚನೆಗೆ ಸರಿ ಹೊಂದುವಂಥ ಶಿಕ್ಷಕರು ದೊರಕಿ ಯಶಸ್ಸಿಗೆ ದಾರಿದೀಪವಾಗುತ್ತಾರೆ.


ಮೀನ: ವೃತ್ತಿ ಬದುಕಿನಲ್ಲಿ ಕ್ರಾಂತಿಕಾರಿ ಅನಿಸಿಕೆ ಅಭಿಪ್ರಾಯಗಳಿಗೆ ಹೆಚ್ಚಿನ ವಿರೋಧ ಬರಲಿದೆ. ಕೆಲವೊಂದು ಬಾರಿ ಒಳ್ಳೆಯದಾಗಲು ಇತರರ ವಿರೋಧವನ್ನು ಕಟ್ಟಿಕೊಳ್ಳುವುದು ಅನಿವಾರ್ಯ.

ಪದಬಂಧ 5854

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಗಲವಾದ ಹರಿವಾಣ (3)
4.ವನದಲ್ಲಿರುವ ಉಡುಗೆ (3)
6. ಮದುವೆಯಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
7.ಶರ ಹಿಡಿದಿರುವ ಶಿವಭಕ್ತೆ (3)
9.ನಾವಿಕನ ಹತ್ತಿರವಿರುವ ಕಬ್ಬಿಗ ತಿರುಗಿದ್ದಾನಲ್ಲಾ! (2)
10.ಹತೋಟಿಗೊಂದು ಪರ್ಯಾಯ ಪದ (2)
11.ಪಾಯ ಹಾಕುವಾಗ ಮಾಡಿದ ಸಿಹಿಭಕ್ಷ್ಯ (3)
15. ಕೈಗೂಡದ ಆಸೆಯು ಗಾಳಿಯಿಂದ ಪ್ರಾರಂಭವಾಗಿದೆ (5)
16.ಕರಿಯ ಮರಿ ಬಿದ್ದ ಆಳವಾದ ಗುಂಡಿ (3)
17.ಸರ ತರುವಾಗ ಬೀಸಿದ ಗಾಳಿ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಧೀನದಲ್ಲಿರುವಿಕೆ (4)
2.ಬರಿದಾಗದ ಬತ್ತಳಿಕೆ (4)
3.ಪಥದ ಹತ್ತಿರ ಸಾಗುವಾಗ ಕೈಗೊಂಡ ಪ್ರತಿಜ್ಞೆ (3)
4.ಹಾರವನು ಹಿಡಿದಿರುವ ಚಿನ್ನದ ನಾಣ್ಯ (3)
5.ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
8.ಕೀವು ಇಲ್ಲಿ ಕಾಣಿಸುತ್ತಿದೆ (3)
9.ದಾಯಾದಿಯ ಬೀಳ್ಕೊಡುವಿಕೆ! (3)
10.ಮಂಗಳ ಗ್ರಹವನ್ನು ಹೀಗೂ ಕರೆವರು (4)
11. ಕಾಲ ಹತ್ತಿರ ಹರಿಯುತ್ತಿರುವ ದ್ರವರೂಪದ ಲೋಹ (4)
12.ವರನು ನೋಡುತ್ತಿರುವ ಕೊಳ (4)
13.ನಗರದ ಬಳಿ ಕೇಳಿಸಿದ ಚರ್ಮ ವಾದ್ಯ (3)
14.ರಂಗು ತುಂಬಿ ಬಿಡಿಸಿರುವ ಹಸೆ (3)



5853ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅತ್ತರು 2.ಹಂಜಿ 3.ವಾಚ್ಯಾತೀತ 4.ಬಂಧನ 5.ಕದ 7.ಶ್ರೀನಿವಾಸರಾಮಾನುಜನ್ 10.ಸುಮ 12.ಶತಕ 13.ಹರಿವಾಣ 14.ಹಾಲು 15.ಗದಗ

ಮೇಲಿಂದ ಕೆಳಕ್ಕೆ:
1.ಅಪಧಮನಿ 2.ಹಂತಕ 3.ವಾಲ್ಮೀಕಿರಾಮಾಯಣ 6.ಪಾನು 8.ವಾಚ್ಯ 9.ಜಲತರಂಗ 11.ಮಹಲು

ಸುಡೊಕು 6239

8				1				
	2	9		5		7		3
	1	5			3		2	
	4					8		
3			8		1			2
1	9			2				7
	8						7	
2		4	9		7	1		6
	5			3				9


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6238 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,213
ಇಂದಿನ ಅಂತ್ಯ	24,484
▲	270
ದಿನದ ಗರಿಷ್ಠ	24,537

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹350-560
ದ್ವಿತಳಿ (ಬಿ.ವಿ)	₹362-915

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹166

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹17800
ಎಸಿ	₹11420
ಆರ್‌ಪಿ	₹18000
ಆರ್‌ಸಿ	₹10140

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	41500-49500
ಕಾರ್ಕಳ	
ಹಳತು	30000-49500
ಕುಮಟ	
ಚಿಪ್ಪು	22569-25869
ಕೋಕ	6019-21899
ಫ್ಯಾಕ್ಟರಿ	3019-17911
ಹಳೆಚಾಲಿ	36099-38899
ಹೊಸಚಾಲಿ	30699-34509
ಶಿವಮೊಗ್ಗ	
ಬೆಟ್ಟೆ	36366-56009
ಗೊರಬಲು	17580-35599
ರಾಶಿ	36669-49999
ಸರಕು	57863-84500
ಸಿದ್ದಾಪುರ	
ಬಿಳಿಗೋಟು	23699-26319
ಚಾಲಿ	30509-34319
ಕೋಕ	21900-24899
ಕೆಂಪುಗೋಟು	16119-16119
ರಾಶಿ	39469-46009
ತಟ್ಟಿಬೆಟ್ಟೆ	44799-44799
ಶಿರಸಿ	
ಬೆಟ್ಟೆ	26699-36399
ಬಿಳಿಗೋಟು	22199-28808
ಚಾಲಿ	32169-35501
ರಾಶಿ	41299-43791

ಸಂಕ್ಷಿಪ್ತ ಸುದ್ದಿ

11ಕ್ಕೆ ಏರ್ ಇಂಡಿಯಾ ಜತೆ ವಿಸ್ತಾರಾ ವಿಲೀನ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಜೊತೆಗೆ ವಿಸ್ತಾರಾ ಕಂಪನಿಯು ನವೆಂಬರ್ 11ರಂದು ಅಧಿಕೃತವಾಗಿ ವಿಲೀನಗೊಳ್ಳಲಿದೆ. ಇದರಿಂದ ವಿಸ್ತಾರಾದ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಏರ್ ಇಂಡಿಯಾ ವಿಮಾನಯಾನ ಕಂಪನಿ ತಿಳಿಸಿದೆ.

ಈ ಮೊದಲು ನಿಗದಿಯಾಗಿರುವ ವಿಸ್ತಾರಾ ವಿಮಾನಗಳ ಕಾರ್ಯಾಚರಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಸೇವೆ ಮುಂದುವರಿಯಲಿದೆ. ವಿಸ್ತಾರಾ ಪ್ರಯಾಣಿಕರಿಗೆ ನೆರವು ಕಲ್ಪಿಸಲು ಹೆಲ್ಪ್ ಡೆಸ್ಕ್ ಸೇವೆ ಆರಂಭಿಸಲಾಗಿದೆ. ಜೊತೆಗೆ, ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದೆ.

ಕಳೆದ ಕೆಲವು ತಿಂಗಳಿನಿಂದ 2.70 ಲಕ್ಷ ಪ್ರಯಾಣಿಕರು ವಿಸ್ತಾರಾ ವಿಮಾನಗಳ ಸೇವೆ ಪಡೆದಿದ್ದಾರೆ. 4.5 ದಶಲಕ್ಷ ಲಾಯಲ್ಟಿ ಪ್ರೋಗ್ರಾಂ ಸದಸ್ಯರು, ಏರ್ ಇಂಡಿಯಾದ ಲಾಯಲ್ಟಿ ಪ್ರೋಗ್ರಾಂ ಜೊತೆಗೆ ವಿಲೀನಗೊಳ್ಳಲಿದ್ದಾರೆ.

ಸೇವಾ ವಲಯದ ಚಟುವಟಿಕೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಯು ಅಕ್ಟೋಬರ್ ತಿಂಗಳಲ್ಲಿ ಸಕಾರಾತ್ಮಕ ಬೆಳವಣಿಗೆ ದಾಖಲಿಸಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ವರದಿ ಬುಧವಾರ ತಿಳಿಸಿದೆ.

ಸೇವಾ ವಲಯದ ಚಟುವಟಿಕೆ ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾದ ಸರ್ವಿಸಸ್ ಬ್ಯುಸಿನೆಸ್ ಸೂಚ್ಯಂಕವು ಸೆಪ್ಟೆಂಬರ್‌ನಲ್ಲಿ 10 ತಿಂಗಳ ಕನಿಷ್ಠ ಮಟ್ಟವಾದ 57.7ಕ್ಕೆ ದಾಖಲಾಗಿತ್ತು. ಅಕ್ಟೋಬರ್‌ನಲ್ಲಿ 58.5ಕ್ಕೆ ಏರಿಕೆಯಾಗಿದೆ. ಉತ್ಪಾದನೆ ಮತ್ತು ಹೊಸ ವಹಿವಾಟಿನಲ್ಲಿನ ಹೆಚ್ಚಳದಿಂದ ಸೂಚ್ಯಂಕ ಏರಿಕೆಯಾಗಿದೆ. ಜೊತೆಗೆ, ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಿದೆ ಎಂದು ತಿಳಿಸಿದೆ.

2023ರ ಅಕ್ಟೋಬರ್‌ನಲ್ಲಿ ಸೂಚ್ಯಂಕವು 58.4 ದಾಖಲಾಗಿತ್ತು.

ಪ್ರತಿ ಕ್ವಿಂಟಲ್‌ಗೆ ₹2,400 ದರ ನಿಗದಿ • 12 ಖರೀದಿ ಕೇಂದ್ರ ಸ್ಥಾಪನೆ

ಕೆಎಂಎಫ್:ಮೆಕ್ಕೆಜೋಳ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯು (ಕೆಎಂಎಫ್) ರೈತರಿಂದ ನೇರವಾಗಿ ಮೆಕ್ಕೆಜೋಳ ಖರೀದಿಗೆ ಮುಂದಾಗಿದೆ.

ಪ್ರತಿ ಕ್ವಿಂಟಲ್‌ಗೆ ₹2,400 ದರದಲ್ಲಿ (ಸರ್ಕಾರ ನಿಗದಿಪಡಿಸಿರುವ ಪ್ರತಿ ಕ್ವಿಂಟಲ್‌ಗೆ ಕನಿಷ್ಠ ಬೆಂಬಲ ಬೆಲೆ ₹2,225, ಎರಡು ಗೋಣಿ ಚೀಲದ ಮೊತ್ತ ಮತ್ತು ಸಾಗಣೆ ವೆಚ್ಚ ₹175) ಖರೀದಿಸಲಿದೆ.

ಈ ಸಂಬಂಧ ನೋಡಲ್ ಅಧಿಕಾರಿಗಳು, ಸಂಚಾಲಕರು ಹಾಗೂ ಸಿಬ್ಬಂದಿಯನ್ನು ನೇಮಿಸಲಾಗಿದೆ. ನೋಡಲ್ ಅಧಿಕಾರಿಗಳು ಎಪಿಎಂಸಿ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿ ಇರಬೇಕು ಎಂದು ಕೆಎಂಎಫ್ ನಿರ್ದೇಶನ ನೀಡಿದೆ.

ಮಹಾಮಂಡಳಿಯ ವ್ಯಾಪ್ತಿಗೆ ಬರುವ ಐದು ಪಶು ಆಹಾರ ಘಟಕಗಳ ಸಾಮರ್ಥ್ಯ ಮತ್ತು ಅವಶ್ಯಕತೆಗೆ ಅನುಗುಣವಾಗಿ ರೈತರಿಂದ ಮೆಕ್ಕೆಜೋಳ ಖರೀದಿಸಲಾಗುವುದು. ಒಟ್ಟು 12 ಖರೀದಿ ಕೇಂದ್ರ ತೆರೆಯಲಾಗುತ್ತಿದ್ದು, ನವೆಂಬರ್ 14ರೊಳಗೆ ಖರೀದಿ ಪ್ರಕ್ರಿಯೆ ಪ್ರಾರಂಭಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದೆ.

ರೈತರು ಕೇಂದ್ರಗಳಿಗೆ ಎಫ್‌ಎಕ್ಯೂ ಗುಣಮಟ್ಟದ ಮೆಕ್ಕೆಜೋಳ ಪೂರೈಸಬೇಕು. ಮೆಕ್ಕೆಜೋಳ ಖರೀದಿಸಿದ ದಿನದಿಂದ ಗರಿಷ್ಠ 20 ದಿನದೊಳಗೆ ಸರ್ಕಾರದ ಡಿಬಿಟಿ ಪೋರ್ಟಲ್ ಮೂಲಕ ರೈತರ ಖಾತೆಗಳಿಗೆ ಹಣ ಜಮೆ ಮಾಡಲಾಗುತ್ತದೆ ಎಂದು ಹೇಳಿದೆ.

ರೈತರಿಗೆ ಫ್ರೂಟ್ಸ್ ಸಂಖ್ಯೆಯೊಂದಿಗೆ ಕ್ಷೀರಸಿರಿ ತಂತ್ರಾಂಶದಲ್ಲಿ ಮೆಕ್ಕೆಜೋಳ ಪೂರೈಕೆ ಮಾಡುವುದಕ್ಕೆ ಅನುಗುಣವಾಗಿ ಹೆಸರನ್ನು ನೋಂದಣಿ ಮಾಡಿಕೊಳ್ಳಬೇಕು. ಯಾವ ದಿನದಂದು ಮೆಕ್ಕೆಜೋಳ ತರಬೇಕು ಎಂಬ ಬಗ್ಗೆ ಕೇಂದ್ರದ ಅಧಿಕಾರಿಗಳು ರೈತರಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದೆ.

ಖರೀದಿ ಕೇಂದ್ರದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆ ಬಗೆಹರಿಸಲು ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದೆ.



ಎಲ್ಲೆಲ್ಲಿ ಖರೀದಿ?

ಎಚ್.ಡಿ. ಕೋಟೆ, ದಾವಣಗೆರೆ, ಹಾವೇರಿ, ಚಿತ್ರದುರ್ಗ, ಹಗರಿಬೊಮ್ಮನಹಳ್ಳಿ, ಪಿರಿಯಾಪಟ್ಟಣ, ಗೌರಿಬಿದನೂರು, ಶಿಗ್ಗಾವಿ, ಹೊನ್ನಾಳಿ, ಗದಗ, ಹಿರೇಕೆರೂರು ಮತ್ತು ರಾಣೆಬೆನ್ನೂರು

ಹೆಚ್ಚುವರಿ ಹೆಸರುಕಾಳು ಖರೀದಿಗೆ ಒಪ್ಪಿಗೆ

ನವದೆಹಲಿ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕರ್ನಾಟಕದಲ್ಲಿ ಹೆಚ್ಚುವರಿಯಾಗಿ 16,105 ಟನ್ ಹೆಸರುಕಾಳು ಖರೀದಿಗೆ ಕೇಂದ್ರ ಕೃಷಿ ಸಚಿವಾಲಯ ಒಪ್ಪಿಗೆ ನೀಡಿದೆ.

'ರಾಜ್ಯದಲ್ಲಿ ಹೆಸರು ಬೆಳೆಗಾರರು ಸಂಕಷ್ಟದಲ್ಲಿದ್ದು, ಬೆಂಬಲ ಬೆಲೆಯಲ್ಲಿ ಖರೀದಿ ಹೆಚ್ಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಮಾಡಿದ್ದೆ. ಸಚಿವರು ಇದಕ್ಕೆ ಸ್ಪಂದಿಸಿದ್ದಾರೆ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಈ ಮೊದಲು 22,215 ಟನ್ ಹೆಸರುಕಾಳು ಖರೀದಿಗೆ ಕೇಂದ್ರ ಅನುಮತಿ ನೀಡಿತ್ತು. ಇದನ್ನು 38,320 ಟನ್‌ಗೆ ಹೆಚ್ಚಳ ಮಾಡಲಾಗಿದೆ.

ತ್ವರಿತ ಖರೀದಿಗೆ ಸೂಚನೆ: ರಾಜ್ಯ ಸರ್ಕಾರ ಮತ್ತು ಕೇಂದ್ರದ ನೋಡಲ್ ಏಜೆನ್ಸಿಗಳು ಕೂಡಲೇ ರಾಜ್ಯದಾದ್ಯಂತ ಹೆಸರು ಖರೀದಿ ಕೇಂದ್ರಗಳನ್ನು ಸ್ಥಾಪಿಸಬೇಕು. ತ್ವರಿತವಾಗಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕು ಎಂದು ಸಚಿವ ಜೋಶಿ ಒತ್ತಾಯಿಸಿದ್ದಾರೆ.

ಎಫ್‌ಸಿಐಗೆ ₹10,700 ಕೋಟಿ ನೆರವು

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಕಾರ್ಯಾಚರಣೆಗೆ ನೆರವು ಕಲ್ಪಿಸುವ ನಿಟ್ಟಿನಲ್ಲಿ ₹10,700 ಕೋಟಿ ನೀಡಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಬುಧವಾರ ಒಪ್ಪಿಗೆ ನೀಡಿದೆ.

ಆಹಾರ ಧಾನ್ಯಗಳ ಖರೀದಿ ಮತ್ತು ಹಂಚಿಕೆಗೆ ನಿಗಮವು, ಕೇಂದ್ರದ ನೋಡಲ್ ಏಜೆನ್ಸಿಯಾಗಿದೆ. ದೇಶದಾದ್ಯಂತ ಕೃಷಿ ವಲಯಕ್ಕೆ ಉತ್ತೇಜನ ನೀಡುವುದು ಹಾಗೂ ರೈತರ ಶ್ರೇಯೋಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ನಿಗಮಕ್ಕೆ ಈ ನೆರವು ನೀಡಲಾಗುತ್ತಿದೆ ಎಂದು ಕೇಂದ್ರ ತಿಳಿಸಿದೆ.

1964ರಲ್ಲಿ ₹100 ಕೋಟಿ ಅಧಿಕೃತ ಬಂಡವಾಳದೊಂದಿಗೆ ಎಫ್‌ಸಿಐ ಕಾರ್ಯಾಚರಣೆ ಆರಂಭಿಸಿತು. ಇದರ ಆರಂಭಿಕ ಷೇರಿನ ಮೊತ್ತ ₹4 ಕೋಟಿ ಆಗಿತ್ತು. ಕಳೆದ ವರ್ಷದ ಫೆಬ್ರುವರಿಯಲ್ಲಿ ಇದರ ಅಧಿಕೃತ ಬಂಡವಾಳ ಮೊತ್ತವನ್ನು ಸರ್ಕಾರವು ₹11 ಸಾವಿರ ಕೋಟಿಯಿಂದ ₹21 ಸಾವಿರ ಕೋಟಿಗೆ ಹೆಚ್ಚಿಸಿದೆ.

ಸುದ್ದಿ 2 ನಿಮಿಷ

ರೂಪಾಯಿ ಮೌಲ್ಯ ಕುಸಿತ

ಮುಂಬೈ/ ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ಬುಧವಾರ ರೂಪಾಯಿ ಮೌಲ್ಯವು 22 ಪೈಸೆ ಕುಸಿದಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹84.31 ಆಗಿದೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದ್ದಾರೆ. ಇದರಿಂದ ಡಾಲರ್ ಸೂಚ್ಯಂಕವು ಏರಿಕೆ ಪಥದಲ್ಲಿ ಸಾಗಿದ್ದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ರಫ್ತುದಾರರಿಗೆ ಸಂಕಷ್ಟ: ಟ್ರಂಪ್ ಅವರ 'ಅಮೆರಿಕವೇ ಮೊದಲು' ಎಂಬ ಕಾರ್ಯಸೂಚಿ ಜಾರಿಗೊಂಡರೆ ಭಾರತದ ಆಟೊಮೊಬೈಲ್, ಜವಳಿ ಮತ್ತು ಔಷಧ ರಫ್ತುದಾರರಿಗೆ ಹೆಚ್ಚಿನ ಪೆಟ್ಟು ಬೀಳಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಈ ವಲಯದ ರಫ್ತಿನ ಮೇಲೆ ಹೆಚ್ಚಿನ ಕಸ್ಟಮ್ಸ್ ಸುಂಕ ವಿಧಿಸಲಾಗುತ್ತದೆ. ಇದರಿಂದ ತೊಂದರೆಗೆ ಸಿಲುಕಲಿದ್ದಾರೆ ಎಂದು ಹೇಳಿದ್ದಾರೆ.

ಅಲ್ಲದೆ, ವಲಸೆಯೇತರ ವೀಸಾ ಆಗಿರುವ 'ಎಚ್-1ಬಿ' ನೀಡಿಕೆಗೆ ಸಂಬಂಧಿಸಿದಂತೆ ನಿಯಮಗಳನ್ನು ಬಿಗಿಗೊಳಿಸುವ ಸಾಧ್ಯತೆಯಿದೆ. ಇದು ಭಾರತದ ಮಾಹಿತಿ ತಂತ್ರಜ್ಞಾನ ಕಂಪನಿಗಳ ವೆಚ್ಚ ಮತ್ತು ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕಕ್ಕೆ ಭಾರತದಿಂದ ಶೇ 80ರಷ್ಟು ಐ.ಟಿ ರಫ್ತು ಮಾಡಲಾಗುತ್ತದೆ. ವೀಸಾ ನೀತಿ ಪರಿಷ್ಕರಿಸಿದರೆ ಈ ವಲಯವು ಸಂಕಷ್ಟಕ್ಕೆ ಸಿಲುಕಲಿದೆ ಎಂದು ಹೇಳಿದ್ದಾರೆ.



ಷೇರು ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ಎರಡು ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹10.47 ಲಕ್ಷ ಕೋಟಿ ಹೆಚ್ಚಳವಾಗಿದೆ.

ಟ್ರಂಪ್ ಗೆಲುವು ಸಾಧಿಸಿದ್ದರಿಂದ ಐ.ಟಿ ಮತ್ತು ಫಾರ್ಮಾ ಷೇರುಗಳ ಮಾರಾಟ ಹೆಚ್ಚಾಯಿತು. ಇದರಿಂದ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 901 ಅಂಶ ಏರಿಕೆ ಕಂಡು, 80,378 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 270 ಅಂಶ ಹೆಚ್ಚಳಗೊಂಡು, 24,484 ಅಂಶಗಳಲ್ಲಿ ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಿಸಿಎಸ್ ಮತ್ತು ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ತಲಾ ಶೇ 4ರಷ್ಟು ಏರಿಕೆಯಾಗಿದೆ. ಎಚ್‌ಸಿಎಲ್ ಟೆಕ್ನಾಲಜೀಸ್, ಟೆಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಎಲ್ ಆ್ಯಂಡ್ ಟಿ, ಮಾರುತಿ, ರಿಲಯನ್ಸ್ ಇಂಡಸ್ಟ್ರಿಸ್ ಷೇರುಗಳ ಮೌಲ್ಯದಲ್ಲಿ ಏರಿಕೆಯಾಗಿದೆ.

ಟೈಟನ್, ಇಂಡಸ್ ಇಂಡ್ ಬ್ಯಾಂಕ್, ಹಿಂದುಸ್ತಾನ್ ಯೂನಿಲಿವರ್, ಎಕ್ಸಿಸ್ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ 2ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 74.02 ಡಾಲರ್ ಆಗಿದೆ.

ವಿನಿಮಯ ದರ

$ ಡಾಲರ್	84.31
£ ಪೌಂಡ್	108.70
€ ಯುರೊ	90.62
¥ ಯೆನ್ (100ಕ್ಕೆ)	55

ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆರವು

'ಪಿಎಂ-ವಿದ್ಯಾಲಕ್ಷ್ಮಿ' ಯೋಜನೆ ಕೇಂದ್ರ ಸಚಿವ ಸಂಪುಟ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಹಣಕಾಸಿನ ನೆರವು ನೀಡುವ 'ಪ್ರಧಾನಮಂತ್ರಿ-ವಿದ್ಯಾಲಕ್ಷ್ಮಿ ಯೋಜನೆ'ಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

'ಈ ಯೋಜನೆಯ ಪ್ರಕಾರ, ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಪೂರ್ಣ ಪ್ರಮಾಣದ ಬೋಧನಾ ಶುಲ್ಕಗಳು ಹಾಗೂ ಇತರೆ ಶುಲ್ಕಗಳನ್ನು ಭರಿಸಲು ಖಾತರಿಮುಕ್ತ ಹಾಗೂ ಜಾಮೀನುಮುಕ್ತ ಸಾಲ ಪಡೆಯಲು ಅರ್ಹರು. ಈ ಯೋಜನೆಯು ರಾಷ್ಟ್ರೀಯ ಶಿಕ್ಷಣ ನೀತಿ-2020ರ ಮತ್ತೊಂದು ಪ್ರಮುಖ ಉಪಕ್ರಮ' ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

'ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳ ರ್‍ಯಾಂಕಿಂಗ್‌ನ (ಎನ್‌ಐಆರ್‌ಎಫ್) ಪಟ್ಟಿಯಲ್ಲಿರುವ ಅಗ್ರ 860 ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲ ಒದಗಿಸುವ ಯೋಜನೆಗೆ ₹3,600 ಕೋಟಿ ನೀಡಲು ಅನುಮೋದಿಸಲಾಗಿದೆ. ಈ ಯೋಜನೆಯಿಂದ ಪ್ರತಿವರ್ಷ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಈ ಯೋಜನೆಯು ಸರಳ, ಪಾರದರ್ಶಕ ಮತ್ತು ವಿದ್ಯಾರ್ಥಿಸ್ನೇಹಿ ವ್ಯವಸ್ಥೆಯ ಮೂಲಕ ಕಾರ್ಯನಿರ್ವಹಿಸಲಿದೆ' ಎಂದು ಅವರು ಮಾಹಿತಿ ನೀಡಿದರು.

ಬ್ಯಾಂಕ್‌ಗಳಿಗೆ ಸಹಾಯ ಮಾಡಲು ₹7.5 ಲಕ್ಷದವರೆಗಿನ ಸಾಲದ ಮೊತ್ತಕ್ಕೆ ಕೇಂದ್ರ ಸರ್ಕಾರವು ಶೇ 75ರಷ್ಟು ಸಾಲ ಖಾತರಿ ನೀಡಲಿದೆ. ಇದಲ್ಲದೆ, ಕುಟುಂಬದ ವಾರ್ಷಿಕ ಆದಾಯ ₹8 ಲಕ್ಷದ ವರೆಗೆ ಹೊಂದಿರುವ ವಿದ್ಯಾರ್ಥಿಗಳಿಗೆ ಈ ಯೋಜನೆಯು ₹10 ಲಕ್ಷದ ವರೆಗಿನ ಸಾಲಕ್ಕೆ ಶೇ 3 ಬಡ್ಡಿ ರಿಯಾಯಿತಿ ಒದಗಿಸಲಿದೆ ಎಂದರು.

'ಪ್ರತಿವರ್ಷ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಬಡ್ಡಿ ರಿಯಾಯಿತಿ ನೀಡಲಾಗುವುದು. ಸರ್ಕಾರಿ ಸಂಸ್ಥೆಗಳನ್ನು, ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು' ಎಂದರು.

ಈ ಯೋಜನೆಯಿಂದ ಬಡ ಮತ್ತು ಮಧ್ಯಮ ವರ್ಗದ ಲಕ್ಷಾಂತರ ವಿದ್ಯಾರ್ಥಿಗಳ ಸಬಲೀಕರಣವಾಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.



ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಅವರನ್ನು ವಜಾಗೊಳಿಸಿದ್ದನ್ನು ಖಂಡಿಸಿ ಇಸ್ರೇಲಿಗರು ಪ್ರತಿಭಟಿಸಿದರು ಎಪಿ/ಪಿಟಿಐ ಚಿತ್ರ

ರಕ್ಷಣಾ ಸಚಿವರ ವಜಾ ಇಸ್ರೇಲ್‌ನಲ್ಲಿ ಪ್ರತಿಭಟನೆ

ಜೆರುಸಲೇಂ (ಎಪಿ): ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಅವರನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಗಳವಾರ ವಜಾಗೊಳಿಸಿದ ಬೆನ್ನಲ್ಲೇ ದೇಶದ ವಿವಿಧೆಡೆ ಪ್ರತಿಭಟನೆಗಳು ನಡೆದಿವೆ.

ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಯುದ್ಧ ನಡೆಯುತ್ತಿದ್ದು ಈ ಸಂದರ್ಭದಲ್ಲಿ ರಕ್ಷಣಾ ಸಚಿವರನ್ನು ವಜಾಗೊಳಿಸಿರುವುದು ಅಚ್ಚರಿಯನ್ನು ಉಂಟು ಮಾಡಿದೆ. ನೆತನ್ಯಾಹು ಹಾಗೂ ಗ್ಯಾಲಂಟ್ ನಡುವೆ ಗಾಜಾದಲ್ಲಿ ಯುದ್ಧ ಮುಂದುವರಿಸುವ ಬಗ್ಗೆ ಪದೇ ಪದೇ ಭಿನ್ನಾಭಿಪ್ರಾಯ ವ್ಯಕ್ತವಾಗಿತ್ತು. ಅಮೆರಿಕದ ಅಧ್ಯಕ್ಷೀಯ ಚುನಾವಣೆ ಮೇಲೆ ವಿಶ್ವದ ಗಮನ ಕೇಂದ್ರೀಕೃತವಾಗಿದ್ದ ದಿನವೇ ನೆತನ್ಯಾಹು ಈ ಮಹತ್ವದ ಕ್ರಮ ಕೈಗೊಂಡಿದ್ದಾರೆ.

'ನಮ್ಮಿಬ್ಬರ ನಡುವೆ 'ನಂಬಿಕೆ' ಕಡಿಮೆಯಾಗಿದ್ದು ಹಾಗೂ ಅಂತರ ಹೆಚ್ಚಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ನೆತನ್ಯಾಹು ತಿಳಿಸಿದ್ದಾರೆ.

'ಯುದ್ಧದ ಸಂದರ್ಭದಲ್ಲಿ ಪ್ರಧಾನಿ ಮತ್ತು ರಕ್ಷಣಾ ಸಚಿವರ ನಡುವೆ ಅಚಲ ನಂಬಿಕೆಯಿರಬೇಕು. ಆರಂಭದಲ್ಲಿ ಎಲ್ಲವೂ ಸರಿಯಿತ್ತು. ಆದರೆ ಈಚೆಗೆ ದಿನದಿಂದ ದಿನಕ್ಕೆ ವಿಶ್ವಾಸ ಕಡಿಮೆಯಾಗುತ್ತಿತ್ತು' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

06-11-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1560)
ಒಂದು ವಾರದ ಡೆಲಿವರಿ	1545 (1555)
ಪಾಮ್ ವಾರದ ಡೆಲಿವರಿ	1343 (1353)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹77,800 (78,200)

ಬೆಳ್ಳಿ ಕೆ.ಜಿ ₹92,900 (94,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ತಾರಸಿ ಕೋಣೆಯಲ್ಲಿ ಕೃತಕ ವಾತಾವರಣ ಸೃಷ್ಟಿ

ಕೇಸರಿ ಬೆಳೆದ ಟೆಕಿಗಳು

• ನವೀನ್ ಕುಮಾರ್ ಜಿ.

ಉಡುಪಿ: ಇಲ್ಲಿನ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಬ್ಬರು ಕಾಶ್ಮೀರದ ತಂಪಿನ ವಾತಾವರಣದಲ್ಲಿ ಬೆಳೆಯುವ ಕೇಸರಿಯನ್ನು ಕರಾವಳಿ ಪ್ರದೇಶದಲ್ಲಿ ಬೆಳೆದು ಯಶಸ್ಸು ಕಂಡಿದ್ದಾರೆ.

ಅನಂತಜಿತ್ ತಂತ್ರಿ ಮತ್ತು ಅವರ ಗೆಳೆಯ ಅಕ್ಷತ್ ಬಿ.ಕೆ. ಈ ಕೃಷಿ ಪ್ರಯೋಗದಲ್ಲಿ ಯಶ ಕಂಡವರು. ಉಡುಪಿ ನಗರ ವ್ಯಾಪ್ತಿಯ ಬೈಲೂರಿನ ನಂದಗೋಕುಲ ಎಂಬಲ್ಲಿರುವ ಅನಂತಜಿತ್ ಅವರ ಮನೆಯ ತಾರಸಿ ಕೋಣೆಯಲ್ಲಿ ಈ ಕೇಸರಿ ಕೃಷಿ ಚಟುವಟಿಕೆ ಮಾಡಿದ್ದಾರೆ. ಕೋಣೆಯೊಳಗೆ ಕೃತಕ ವಾತಾವರಣ ಸೃಷ್ಟಿಸಿ ಕೇಸರಿ ಬೆಳೆದಿದ್ದಾರೆ.

'ಕೋಣೆಯ ಉಷ್ಣಾಂಶ ಕಡಿಮೆ ಮಾಡಲು ಚಿಲ್ಲರ್ ಯಂತ್ರ ಬಳಸಿದ್ದೇವೆ. ಜೊತೆಗೆ, ಹವಾನಿಯಂತ್ರಿತ ವ್ಯವಸ್ಥೆಯೂ ಇದೆ. ಬೆಳ್ಳುಳ್ಳಿಯನ್ನು ಹೋಲುವ ಕೇಸರಿ ಹೂವಿನ ಗೆಡ್ಡೆಯನ್ನು ಬಿತ್ತನೆ ಮಾಡಿ ರ್‍ಯಾಕ್‌ಗಳಲ್ಲಿ ಬೆಳೆಯಲಾಗುತ್ತದೆ. ಇದಕ್ಕೆ ಮಣ್ಣಿನ ಬದಲು ತೆಂಗಿನ ಸಿಪ್ಪೆಯ ನಾರಿನ ಹುಡಿಯನ್ನು ಉಪಯೋಗಿಸಿದ್ದೇವೆ' ಎನ್ನುತ್ತಾರೆ ಅನಂತಜಿತ್ ತಂತ್ರಿ.

'ಆರಂಭದಲ್ಲಿ ಮಣ್ಣಿನಲ್ಲಿ ಕೇಸರಿ ಬೆಳೆಯಲು ಪ್ರಯತ್ನಿಸಿದ್ದರೂ ಸಫಲವಾಗಲಿಲ್ಲ. ಈಗ ಏರೋಪೋನಿಕ್ ವಿಧಾನದ ಮೂಲಕ ಯಶಸ್ವಿಯಾಗಿದ್ದೇವೆ. ಈ ಬೆಳೆಗೆ ನೀರನ್ನು ಬಳಕೆ ಮಾಡುವುದಿಲ್ಲ. ಬದಲಾಗಿ ನೀರನ್ನು ಮಂಜಾಗಿ ಪರಿವರ್ತಿಸುವ ಯಂತ್ರವನ್ನು ಬಳಸುತ್ತಿದ್ದೇವೆ' ಎಂದು ವಿವರಿಸಿದರು.

'ಮೂರು ವರ್ಷದ ಹಿಂದೆ ಕೇಸರಿ ಬೆಳೆಯುವ ಪ್ರಯತ್ನ ಮಾಡಿದ್ದೆ. ಆದರೆ, ಇಲ್ಲಿನ ಮಣ್ಣು, ಹವಾಗುಣದ ಕಾರಣ ಆ ಯತ್ನ ಸಫಲವಾಗಲಿಲ್ಲ. ಬಳಿಕ ಬೆಳಗಾವಿಯ ವ್ಯಕ್ತಿಯೊಬ್ಬರ ಬಳಿ ನಾನು ಮತ್ತು ಅಕ್ಷತ್ ತರಬೇತಿ ಪಡೆದುಕೊಂಡೆವು. ಕೋಣೆಯೊಳಗಿನ ಉಷ್ಣಾಂಶ ನಿಯಂತ್ರಿಸುವ ಬಗ್ಗೆ ಅವರು ತರಬೇತಿ ನೀಡಿದರು. ಬಳಿಕ ಅದೇ ಮಾದರಿಯಲ್ಲಿ ಕೇಸರಿ ಬೆಳೆಸಿದೆವು. ಕಳೆದ ವರ್ಷ 50 ಕೆ.ಜಿ.ಯಷ್ಟು ಕೇಸರಿ ಗೆಡ್ಡೆ ಬಿತ್ತನೆ ಮಾಡಿದ್ದೆವು. ಈ ವರ್ಷ 70 ಕೆ.ಜಿ. ಬಿತ್ತನೆ ಮಾಡಿದ್ದೇವೆ' ಎಂದು ಮಾಹಿತಿ ಹಂಚಿಕೊಂಡರು.

ಒಂದು ಕೆ.ಜಿ. ಕೇಸರಿ ಬೆಲೆ ₹4 ಲಕ್ಷ ಇದೆ. ಮಾರುಕಟ್ಟೆಯಲ್ಲಿ ಬೇಡಿಕೆಯೂ ಹೆಚ್ಚಿದೆ. ಕೇಸರಿಯನ್ನು ತೆಗೆದ ಬಳಿಕ ಹೂವನ್ನೂ ಒಣಗಿಸಿಟ್ಟುಕೊಳ್ಳಬಹುದು. ಅದನ್ನು ಪಾನ್ ಬೀಡಾಗಳಿಗೆ ಹಾಕಲು ಬಳಸುತ್ತಾರೆ. ಹೂವಿನ ಮಕರಂದ ಕೂಡ ಸೌಂದರ್ಯವರ್ಧಕ ಉತ್ಪನ್ನಗಳಿಗೆ ಬಳಕೆಯಾಗುತ್ತದೆ ಎಂದು ವಿವರಿಸಿದರು.

'ಕೇಸರಿಯು ವರ್ಷದಲ್ಲಿ ಮೂರು ತಿಂಗಳು ಮಾತ್ರ ಹೂವು ಬಿಡುತ್ತದೆ. ಒಂದು ಗ್ರಾಂಗೆ ₹400 ರಂತೆ ಮಾರಾಟ ಮಾಡಿದ್ದೇವೆ' ಎಂದರು.



ಕೇಸರಿ ಬೆಳೆಯೊಂದಿಗೆ ಅಕ್ಷತ್ ಬಿ.ಕೆ. ಮತ್ತು ಅನಂತಜಿತ್ ತಂತ್ರಿ

'ರಾಸಾಯನಿಕ ಬಳಸುವುದಿಲ್ಲ'

ಜುಲೈನಲ್ಲಿ ಕಾಶ್ಮೀರದ ರೈತರಿಂದ ಗೆಡ್ಡೆ ಖರೀದಿಸಿ ತಂದು ಬಿತ್ತನೆ ಮಾಡಿದ್ದಾರೆ. ಬಿತ್ತನೆ ಮಾಡಿದ ಆರಂಭದ ಒಂದು ತಿಂಗಳು ಹವಾನಿಯಂತ್ರಿತ ಕತ್ತಲು ಕೋಣೆಯಲ್ಲಿ ಇರಿಸಬೇಕಾಗುತ್ತದೆ. ಗೆಡ್ಡೆ ಚಿಗುರಿದ ಬಳಿಕ ಕೃತಕ ಬೆಳಕಿನ ವ್ಯವಸ್ಥೆ ಮಾಡಲಾಗಿದೆ.

> **ಜುಲೈನಲ್ಲಿ ಕೇಸರಿಯ ಗೆಡ್ಡೆ ಹಾಕಿದ್ದೆವು. ಈಗ ಹೂವಾಗಲು ಶುರುವಾಗಿದೆ. ಈ ಬಾರಿಯ ಫಸಲು ನೋಡಿಕೊಂಡು, ಬೆಳೆಯನ್ನು ವಿಸ್ತರಿಸುವ ಬಗ್ಗೆ ಚಿಂತನೆ ನಡೆಸಲಿದ್ದೇವೆ**
> **ಅನಂತಜಿತ್ ತಂತ್ರಿ,** ಸಾಫ್ಟ್‌ವೇರ್ ಎಂಜಿನಿಯರ್

'ಯಾವುದೇ, ರಾಸಾಯನಿಕ ಬಳಸುವುದಿಲ್ಲ. ಫಂಗಸ್ ತಡೆಯಲು ಬೇವಿನ ಎಣ್ಣೆ ಉಪಯೋಗಿಸುತ್ತೇವೆ. ಜನರೇಟರ್, ಹವಾನಿಯಂತ್ರಿತ ವ್ಯವಸ್ಥೆ, ಚಿಲ್ಲರ್ ಯಂತ್ರಗಳ ಖರೀದಿ ಸೇರಿ ಕಳೆದ ವರ್ಷ ₹5 ಲಕ್ಷ ವೆಚ್ಚ ಮಾಡಿದ್ದೆವು. ಆ ವರ್ಷ 37 ಗ್ರಾಂ ಕೇಸರಿ ಸಿಕ್ಕಿತ್ತು. ಖರ್ಚು ಕಳೆದು ಕೇಸರಿ ಮಾರಾಟದಿಂದ ₹15 ಸಾವಿರ ಆದಾಯ ಲಭಿಸಿತ್ತು' ಎನ್ನುತ್ತಾರೆ ಅನಂತಜಿತ್ ತಂತ್ರಿ.

ಇಸ್ರೇಲ್ ದಾಳಿ 30 ಸಾವು

ಬೈರೂತ್/ಜೆರುಸಲೇಂ(ಎಪಿ): ಬಾರ್ಜಾ ಪಟ್ಟಣದ ಅಪಾರ್ಟ್‌ಮೆಂಟ್ ಮೇಲೆ ಮಂಗಳವಾರ ರಾತ್ರಿ ಇಸ್ರೇಲ್ ದಾಳಿ ನಡೆಸಿದ್ದು, ಕಟ್ಟಡದ ಅವಶೇಷಗಳ ಅಡಿ ಸಿಲುಕಿದ್ದ 30 ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಲೆಬನಾನ್‌ನ ನಾಗರಿಕ ರಕ್ಷಣಾ ಸೇವೆ ಬುಧವಾರ ತಿಳಿಸಿದೆ.

ಅಪಾರ್ಟ್‌ಮೆಂಟ್‌ನ ಅವಶೇಷಗಳಡಿ ಶೋಧ ಕಾರ್ಯ ಮುಂದುವರಿದಿದೆ.

ಯಾವುದೇ ಪ್ರದೇಶವನ್ನು ಗುರಿಯಾಗಿಸಿಕೊಳ್ಳದೆ, ಮುನ್ನೆಚ್ಚರಿಕೆಯನ್ನು ನೀಡದೆ ಇಸ್ರೇಲ್ ಸೇನೆಯು ವಾಯುದಾಳಿ ನಡೆಸಿದೆ.

'ಅವಶೇಷಗಳಡಿ ಇನ್ನೂ ಎಷ್ಟು ಜನರು ಬದುಕುಳಿದಿದ್ದಾರೆ? ಅಥವಾ ಮೃತದೇಹಗಳಿವೆ? ಎಂಬುದು ಸ್ಪಷ್ಟವಾಗಿಲ್ಲ' ಎಂದು ನಾಗರಿಕ ರಕ್ಷಣಾ ಅಧಿಕಾರಿ ಮುಸ್ತಫಾ ದಾನಾಜ್ ತಿಳಿಸಿದ್ದಾರೆ.



ಹಳೆಯ ಪ್ರಕರಣಗಳಿಗೆ ಕೊಕ್?

ವಾಷಿಂಗ್ಟನ್ (ರಾಯಿಟರ್ಸ್): ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ನೂತನ ಅಧ್ಯಕ್ಷರಾಗಿ ಎರಡನೇ ಬಾರಿಗೆ ಚುನಾಯಿತರಾಗಿದ್ದಾರೆ. ಟ್ರಂಪ್ ಶ್ವೇತಭವನ ಪ್ರವೇಶಿಸುವುದು ಸನ್ನಿಹಿತವಾಗುತ್ತಿರುವಂತೆಯೇ, ಅವರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ ಕನಿಷ್ಠ ಪಕ್ಷ ನಾಲ್ಕು ವರ್ಷ ಸ್ಥಗಿತಗೊಳ್ಳುವುದು ಎನ್ನಲಾಗುತ್ತಿದೆ.

ಟ್ರಂಪ್ ಅವರು ಕ್ರಿಮಿನಲ್ ಆರೋಪಗಳಿಗೆ ಗುರಿಯಾಗಿರುವ ಅಮೆರಿಕದ ಮೊದಲ ಮಾಜಿ ಅಧ್ಯಕ್ಷ. ಅವರು ನಾಲ್ಕು ಪ್ರಕರಣಗಳಲ್ಲಿ ವಿಚಾರಣೆ ಎದುರಿಸಿದ್ದಾರೆ.

2016ರಲ್ಲಿ ನೀಲಿ ಚಿತ್ರ ತಾರೆ ಸ್ಟಾರ್ಮಿ ಅವರಿಗೆ ತಮ್ಮ ಕಂಪನಿಯಿಂದ ಹಣ ವರ್ಗಾಯಿಸಿದ್ದು, 2020ರ ಚುನಾವಣೆಯ ಫಲಿತಾಂಶವನ್ನು ಬುಡಮೇಲು ಮಾಡಲು ಯತ್ನಿಸಿದ ಆರೋಪ ಸೇರಿ ದಂತೆ ಹಲವು ಪ್ರಕರಣಗಳು ಡೊನಾಲ್ಡ್ ಟ್ರಂಪ್ ವಿರುದ್ಧ ದಾಖಲಾಗಿವೆ.

ಈ ಎಲ್ಲ ಪ್ರಕರಣಗಳಲ್ಲಿ ತಾವು ನಿರಪರಾಧಿ ಎಂದು ಪ್ರತಿಪಾದಿಸಿರುವ ಟ್ರಂಪ್, ತಮ್ಮ ವಿರುದ್ಧದ ಆರೋಪಗಳು ರಾಜಕೀಯ ಪ್ರೇರಿತ ಎಂದು ಹೇಳುತ್ತಾ ಬಂದಿದ್ದಾರೆ.



2020ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವನ್ನು ತಿರುಚಲು ಯತ್ನಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಟ್ರಂಪ್ ಅವರು ಕಳೆದ ವರ್ಷ ಆಗಸ್ಟ್‌ನಲ್ಲಿ ಜಾರ್ಜಿಯಾದ ಫುಲ್ಟನ್ ಕೌಂಟಿ ಜೈಲಿಗೆ ಶರಣಾಗಿದ್ದರು. ಆಗ ಅವರನ್ನು 22 ನಿಮಿಷಗಳ ಕಾಲ ಜೈಲಿನಲ್ಲಿ ಇಡಲಾಗಿತ್ತು. ಬಳಿಕ ಬಾಂಡ್ ಮೇಲೆ ಬಿಡುಗಡೆ ಮಾಡಲಾಗಿತ್ತು.

ಹಷ್ ಮನಿ ಪ್ರಕರಣ: 2016ರ ಅಧ್ಯಕ್ಷೀಯ ಚುನಾವಣೆ ವೇಳೆ ತಮ್ಮ ವಿರುದ್ಧ ಹೇಳಿಕೆ ನೀಡದಂತೆ ನೀಲಿಚಿತ್ರಗಳ ನಟಿಗೆ ಹಣ ನೀಡಿದ್ದ ಆರೋಪವನ್ನು ಟ್ರಂಪ್ ಎದುರಿಸುತ್ತಿದ್ದಾರೆ.

ನಟಿ ಸ್ಟಾರ್ಮಿ ಡೇನಿಯಲ್ಸ್ ಅವರು 'ನಾನು ಟ್ರಂಪ್ ಜೊತೆ ಲೈಂಗಿಕ ಸಂಬಂಧ ಹೊಂದಿದ್ದೆ' ಎಂದು ಹೇಳಿದ್ದರು. 2016ರ ಚುನಾವಣೆ ವೇಳೆ ಈ ಬಗ್ಗೆ ಹೇಳಿಕೆ ನೀಡದೇ ಮೌನವಹಿಸಲು ನಟಿಗೆ ದೊಡ್ಡ ಮೊತ್ತ ನೀಡಲಾಗಿತ್ತು ಎಂಬಕುರಿತು ದಾಖಲಾಗಿದ್ದ ಪ್ರಕರಣದಲ್ಲಿ, ಟ್ರಂಪ್ ದೋಷಿ ಎಂದು ನ್ಯಾಯಾಲಯ ಏಪ್ರಿಲ್‌ನಲ್ಲಿ ಹೇಳಿತ್ತು. ನಂತರ, ಟ್ರಂಪ್ ಅವರನ್ನು ಪೊಲೀಸರು ಬಂಧಿಸಿದ್ದರು. ಬಳಿಕ ಬಿಡುಗಡೆ ಮಾಡಲಾಗಿತ್ತು.

ಚುನಾವಣಾ ಫಲಿತಾಂಶವನ್ನು ತಿರುಚಲು ಯತ್ನಿಸಿದ್ದರು ಹಾಗೂ ಶ್ವೇತಭವನದ ರಹಸ್ಯ ದಾಖಲೆಗಳನ್ನು ಅಧಿಕಾರ ಮುಗಿದ ನಂತರ ತಮ್ಮ ಖಾಸಗಿ ನಿವಾಸಕ್ಕೆ ಕೊಂಡೊಯ್ದಿದ್ದರು ಎಂಬ ಆರೋಪಗಳಡಿ ಟ್ರಂಪ್ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳಲ್ಲಿ ವಿಶೇಷ ಸರ್ಕಾರಿ ವಕೀಲ ಜಾಕ್ ಸ್ಮಿತ್ ವಾದಿಸಿದ್ದರು.

'ನಾನು ಈ ಬಾರಿಯ ಚುನಾವಣೆಯಲ್ಲಿ ಗೆದ್ದು ಅಧಿಕಾರ ಸ್ವೀಕರಿಸಿದ ನಂತರ ಎರಡೇ ಕ್ಷಣಗಳಲ್ಲಿ ಜಾಕ್ ಸ್ಮಿತ್ ಅವರನ್ನು ಹುದ್ದೆಯಿಂದ ಕಿತ್ತೊಗೆಯುವೆ' ಎಂದು ಅಕ್ಟೋಬರ್ 24ರಂದು ನೀಡಿದ್ದ ಸಂದರ್ಶನವೊಂದರಲ್ಲಿ ಟ್ರಂಪ್ ಗುಡುಗಿದ್ದರು.

'ಅಮೆರಿಕದ ಅಧ್ಯಕ್ಷರಾದ ನಂತರ, ಸ್ಮಿತ್ ಅವರನ್ನು ಆ ಹುದ್ದೆಯಿಂದ ಕೆಳಗಿಳಿಸುವ ಅಧಿಕಾರ ಟ್ರಂಪ್ ಅವರಿಗೆ ಇದೆ. ಅಲ್ಲದೇ, ತಮ್ಮ ವಿರುದ್ಧದ ಫೆಡರಲ್ ಪ್ರಕರಣಗಳನ್ನು ಕೂಡ ರದ್ದು ಮಾಡುವ ಅಧಿಕಾರ ಹೊಂದಿದ್ದಾರೆ' ಎಂದು ಕಾನೂನು ಸಲಹೆಗಾರ ಮೈಕ್ ಡೇವಿಸ್ ಹೇಳುತ್ತಾರೆ.

ತಮ್ಮ ವಿರುದ್ಧದ ಹಷ್ ಮನಿ ಪ್ರಕರಣ ಹಾಗೂ ಚುನಾವಣಾ ಫಲಿತಾಂಶ ತಿರುಚಲು ಯತ್ನಿಸಿದ ಆರೋಪದ ಪ್ರಕರಣ ಕುರಿತು ಅವರು ಇಂತಹ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಆದರೆ, ಈ ಎರಡು ಪ್ರಕರಣಗಳಲ್ಲಿ, ಅಧ್ಯಕ್ಷರಾಗಿರುವವರೆಗೆ ಟ್ರಂಪ್ ಅವರು ಕಾನೂನು ಕ್ರಮ ಎದುರಿಸಬೇಕಾದ ಪ್ರಸಂಗ ಬರುವುದಿಲ್ಲ ಎಂದೂ ಡೇವಿಸ್ ಹೇಳಿದರು.

2ನೇ ಅವಧಿ: ಯೋಜನೆಗಳೇನು?

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರು ತಮ್ಮ ಎರಡನೆಯ ಅವಧಿಯಲ್ಲಿ ಮಹತ್ವದ ಬದಲಾವಣೆಗಳನ್ನು ತರುವ ಭರವಸೆಗಳನ್ನು ನೀಡಿದ್ದಾರೆ.

ಬದಲಾವಣೆಗಳು ಏನು ಎಂಬ ಬಗ್ಗೆ ನಿರ್ದಿಷ್ಟವಾದ ವಿವರಣೆಯನ್ನು ಅವರು ನೀಡಿಲ್ಲದಿದ್ದರೂ, ಕಳೆದ ಒಂದು ವರ್ಷದಲ್ಲಿ ಅವರು ಮಾಡಿರುವ ಘೋಷಣೆಗಳು ಹಾಗೂ ಬರೆದಿರುವ ವಿಚಾರಗಳು ಹಲವು ಕಾರ್ಯಸೂಚಿಗಳ ಬಗ್ಗೆ ಮಾಹಿತಿ ನೀಡುತ್ತವೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಅಮೆರಿಕ ವಹಿಸುವ ಪಾತ್ರದಲ್ಲಿ ಬದಲಾವಣೆ ಆಗುವ ಸಾಧ್ಯತೆಯನ್ನೂ ಅವರು ಸೂಚಿಸಿದ್ದಾರೆ. ಟ್ರಂಪ್ ಅವರು ಪ್ರಸ್ತಾವಿಸಿರುವ ಕೆಲವು ಮಹತ್ವದ ವಿಷಯಗಳು ಹೀಗಿವೆ:

ವಲಸೆ: ವಲಸೆಯ ವಿಚಾರವಾಗಿ ಟ್ರಂಪ್ ಅವರು ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಸೂಚನೆಗಳನ್ನು ನೀಡಿದ್ದಾರೆ. ಅಕ್ರಮ ವಲಸೆ ವಿರುದ್ಧ ಕಾರ್ಯಾಚರಣೆ ಹಾಗೂ ವಲಸೆಯ ಮೇಲೆ ನಿರ್ಬಂಧಗಳನ್ನು ವಿಧಿಸುವ ಇಂಗಿತವನ್ನು ಅವರು ವ್ಯಕ್ತಪಡಿಸಿದ್ದಾರೆ. ಅಮೆರಿಕದಲ್ಲಿ ಜನಿಸುವವರಿಗೆ ಅಲ್ಲಿನ ಪೌರತ್ವ ಖಾತರಿಯಾಗಿ ಸಿಗುತ್ತದೆ ಎಂಬ ನಿಯಮವನ್ನು ಬದಲಾಯಿಸುವ, ಮುಸ್ಲಿಂ ಬಾಹುಳ್ಯದ ಕೆಲವು ದೇಶಗಳಿಂದ ಬರುವವರ ಸಂಖ್ಯೆಯನ್ನು ಸೀಮಿತಗೊಳಿಸುವ ಬಗ್ಗೆಯೂ ಅವರು ಪ್ರಸ್ತಾಪಿಸಿದ್ದಾರೆ.

ಆದಾಯ ತೆರಿಗೆ: ಟ್ರಂಪ್ ಅವರು ಪ್ರತಿಪಾದಿಸುವ ತೆರಿಗೆ ನೀತಿಗಳು ಬೃಹತ್ ಉದ್ಯಮಗಳು ಹಾಗೂ ಅಮೆರಿಕದ ಶ್ರೀಮಂತರ ಪರವಾಗಿವೆ. ಅಮೆರಿಕದ ಶ್ರೀಮಂತರ ಮೇಲಿನ ಆದಾಯ ತೆರಿಗೆ ಪ್ರಮಾಣವನ್ನು ಹೆಚ್ಚಿಸಲು ಅಧ್ಯಕ್ಷ ಜೋ ಬೈಡನ್ ಅವರು ತೆಗೆದುಕೊಂಡ ತೀರ್ಮಾನವನ್ನು ಹಿಂಪಡೆಯುವ ಭರವಸೆಯನ್ನು ಟ್ರಂಪ್ ಅವರು ನೀಡಿದ್ದಾರೆ.

ಅಲ್ಲದೆ, ಸಾಮಾಜಿಕ ಭದ್ರತಾ ಆದಾಯ ಮತ್ತು ನಿಗದಿತ ಅವಧಿಗಿಂತ ಹೆಚ್ಚು ಅವಧಿಗೆ ಕೆಲಸ ಮಾಡಿದ್ದಕ್ಕೆ ಸಿಗುವ ಹೆಚ್ಚುವರಿ ಆದಾಯವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿರಿಸುವ ಪ್ರಸ್ತಾವವನ್ನೂ ಅವರು ಮಾಡಿದ್ದಾರೆ.

ವ್ಯಾಪಾರ, ತೆರಿಗೆ: ವಿದೇಶಗಳಿಂದ ಅಮೆರಿಕಕ್ಕೆ ಆಮದಾಗುವ ಉತ್ಪನ್ನಗಳ ಮೇಲೆ ಶೇ 10ರಿಂದ ಶೇ 20ರಷ್ಟು ತೆರಿಗೆ ವಿಧಿಸುವ ಪ್ರಸ್ತಾವವನ್ನು ಟ್ರಂಪ್ ಮಾಡಿದ್ದಾರೆ. ಕೆಲವು ಭಾಷಣಗಳಲ್ಲಿ ಅವರು ತೆರಿಗೆ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವ ಬಗ್ಗೆಯೂ ಮಾತನಾಡಿದ್ದಾರೆ.

ಸಾಮಾಜಿಕ ಭದ್ರತೆ, ಆರೋಗ್ಯಕ್ಕೆ ನೆರವು: ಸಾಮಾಜಿಕ ಭದ್ರತೆ ಹಾಗೂ ಮೆಡಿಕೇರ್ (ಹಿರಿಯ ನಾಗರಿಕರಿಗೆ ಆರೋಗ್ಯ ವಿಮಾ ಸೌಲಭ್ಯ) ಯೋಜನೆಗಳನ್ನು ತಾವು ಉಳಿಸಿಕೊಳ್ಳುವುದಾಗಿ ಟ್ರಂಪ್ ಅವರು ಹೇಳಿದ್ದಾರೆ. ಆದರೆ, ಟಿಪ್ಸ್‌ಗಳಿಗೆ ಮತ್ತು ಹೆಚ್ಚುವರಿ ದುಡಿಮೆಗೆ ಸಿಗುವ ಹೆಚ್ಚುವರಿ ಆದಾಯಕ್ಕೆ ತೆರಿಗೆ ವಿಧಿಸುವುದಿಲ್ಲ ಎಂಬ ಭರವಸೆಯು, ಸಾಮಾಜಿಕ ಭದ್ರತಾ ಯೋಜನೆ ಹಾಗೂ ಮೆಡಿಕೇರ್ ಯೋಜನೆ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಪ್ರಶ್ನೆಗಳು ಇವೆ.

ಹವಾಮಾನ ಮತ್ತು ಇಂಧನ: ವಿದ್ಯುತ್ ಚಾಲಿತ ವಾಹನಗಳನ್ನು ತಾವು ವಿರೋಧಿಸುವುದಿಲ್ಲ ಎಂದು ಹೇಳಿರುವ ಟ್ರಂಪ್, ಬೈಡನ್ ಅವರ ಅಧಿಕಾರ ಅವಧಿಯಲ್ಲಿ ಇ.ವಿ. ಮಾರುಕಟ್ಟೆ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದ ಜಾರಿಗೆ ತಂದ ಎಲ್ಲ ಕ್ರಮಗಳನ್ನು ನಿಲ್ಲಿಸುವುದಾಗಿ ಭರವಸೆ ನೀಡಿದ್ದಾರೆ. ಹವಾಮಾನ ಬದಲಾವಣೆಯು 'ಸುಳ್ಳು ಬೆದರಿಕೆ' ಎಂದು ಟ್ರಂಪ್ ಯಾವಾಗಲೂ ಹೇಳುತ್ತಾರೆ.

ವಿಶ್ವದಲ್ಲಿ ಅಮೆರಿಕದ ಪಾತ್ರ: ದೇಶದ ಮಿಲಿಟರಿಯನ್ನು ವಿಸ್ತರಿಸಲಾಗುವುದು, ರಕ್ಷಣೆಗೆ ಮಾಡುವ ವೆಚ್ಚಗಳನ್ನು ಹಾಗೇ ಉಳಿಸಿಕೊಳ್ಳಲಾಗುವುದು ಮತ್ತು ಹೊಸದಾದ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ. ರಷ್ಯಾ–ಉಕ್ರೇನ್, ಇಸ್ರೇಲ್–ಹಮಾಸ್ ಯುದ್ಧಗಳನ್ನು ನಿಲ್ಲಿಸಲು ತಮ್ಮಿಂದ ಆಗುತ್ತದೆ ಎಂದು ಟ್ರಂಪ್ ಹೇಳಿದ್ದಾರೆ. ನ್ಯಾಟೊ ಬಗ್ಗೆ ಅವರು ಬಹಳ ಟೀಕೆಗಳನ್ನು ಮಾಡಿದ್ದಾರೆ.

ಟ್ರಂಪ್ ಸಾಗಿಬಂದ ಹಾದಿ...



ನ್ಯೂಯಾರ್ಕ್ (ಪಿಟಿಐ): ಡೊನಾಲ್ಡ್ ಟ್ರಂಪ್.. ಸದ್ಯ ಜಾಗತಿಕವಾಗಿ ಬಹು ಚರ್ಚಿತ ಹೆಸರು. ಉದ್ಯಮ ಕ್ಷೇತ್ರದಿಂದ ರಿಯಲ್ ಎಸ್ಟೇಟ್ ವಹಿವಾಟು, ರಿಯಾಲಿಟಿ ಟಿ.ವಿ. ಕಾರ್ಯಕ್ರಮದ ಸ್ಟಾರ್ ಪಟ್ಟದಿಂದ ಹಿಡಿದು ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾದ ಅಮೆರಿಕದ ಮೊದಲ ಮಾಜಿ ಅಧ್ಯಕ್ಷ ಎಂಬ 'ಕುಖ್ಯಾತಿ'ವರೆಗೆ ಅವರದು 'ಬಹುಮುಖ ಪ್ರತಿಭೆ'.

ಅಧ್ಯಕ್ಷೀಯ ಚುನಾವಣೆ ಪ್ರಚಾರದ ವೇಳೆ ಎರಡು ಬಾರಿ ನಡೆದಿದ್ದ ಹತ್ಯೆ ಯತ್ನಗಳಿಂದ ಸುರಕ್ಷಿತವಾಗಿ ಪಾರಾದ ಟ್ರಂಪ್ ಈಗ ಹೊಸ ಇತಿಹಾಸ ಬರೆದಿದ್ದಾರೆ.

ಈ ಪ್ರಕ್ರಿಯೆಯಲ್ಲಿ ಅವರು ಡೆಮಾಕ್ರಟಿಕ್ ಪಕ್ಷ ಮತ್ತು ಹಾಲಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಅಸಂಖ್ಯ ಬೆಂಬಲಿಗರ ಕನಸುಗಳನ್ನು ನುಚ್ಚುನೂರು ಮಾಡಿದ್ದಾರೆ. 2020ರಲ್ಲಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿ, 2024ರ ಚುನಾವಣೆಗೆ ಮತ್ತೆ ನಾಮಪತ್ರ ಸಲ್ಲಿಸುವ ನಡುವಿನ ನಾಲ್ಕು ವರ್ಷದಲ್ಲಿ ಎಂದಿಗೂ ಟ್ರಂಪ್ ಸುದ್ದಿಯ ತೆರೆಮರೆಗೆ ಸರಿಯಲೇ ಇಲ್ಲ. ಅಧಿಕಾರ ಇಲ್ಲದಿದ್ದಾಗಲೂ ವಿಭಿನ್ನ ಕಾರಣಗಳಿಗಾಗಿ ಸುದ್ದಿಯಲ್ಲಿದ್ದರು. ಅವರು ಅಮೆರಿಕನ್ನರ ಪಾಲಿಗೆ 'ಮಾಸದ' ಅಧ್ಯಕ್ಷ!.

2020ರಲ್ಲಿ ಜೋ ಬೈಡನ್ ಚುನಾಯಿತರಾದರೂ, ಆ ಫಲಿತಾಂಶ ಒಪ್ಪಲು ಟ್ರಂಪ್ ಸಿದ್ಧರಿರಲಿಲ್ಲ. ಅವರ ಬೆಂಬಲಿಗರು ಆ ವರ್ಷ ಜನವರಿ 6ರಂದು ಅಮೆರಿಕದ ರಾಜಧಾನಿಗೆ ಲಗ್ಗೆ ಇಟ್ಟಿದ್ದರು. ದೊಂಬಿಯಾಯಿತು. ಈ ಬೆಳವಣಿಗೆಗಳನ್ನು ಖುದ್ದು ಅಮೆರಿಕವಷ್ಟೇ ಅಲ್ಲ, ಜಗತ್ತು ಬೆರಗುಕಣ್ಣುಗಳಿಂದ ನೋಡಿತು.

ಅಧ್ಯಕ್ಷ ಸ್ಥಾನದ ಓಟದಲ್ಲಿ ಈಗಿನದು ಅವರ 3ನೇ ಯತ್ನ. ಓಟದ ಹಾದಿಯಲ್ಲಿ ಅಡ್ಡಿಗಳಿದ್ದವು. ಬೆನ್ನಿಗೆ ಕ್ರಿಮಿನಲ್ ಆರೋಪಗಳಿದ್ದವು. ದಾಖಲೆ ತಿರುಚಿದ್ದ ಪ್ರಕರಣದಲ್ಲಿ ನ್ಯೂಯಾರ್ಕ್ ಕೋರ್ಟ್ ಶಿಕ್ಷೆಗೂ ಗುರಿಪಡಿಸಿತ್ತು. ಆಗಲೂ ಟ್ರಂಪ್ ಸುದ್ದಿಯಾದರು. ಆಗವರು ಶಿಕ್ಷೆಗೊಳಗಾದ ಮೊದಲ ಮಾಜಿ ಅಧ್ಯಕ್ಷ!

ಎರಡು ಬಾರಿ ಹತ್ಯೆ ಯತ್ನದಿಂದ ಟ್ರಂಪ್ ಧೃತಿಗೆಡಲಿಲ್ಲ. ಬೆಂಬಲಿಗರ ಉತ್ಸಾಹವೂ ಕುಗ್ಗಲಿಲ್ಲ. ಅವರ ಅವಧಿಯ ನೀತಿಗಳನ್ನು ಮೆರೆಸುತ್ತಾ ಟ್ರಂಪ್ ಧ್ಯಾನ, ರ್‍ಯಾಲಿ ಅವಿರತ ನಡೆಯಿತು. ಆ ಯತ್ನಗಳೀಗ ಯಶಸ್ಸು ನೀಡಿವೆ. 2016ರಲ್ಲಿ ಟ್ರಂಪ್ ಮೊದಲ ಬಾರಿಗೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಹಿಲರಿ ಕ್ಲಿಂಟನ್ ವಿರುದ್ಧ ಜಯಗಳಿಸಿದ್ದರು. ಈಗ ಮತ್ತೆ ಅದೇ ಪಕ್ಷದ ಮಹಿಳಾ ಅಭ್ಯರ್ಥಿ ಕಮಲಾ ಹ್ಯಾರಿಸ್ ವಿರುದ್ಧ ಗೆದ್ದಿದ್ದಾರೆ.

ಟ್ರಂಪ್ ಪ್ರವೇಶಕ್ಕೆ ಶ್ವೇತಭವನವೀಗ ಕಾಯುತ್ತಿದೆ. ಅಮೆರಿಕಲ್ಲಿ ಮುಂದಿನ ನಾಲ್ಕು ವರ್ಷ 'ಟ್ರಂಪ್' ಕಾಲ. 'ತಂಪು ಕಾಲ' ಎಂಬ ಸಂಭ್ರಮದಲ್ಲಿ ಅವರ ಬೆಂಬಲಿಗರಿದ್ದಾರೆ.

- ಗ್ರೋವರ್ ಕ್ಲೀವ್‌ಲ್ಯಾಂಡ್ ಅವರು 1885-1889 ಮತ್ತು 1893-1897ರವರೆಗೆ ಶ್ವೇತಭವನದ ಚುಕ್ಕಾಣಿಯನ್ನು ಎರಡು ಬಾರಿ ಹಿಡಿದ ಮೊದಲ ಅಧ್ಯಕ್ಷ ಎನಿಸಿದ್ದಾರೆ. ಗ್ರೋವರ್ 1884ರ ಚುನಾವಣೆಯಲ್ಲಿ ಆಯ್ಕೆಯಾಗಿ 22ನೇ ಅಧ್ಯಕ್ಷರಾಗಿ ಮತ್ತು 1892ರ ಚುನಾವಣೆಯಲ್ಲಿ ಆಯ್ಕೆಯಾಗಿ 24ನೇ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ನಿಯೋಜಿತ ಅಧ್ಯಕ್ಷರ ಬದುಕಿನ ಪ್ರಮುಖ ಹಂತ

- ಜೂನ್ 14, 1946ರಂದು ನ್ಯೂಯಾರ್ಕ್‌ನ ಕ್ವೀನ್ಸ್‌ನಲ್ಲಿ ಮೇರಿ–ಫ್ರೆಡ್ ಟ್ರಂಪ್ ದಂಪತಿ ಪುತ್ರನಾಗಿ ಡೊನಾಲ್ಡ್ ಜನನ. ದಂಪತಿಯ ಐವರು ಮಕ್ಕಳಲ್ಲಿ ಇವರು 4ನೇಯವರು. ತಂದೆ ರಿಯಲ್ ಎಸ್ಟೇಟ್ ಉದ್ಯಮಿ.
- 1968ರಲ್ಲಿ ಪೆನ್ಸಿಲ್ವೇನಿಯಾದ ವಾರ್ಟನ್ ಸ್ಕೂಲ್ ಆಫ್ ಫೈನಾನ್ಸ್ ಅಂಡ್ ಕಾಮರ್ಸ್‌ನಿಂದ ಪದವೀಧರನಾಗಿ ಹೊರಹೊಮ್ಮಿದರು.
- 1971ರಲ್ಲಿ ತಂದೆ ನಡೆಸುತ್ತಿದ್ದ ಕಂಪನಿಯ ಉಸ್ತುವಾರಿ ಪಡೆದ ಟ್ರಂಪ್ ಆರ್ಗನೈಸೇಷನ್ ಎಂದು ನಾಮಕರಣ ಮಾಡಿದರು. ಹೋಟೆಲ್, ರೆಸಾರ್ಟ್, ವಸತಿ, ವಾಣಿಜ್ಯ ಕಟ್ಟಡಗಳು, ಗಾಲ್ಫ್ ಕೋರ್ಸ್ ಹೀಗೆ ಉದ್ಯಮದ ಕವಲುಗಳು ವಿವಿಧ ಕ್ಷೇತ್ರಗಳಲ್ಲಿ ಬೆಳೆದವು.
- 2004ರಲ್ಲಿ ರಿಯಾಲಿಟಿ ಟಿ.ವಿ ಷೋ 'ದ ಅಪ್ರೆಂಟೀಸ್' ಕಾರ್ಯಕ್ರಮದಲ್ಲಿ ಭಾಗಿಯಾದರು. ಈ ಮೂಲಕ ಮನೆಮಾತಾದರು.
- ಮುಂದೆ ಜೆಕ್ ಮೂಲದ ಅಥ್ಲೆಟಿಕ್ ಪಟು, ರೂಪದರ್ಶಿ ಇವಾನಾ ಜೆಲ್‌ನಿಕೊವಾ ಜೊತೆ ಮದುವೆ. ದಂಪತಿಗೆ ಮೂವರು ಮಕ್ಕಳು. ಡೊನಾಲ್ಡ್ ಜೂನಿಯರ್, ಇವಾಂಕಾ, ಎರಿಕ್, 1990ರಲ್ಲಿ ವಿಚ್ಛೇದನವೂ ಆಯಿತು.
- 1993ರಲ್ಲಿ ನಟಿ ಮಾರ್ಲಾ ಮ್ಯಾಪೆಲ್ಸ್ ಅವರನ್ನು ಟ್ರಂಪ್ ಮದುವೆ ಆದರು.1999ರಲ್ಲಿ ವಿಚ್ಛೇದನ ಆಯಿತು. ಈ ದಂಪತಿಗೆ ಒಂದು ಮಗುವಿದೆ.
- ಟ್ರಂಪ್ ಅವರ ಹಾಲಿ ಪತ್ನಿ ಹೆಸರು ಮೆಲಾನಿಯಾ. 2005ರಲ್ಲಿ ಇವರ ಜೊತೆಗೆ ಮದುವೆಯಾಯಿತು. ಇವರು ಮಾಜಿ ರೂಪದರ್ಶಿ. ಈ ದಂಪತಿಗೆ ಬರೊನ್ ವಿಲಿಯಂ ಟ್ರಂಪ್ ಹೆಸರಿನ ಪುತ್ರನಿದ್ದಾನೆ.



ಸಂಭ್ರಮ ಫ್ಲಾರಿಡಾದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಡೊನಾಲ್ಡ್ ಟ್ರಂಪ್ ಅವರು ತಮ್ಮ ಪತ್ನಿ ಮೆಲಾನಿಯಾ ಜತೆ ಗೆಲುವಿನ ಸಂಭ್ರಮ ಹಂಚಿಕೊಂಡರು – ಎಎಫ್‌ಪಿ

ಭಾರತ ಮೂಲದ 6 ಅಮೆರಿಕನ್ನರ ಆಯ್ಕೆ

ಭಾರತ ಮೂಲದ ಒಟ್ಟು ಆರು ಮಂದಿ ಅಮೆರಿಕನ್ನರು ದೇಶದ ಜನಪ್ರತಿನಿಧಿಗಳ ಸಭೆಗೆ ಆಯ್ಕೆಯಾಗಿದ್ದಾರೆ. ಕಳೆದ ಬಾರಿಯ ಚುನಾವಣೆಯಲ್ಲಿ ಐವರು ಭಾರತೀಯ ಅಮೆರಿಕನ್ನರು ಆಯ್ಕೆಯಾಗಿದ್ದರು.

ಸೆನೆಟ್ ಹಾಗೂ ಜನಪ್ರತಿನಿಧಿಗಳ ಸಭೆಯಲ್ಲಿ ಇರುವ ಭಾರತ ಮೂಲದ ಅಮೆರಿಕನ್ನರ ಗುಂಪನ್ನು 'ಸಮೋಸಾ ಕೋಕಸ್' ಎಂದು ಕರೆಯಲಾಗುತ್ತದೆ. ವಕೀಲ ಸುಹಾಸ್ ಸುಬ್ರಹ್ಮಣ್ಯಂ ಅವರು ಮೊದಲ ಬಾರಿಗೆ ಜನಪ್ರತಿನಿಧಿಗಳ ಸಭೆಗೆ ಆಯ್ಕೆಯಾಗಿದ್ದಾರೆ. ಅಮಿ ಬೆರಾ, ರಾಜಾ ಕೃಷ್ಣಮೂರ್ತಿ, ರೋ ಖನ್ನಾ, ಪ್ರಮೀಳಾ ಜಯಪಾಲ್ ಹಾಗೂ ಶ್ರೀ ಠಾಣೆದಾರ್... ಈ ಎಲ್ಲ ಭಾರತೀಯ ಅಮೆರಿಕನ್ನರು ಈ ಬಾರಿಯೂ ಜನಪ್ರತಿನಿಧಿಗಳ ಸಭೆಗೆ ಪುನರಾಯ್ಕೆಯಾಗಿದ್ದಾರೆ. ಜನಪ್ರತಿನಿಧಿಗಳ ಸಭೆಯಲ್ಲಿ ಭಾರತ ಮೂಲದ ಸದಸ್ಯರ ಸಂಖ್ಯೆ ಅಧಿಕವಾಗುವ ನಿರೀಕ್ಷೆ ಇದೆ. ಅರಿಜೋನಾ ನಗರದಲ್ಲಿ ಡಾ. ಅಮಿಷ್ ಶಾ ಅವರು ರಿಪಬ್ಲಿಕನ್ ಪಕ್ಷದ ಎದುರಾಳಿಗಿಂತ ತುಸು ಮುನ್ನಡೆ ಸಾಧಿಸಿದ್ದಾರೆ.



ಪ್ರಮೀಳಾ



ರೋ ಖನ್ನಾ



ಅಮಿ ಬೆರಾ



ರಾಜಾ ಕೃಷ್ಣಮೂರ್ತಿ




ಶ್ರೀ ಠಾಣೆದಾರ್

ಪ್ರಬಲ ಪೈಪೋಟಿ ನೀಡಿದ ಕಮಲಾ

ತಿರುವರೂರು (ತಮಿಳುನಾಡು) (ಪಿಟಿಐ): ಕಮಲಾ ಹ್ಯಾರಿಸ್ ಹೋರಾಟಗಾರ್ತಿ. ಈಗ ಸೋತಿರಬಹುದು. ಆದರೆ, ಖಂಡಿತವಾಗಿ ಮತ್ತೆ ಪುಟಿದೇಳುತ್ತಾರೆ...

ಇದು, ತಮಿಳುನಾಡುವಿನ ತಿರುವರೂರು ಜಿಲ್ಲೆಯ ತುಳಸೇಂದ್ರಪುರಂ ಗ್ರಾಮದ ನಿವಾಸಿಗಳ ವಿಶ್ವಾಸ. ಇದು, ಕಮಲಾ ಅವರ ಪೂರ್ವಜರು ನೆಲಸಿದ್ದ ಊರು.



ಅಧ್ಯಕ್ಷೀಯ ಚುನಾವಣೆಯ ಮತಎಣಿಕೆ ಆರಂಭವಾಗುತ್ತಿದಂತೆಯೇ ಸ್ಥಳೀಯರು ಟಿ.ವಿಯತ್ತಲೆ ದೃಷ್ಟಿ ನೆಟ್ಟಿದ್ದರು. ಫಲಿತಾಂಶದ ಬೆಳವಣಿಗೆಗಳನ್ನು ಗಮನಿಸುತ್ತಿದ್ದರು. ಕೆಲವರು ಸ್ಥಳೀಯ ಶ್ರೀ ಧರ್ಮಶಾಸ್ತಾ ಪೆರುಮಾಳ್ ದೇವಸ್ಥಾನದಲ್ಲಿ ಕಮಲಾ ಗೆಲುವಿಗಾಗಿ ಪ್ರಾರ್ಥಿಸಿದ್ದರು.

ಆದರೆ, ಹೊತ್ತುಕಳೆದಂತೆ ಡೊನಾಲ್ಡ್ ಟ್ರಂಪ್ ಗೆಲುವು, ಕಮಲಾ ಸೋಲು ಸ್ಪಷ್ಟವಾಗತೊಡಗಿತು. ಗ್ರಾಮದಲ್ಲೂ ನಿರಾಸೆ ಆವರಿಸಿತು. ಟಿ.ವಿಯಿಂದ ವಿಮುಖರಾದರು.

ಗ್ರಾಮದ ಡಿಎಂಕೆ ಮುಖಂಡ ಜೆ.ಸುಧಾಕರ್, 'ಕಮಲಾ ಗೆಲ್ಲಬಹುದು ಎಂದು ನಾವು ಭಾವಿಸಿದ್ದೆವು. ವಿಜಯೋತ್ಸವಕ್ಕೂ ಚಿಂತನೆ ನಡೆಸಿದ್ದೆವು. ಪಟಾಕಿಗಳು ಸಿದ್ಧವಾಗಿದ್ದವು. ಆದರೆ, ಸೋಲು–ಗೆಲುವು ಬದುಕಿನ ಭಾಗ. ತೀವ್ರ ಸ್ಪರ್ಧೆ ಇತ್ತು. ಕಮಲಾ ಸೋತಿರಬಹುದು. ಅವರು ನೀಡಿದ ಸ್ಪರ್ಧೆಯನ್ನು ಮರೆಯಲಾಗದು' ಎಂದು ಫಲಿತಾಂಶವನ್ನು ಅವಲೋಕಿಸಿದರು.

ಸ್ಥಳೀಯರಾದ ಅಂಬರಸು, ಚುನಾವಣೆಯಲ್ಲಿ ಗೆಲ್ಲುತ್ತಾರೆ. ಗ್ರಾಮಕ್ಕೂ ಭೇಟಿ ನೀಡುತ್ತಾರೆ ಎಂದು ಭಾವಿಸಿದ್ದೆವು. ಖಂಡಿತವಾಗಿಯೂ ಅವರು ಮುಂದೆ ಗೆಲ್ಲುತ್ತಾರೆ ಎಂದು ಆಶಿಸಿದರು.

ಟ್ರಂಪ್‌ಗೆ ಮತ್ತೆ ಅಮೆರಿಕ ಪಟ್ಟ

ಒಂದನೇ ಪುಟದಿಂದ...

ಕಮಲಾ ಹ್ಯಾರಿಸ್ ಈ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರೆ ಅಮೆರಿಕದ ಅಧ್ಯಕ್ಷ ಗಾದಿಗೆ ಏರಿದ ಮೊದಲ ಮಹಿಳೆ, ಮೊದಲ ಕಪ್ಪು ವರ್ಣೀಯ ಮಹಿಳೆ ಹಾಗೂ ಏಷ್ಯಾ ಮೂಲದ ಮೊದಲ ವ್ಯಕ್ತಿ ಎನ್ನುವ ಶ್ರೇಯಕ್ಕೆ ಪಾತ್ರರಾಗುತ್ತಿದ್ದರು.

ಅಮೆರಿಕದ ಸುವರ್ಣ ಯುಗ ಆರಂಭ: ಟ್ರಂಪ್

'ಅಭೂತಪೂರ್ವ ಹಾಗೂ ಸಂಪೂರ್ಣ ಬೆಂಬಲವನ್ನು ಅಮೆರಿಕ ನೀಡಿದೆ. ಅಮೆರಿಕದ ಪಾಲಿಗೆ ಸುವರ್ಣ ಯುಗದ ಆರಂಭಕ್ಕಾಗಿ ಈ ಬಹುಮತ ಲಭಿಸಿದೆ. ಇನ್ನು ಅಮೆರಿಕದಲ್ಲಿ ಸುವರ್ಣ ಯುಗ ಆರಂಭವಾಗಲಿದೆ' ಎಂದು ಟ್ರಂಪ್ ಹೇಳಿದರು.

ವಿಜಯದ ಸ್ಪಷ್ಟ ಸೂಚನೆಗಳು ಸಿಗುತ್ತಿದ್ದಂತೆ ಫ್ಲಾರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿ ತಮ್ಮ ಕುಟುಂಬದ ಜತೆಗೆ ಬುಧವಾರ ಬೆಂಬಲಿಗರನ್ನು ಉದ್ದೇಶಿಸಿ ಟ್ರಂಪ್ ವಿಜಯದ ಭಾಷಣ ಮಾಡಿದರು. 'ಇದು ಅಮೆರಿಕದ ಜನರ ಭವ್ಯ ವಿಜಯ. ಇದು ಹಿಂದೆಂದೂ ಯಾರೂ ನೋಡದಂತಹ ರಾಜಕೀಯ ಆಂದೋಲನವಾಗಿದೆ. ಇದು ಸಾರ್ವಕಾಲಿಕ ಶ್ರೇಷ್ಠ ರಾಜಕೀಯ ಚಳವಳಿ ಎಂದೇ ನಾನು ಭಾವಿಸುತ್ತೇನೆ. ಜನತೆ ನೀಡಿರುವ ಅಭೂತಪೂರ್ವ ಬೆಂಬಲ, ಈ ಗೆಲುವು ಅಮೆರಿಕವನ್ನು ಮತ್ತೊಮ್ಮೆ ಅದ್ಭುತ ರಾಷ್ಟ್ರವನ್ನಾಗಿಸಲು ಸಹಕಾರಿಯಾಗಿದೆ' ಎಂದು ಹೇಳಿದರು.

'ನನ್ನನ್ನು ದೇವರು ಬದುಕುಳಿಸಿದ್ದು ಈ ದೇಶವನ್ನು ರಕ್ಷಿಸಲು ಹಾಗೂ ಅಮೆರಿಕದ ಹಿರಿಮೆಯನ್ನು ಕಾಪಾಡುವ ಸಲುವಾಗಿಯೇ ಇರಬೇಕು' ಎಂದು ಬಣ್ಣಿಸಿದ ಟ್ರಂಪ್, ಚುನಾವಣಾ ಪ್ರಚಾರದ ವೇಳೆ ಬಂದೂಕುಧಾರಿಗಳು ತಮ್ಮ ಹತ್ಯೆಗೆ ನಡೆಸಿದ ಗುಂಡಿನ ದಾಳಿಯನ್ನು ಪರೋಕ್ಷವಾಗಿ ನೆನಪಿಸಿಕೊಂಡರು.

'ರಾಜಕೀಯ ವಲಯದಲ್ಲಿ ಇದು ನಿರೀಕ್ಷಿಸದ ವಿದ್ಯಮಾನ. ಇದನ್ನು ಯಾರೂ ಊಹಿಸಿರಲಿಲ್ಲ. ನಮ್ಮ ದೇಶದ ಸದ್ಯದ ಪರಿಸ್ಥಿತಿಯನ್ನು ಸರಿಪಡಿಸಲು ನೆರವಿನ ಅಗತ್ಯವಿದೆ. ಅದಕ್ಕೆ ನಾವೆಲ್ಲರೂ ನೆರವಾಗಬೇಕಿದೆ. ನಮ್ಮ ರಾಷ್ಟ್ರದ ಗಡಿಯನ್ನು ಭದ್ರಪಡಿಸಲಾಗುವುದು. ಅಷ್ಟೇ ಅಲ್ಲ, ದೇಶಕ್ಕೆ ಸಂಬಂಧಿಸಿದ ಎಲ್ಲವನ್ನೂ ಸರಿಪಡಿಸಲಾಗುವುದು. ನೀವು, ನಿಮ್ಮ ಕುಟುಂಬ ಹಾಗೂ ನಿಮ್ಮ ಭವಿಷ್ಯದ ಪ್ರತಿಯೊಂದು ದಿನವೂ ಸುರಕ್ಷಿತವಾಗಿಡಲು ನನ್ನ ದೇಹದಲ್ಲಿ ಕೊನೆ ಉಸಿರು ಇರುವವರೆಗೂ ಹೋರಾಡುವೆ. ಅಮೆರಿಕದ ಮಕ್ಕಳು ಹಾಗೂ ಪ್ರತಿಯೊಬ್ಬರು ಅದ್ಭುತ ಜೀವನ ನಡೆಸಲು ಅಗತ್ಯವಿರುವುದನ್ನು ಸ್ಥಾಪಿಸದ ಹೊರತು ನಾನು ವಿರಮಿಸುವುದಿಲ್ಲ' ಎಂದು ಟ್ರಂಪ್ ಭರವಸೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ



ಟ್ರಂಪ್ ಗೆಲುವಿಗೆ ಅಭಿನಂದಿಸಿ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ, ಭಾರತ ಮತ್ತು ಅಮೆರಿಕ ನಡುವಿನ ಜಾಗತಿಕ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಎದುರು ನೋಡುತ್ತಿರುವುದಾಗಿ ಹೇಳಿದ್ದಾರೆ.

2016–2020ರ ಅವಧಿಯಲ್ಲಿ ಟ್ರಂಪ್ ಅವರು ಅಮೆರಿಕ ಅಧ್ಯಕ್ಷರಾಗಿದ್ದಾಗ ಅವರನ್ನು ಭೇಟಿಯಾದಾಗಿನ ಚಿತ್ರವನ್ನು ಮೋದಿ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ವ್ಯಾನ್ಸ್ ಆಂಧ್ರದ ಅಳಿಯ



ಉಷಾ ವ್ಯಾನ್ಸ್ ಮತ್ತು ಜೆ.ಡಿ. ವ್ಯಾನ್ಸ್ —ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಅಮೆರಿಕದ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವ ಜೆ.ಡಿ. ವ್ಯಾನ್ಸ್ ಅವರು ಆಂಧ್ರಪ್ರದೇಶದ ಅಳಿಯ. ವ್ಯಾನ್ಸ್ ಅವರ ಪತ್ನಿ ಉಷಾ ಚಿಲುಕುರಿ ಅವರು ತೆಲುಗು ವಲಸಿಗರ ಮಗಳು.

ತಮ್ಮ ಜೀವನ ಪಯಣದಲ್ಲಿ ಉಷಾ ಅವರು ನೀಡಿರುವ ಬೆಂಬಲವನ್ನು ವ್ಯಾನ್ಸ್ ಅವರು ಮುಕ್ತವಾಗಿ ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಉಷಾ ಅವರ ಭಾರತ ಮೂಲ ಹಾಗೂ ಭಾರತೀಯ ಮೌಲ್ಯಗಳನ್ನು ಅವರು ಅಳವಡಿಸಿಕೊಂಡಿರುವ ಬಗ್ಗೆ ವ್ಯಾನ್ಸ್ ಅವರು ಬಹಳ ಮೆಚ್ಚುಗೆಯ ಧಾಟಿಯಲ್ಲಿ ಮಾತನಾಡಿದ್ದಿದೆ.

ಚಿಲುಕುರಿ ಕುಟುಂಬದ ಮೂಲ ಇರುವುದು ಪಶ್ಚಿಮ ಗೋದಾವರಿ ಜಿಲ್ಲೆಯ ಸಣ್ಣ ಗ್ರಾಮ ವಡ್ಲೂರಿನಲ್ಲಿ. ಈ ಗ್ರಾಮ ಹೇಳಿಕೊಳ್ಳುವಂತಹ ವೈಶಿಷ್ಟ್ಯವನ್ನೇನೂ ಹೊಂದಿಲ್ಲ.

ಉಷಾ ಅವರ ಸಂಬಂಧಿ, 96 ವರ್ಷ ವಯಸ್ಸಿನ ಪ್ರೊ. ಚಿಲುಕುರಿ ಶಾಂತಮ್ಮ ಆಂಧ್ರಪ್ರದೇಶದ ವಿಜಯನಗರಂನ ಖಾಸಗಿ ವಿಶ್ವವಿದ್ಯಾಲಯವೊಂದರಲ್ಲಿ ಭೌತವಿಜ್ಞಾನ ಬೋಧಿಸುತ್ತಿದ್ದರು.

ಅವರು ವಿಶಾಖಪಟ್ಟಣದಲ್ಲಿ ಇರುತ್ತಾರೆ. ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರು, ವ್ಯಾನ್ಸ್ ಅವರನ್ನು ಉಪಾಧ್ಯಕ್ಷ ಹುದ್ದೆಯ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ ನಂತರದಲ್ಲಿ, ವ್ಯಾನ್ಸ್ ಮತ್ತು ಉಷಾ ಅವರ ವಿವಾಹದ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕವಾಗಿ ಹಂಚಿಕೊಳ್ಳಲಾಗಿತ್ತು.

100 ದಿನಗಳ ಮಹತ್ವಾಕಾಂಕ್ಷೆಯ ಅಜೆಂಡಾ ರೂಪಿಸಲು ಸಜ್ಜು

ಸೆನೆಟ್: ರಿಪಬ್ಲಿಕನ್ ಪಕ್ಷಕ್ಕೆ ಬಹುಮತ

ವಾಷಿಂಗ್ಟನ್ (ಪಿಟಿಐ/ಎಪಿ/ರಾಯಿಟರ್ಸ್): ಪಶ್ಚಿಮ ವರ್ಜೀನಿಯಾ ಹಾಗೂ ಒಹಿಯೊದಲ್ಲಿ ಗೆಲ್ಲುವ ಮೂಲಕ ರಿಪಬ್ಲಿಕನ್ ಪಕ್ಷವು ಬುಧವಾರ ಸೆನೆಟ್‌ನಲ್ಲಿ ಬಹು ಮತ ಸಾಧಿಸಿದೆ. ಜನಪ್ರತಿನಿಧಿಗಳ ಸಭೆಯಲ್ಲಿಯೂ ಬಹುಮತ ಗಳಿಸುವತ್ತ ಪಕ್ಷ ಸಾಗುತ್ತಿದೆ. ಒಂದು ವೇಳೆ ಸೆನೆಟ್ ಹಾಗೂ ಜನಪ್ರತಿನಿಧಿಗಳ ಸಭೆ ಎರಡ ರಲ್ಲಿಯೂ ರಿಪಬ್ಲಿಕನ್ ಪಕ್ಷವು ಬಹುಮತ ಸಾಧಿಸಿದರೆ ಡೊನಾಲ್ಡ್ ಟ್ರಂಪ್ ಅವರ ಶಕ್ತಿಯು ಹಲವು ಪಟ್ಟು ಹೆಚ್ಚಲಿದೆ.

ಚುನಾವಣಾ ಪ್ರಚಾರಗಳಲ್ಲಿ ಟ್ರಂಪ್ ಅವರು ತೆರಿಗೆ ವ್ಯವಸ್ಥೆಯಲ್ಲಿನ ಬದಲಾವಣೆ ಹಾಗೂ ವಲಸೆ ನೀತಿಗಳನ್ನು ಕಠಿಣಗೊಳಿಸುವ ಕುರಿತು ಭರವಸೆಗಳನ್ನು ನೀಡಿದ್ದರು. ಎರಡೂ ಕಡೆಗಳಲ್ಲಿ ಬಹುಮತ ಪಡೆಯುವುದರೊಂದಿಗೆ ತಾವು ನೀಡಿದ ಭರವಸೆಗಳನ್ನು ಈಡೇರಿಸುವುದು ಟ್ರಂಪ್ ಅವರಿಗೆ ಸುಲಭವಾಗಲಿದೆ.

ಸೆನೆಟ್‌ನಲ್ಲಿ ಬಹುಮತ ಪಡೆಯುವುದರೊಂದಿಗೆ ಟ್ರಂಪ್ ಅವರಿಗೆ, ಸಂಪ್ರದಾಯವಾದಿ ನ್ಯಾಯಮೂರ್ತಿಗಳು ಹಾಗೂ ಸರ್ಕಾರದ ಮಟ್ಟದಲ್ಲಿ ಅಧಿಕಾರಿಗಳ ನೇಮಕ ಮಾಡಲು ಸಹಕಾರಿಯಾಗಲಿದೆ ಎನ್ನಲಾಗಿದೆ.

'ಸೆನೆಟ್‌ನಲ್ಲಿನ ಪಕ್ಷದ ಗೆಲುವು ಅದ್ಭುತವಾದುದು' ಎಂದು ಡೊನಾಲ್ಡ್ ಟ್ರಂಪ್ ಅವರು ಬಣ್ಣಿಸಿದ್ದಾರೆ.

'ಜನಪ್ರತಿನಿಧಿಗಳ ಸಭೆ ಹಾಗೂ ಸೆನೆಟ್‌ನಲ್ಲಿನ ರಿಪಬ್ಲಿಕನ್ ಪಕ್ಷದ ಸದಸ್ಯರು ಮಹತ್ವಾಕಾಂಕ್ಷೆಯ 100 ದಿನಗಳ ಅಜೆಂಡಾವನ್ನು ರೂಪಿಸಲು ಕಾರ್ಯಪ್ರವೃತ್ತರಾಗಿದ್ದಾರೆ' ಎಂದು ಜನಪ್ರತಿನಿಧಿಗಳ ಸಭೆಯ ಸ್ಪೀಕರ್ ಹಾಗೂ ರಿಪಬ್ಲಿಕನ್ ಪಕ್ಷದ ಮೈಕ್ ಜಾನ್ಸನ್ ತಿಳಿಸಿದರು.

ಕಪ್ಪುವರ್ಣೀಯ ಮಹಿಳೆಯರ ಆಯ್ಕೆ

'ಮುಂದಿನ ಎರಡು ವರ್ಷಗಳಲ್ಲಿ ನಮ್ಮ ದೇಶವು 250ನೇ ವರ್ಷಕ್ಕೆ ಕಾಲಿಡಲಿದೆ. ಈ ಅವಧಿಯಲ್ಲಿ ಅಮೆರಿಕದ ಸೆನೆಟ್‌ನಲ್ಲಿ 2 ಸಾವಿರಕ್ಕೂ ಅಧಿಕ ಮಂದಿ ಸೇವೆ ಸಲ್ಲಿಸಿದ್ದಾರೆ. ಬಹುಶಃ ಇಷ್ಟು ಜನರಲ್ಲಿ ನನ್ನಂತೆ ಕಾಣುವವರು ಮೂರೇ ಜನರು ಇದ್ದರು' –ಇದು ಮೇರಿಲೆಂಡ್‌ನಿಂದ ಸೆನೆಟ್‌ಗೆ ಆಯ್ಕೆಯಾದ ಮೊದಲ ಕಪ್ಪುವರ್ಣೀಯ ಮಹಿಳೆ ಆಂಜೆಲಾ ಅಲ್ಸೊಬ್ರೂಕ್ ಅವರ ಮಾತುಗಳು. ಡೆಲವೇರ್‌ನಿಂದ ಲಿಸಾ ಬ್ಲಂಟ್ ರೋಚೆಸ್ಟರ್ ಎಂಬ ಮತ್ತೊಬ್ಬ ಕಪ್ಪುವರ್ಣೀಯ ಮಹಿಳೆ ಕೂಡ ಸೆನೆಟ್‌ಗೆ ಆಯ್ಕೆಯಾಗಿದ್ದಾರೆ. ಜೊತೆಗೆ, ಇದೇ ಮೊದಲ ಬಾರಿಗೆ ಲಿಂಗ ಪರಿವರ್ತಿತ ಮಹಿಳೆ ಮೆಕ್‌ಬ್ರೈಡ್ ಅವರು ಆಯ್ಕೆಯಾಗಿದ್ದಾರೆ. ಈ ಮೂವರು ಡೆಮಾಕ್ರಟಿಕ್ ಪಕ್ಷದವರಾಗಿದ್ದಾರೆ.

ಈ ಕಾರಣಗಳಿಂದ ಈ ಚುನಾವಣೆಯು ಹಲವು ಮೊದಲುಗಳಿಗೆ ಸಾಕ್ಷಿಯಾಗಿದೆ.

ಸುಹಾಸ್‌ಗೆ ಬೆಂಗಳೂರಿನ ನಂಟು



ಸುಹಾಸ್ ಸುಬ್ರಹ್ಮಣ್ಯಂ

ವಕೀಲ ಸುಹಾಸ್ ಸುಬ್ರಹ್ಮಣ್ಯಂ ಅವರು ವರ್ಜೀನಿಯಾ ನಗರದಿಂದ ಜನಪ್ರತಿನಿಧಿಗಳ ಸಭೆಗೆ ಆಯ್ಕೆಯಾದ ಹಿಂದೂ ಸಮುದಾಯದ ಮೊದಲಿಗರಾಗಿದ್ದಾರೆ. ಅಮೆರಿಕದಲ್ಲಿರುವ ಭಾರತೀಯರಲ್ಲಿ ಸುಹಾಸ್ ಪ್ರಸಿದ್ಧಿ ಗಳಿಸಿದ್ದಾರೆ. ಪ್ರಸ್ತುತ ಅವರ ವರ್ಜೀನಿಯಾದಿಂದ ಸೆನೆಟ್ ಸದಸ್ಯರಾಗಿದ್ದಾರೆ.

ಸುಹಾಸ್ ಅವರು ಡೆಮಾಕ್ರಟಿಕ್ ಪಕ್ಷದವರು. ಈ ಹಿಂದೆ 2015ರಲ್ಲಿ ಸುಹಾಸ್ ಅವರು ನೀತಿ ನಿರೂಪಣೆಯ ವಿಷಯದಲ್ಲಿ ಬರಾಕ್ ಒಬಾಮ ಅವರಿಗೆ ಸಲಹೆಗಾರರಾಗಿಯೂ ಕೆಲಸ ಮಾಡಿದ್ದಾರೆ. ವಿಶೇಷವೆಂದರೆ, ಸುಹಾಸ್ ಅವರಿಗೆ ಬೆಂಗಳೂರಿನ ನಂಟಿದೆ. ಅವರ ತಾಯಿ ಬೆಂಗಳೂರಿನವರು. ತಂದೆ ಚೆನ್ನೈನವರು. ದಂಪತಿ 1970ರಲ್ಲಿ ಅಮೆರಿಕಕ್ಕೆ ತೆರಳಿದ್ದರು.

ಮತದಾನಕ್ಕೂ ಮೊದಲು ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಸುಹಾಸ್ ಅವರು ತಮ್ಮ ಬಾಲ್ಯದ ಕುರಿತು ನೆನಪುಗಳನ್ನು ಹಂಚಿಕೊಂಡಿದ್ದಾರೆ.

'ನನ್ನ ತಾಯಿ ಬೆಂಗಳೂರಿನವರು. ತಂದೆ ಚೆನ್ನೈನವರು. ತಂದೆ ಸೇನೆಯಲ್ಲಿದ್ದರು. ಸಿಕಂದರಾಬಾದ್‌ನಲ್ಲಿ ನಾನು ನನ್ನ ಬಾಲ್ಯದ ಹೆಚ್ಚಿನ ಸಮಯವನ್ನು ಕಳೆದಿದ್ದೇನೆ. ಅಮೆರಿಕದಲ್ಲಿ ಫಿಜಿಷಿಯನ್ ಆಗಲು ನನ್ನ ತಾಯಿಗೆ ಬಹಳ ಆಸೆ ಇತ್ತು. ನನ್ನ ತಂದೆ–ತಾಯಿ ಬೆಂಗಳೂರಿನ ವೈದ್ಯಕೀಯ ಕಾಲೇಜು ಒಂದರಲ್ಲಿ ಭೇಟಿಯಾಗಿದ್ದರು. ಭಾರತದ ಬೇರುಗಳಿಗೆ ಎಂದಿಗೂ ಅಂಟಿಕೊಂಡಿರಬೇಕು ಎನ್ನುವುದು ಅವರ ಇಚ್ಛೆಯಾಗಿತ್ತು' ಎಂದರು.

ಗೆಲುವಿಗೆ ಪೂರಕವಾಗಿದ್ದೇನು?

- ಹಲವು ವಿವಾದ, ಕ್ರಿಮಿನಲ್ ಪ್ರಕರಣಗಳಿಂದ ನ್ಯಾಯಾಲಯದ ಕಟಕಟೆ ಹತ್ತಿ ರಾಜಕೀಯ ವನವಾಸ ಅನುಭವಿಸಿದರೂ ಮಾರ್ಚ್‌ನಲ್ಲೇ ತಮ್ಮ ಪಕ್ಷದಿಂದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ನಾಮನಿರ್ದೇಶನಗೊಂಡರು. ಇದರ ಬೆನ್ನಲ್ಲೇ ನಡೆಸಿದ ಬಿರುಸಿನ ಚುನಾವಣಾ ತಯಾರಿ ನಡೆಸಿದ್ದರು
- ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಾವೇಶಕ್ಕೆ ಕೆಲವೇ ದಿನಗಳ ಮೊದಲು ಜುಲೈನಲ್ಲಿ ಪೆನ್ಸಿಲ್ವೇನಿಯಾದಲ್ಲಿ ನಡೆದ ರ್‍ಯಾಲಿ ವೇಳೆ ಟ್ರಂಪ್ ಮೇಲೆ ಗುಂಡಿನ ದಾಳಿಯಾಯಿತು. ಅವರ ಕಿವಿಗೆ ಗುಂಡು ತಗುಲಿ ರಕ್ತ ಸುರಿಯುತ್ತಿದ್ದರೂ ಅಂಜದೆ ತನ್ನ ಮುಷ್ಟಿ ಎತ್ತಿದರು. ಇದು ಅವರ ಕಡು ಬೆಂಬಲಿಗರನ್ನು ಸಾಕಷ್ಟು ಭಾವನಾತ್ಮಕವಾಗಿ ಸೆಳೆಯಿತು. ಫ್ಲಾರಿಡಾದಲ್ಲಿ ಟ್ರಂಪ್ ಮೇಲೆ ಎರಡನೇ ಬಾರಿ ನಡೆದ ಗುಂಡಿನ ದಾಳಿಯೂ ಟ್ರಂಪ್ ಕಡೆಗೆ ಮತದಾರರು ವಾಲುವಂತೆ ಮಾಡಿತು
- ಅಕ್ರಮ ವಲಸಿಗರು ನುಸುಳದಂತೆ ದೇಶದ ಗಡಿಯನ್ನು ಭದ್ರಪಡಿಸುವ, ಐವಿಎಫ್ ಬೆಂಬಲಿಸುವ, 'ಅಮೆರಿಕವೇ ಮೊದಲು' ಕಾರ್ಯಸೂಚಿ ಜಾರಿಗೊಳಿಸುವ, ಎಚ್1–ಬಿ ವೀಸಾ ನಿಯಮ ಬಿಗಿಗೊಳಿಸುವ ಟ್ರಂಪ್ ಭರವಸೆಗಳು ಮತದಾರರ ಮೇಲೆ ಪ್ರಭಾವ ಬೀರಿದವು
- ಬೈಡನ್ ಮತ್ತು ಕಮಲಾ ಅವರ ಪ್ರತಿ ಟೀಕೆ, ಆರೋಪಕ್ಕೂ ಟ್ರಂಪ್ ತಕ್ಕ ಉತ್ತರ ನೀಡಿ ಮತದಾರರ ಮನ ಗೆದ್ದರು. ಬೈಡನ್ ಆಡಳಿತ ವೈಫಲ್ಯಗಳನ್ನು ಮತ್ತು ಕಮಲಾ ಅವರ ದೌರ್ಬಲ್ಯಗಳನ್ನು ಮತದಾರರಿಗೆ ಪರಿಣಾಮಕಾರಿಯಾಗಿ ಮನವರಿಕೆ ಮಾಡಿಕೊಟ್ಟರು

ಕಮಲಾ ಸೋಲಿಗೆ ಕಾರಣಗಳು...

- ಡೆಮಾಕ್ರಟಿಕ್ ಅಭ್ಯರ್ಥಿಯಾಗಿ ಕಮಲಾ ಅವರ ನಾಮನಿರ್ದೇಶನ ವಿಳಂಬವಾಯಿತು; ನಾಮನಿರ್ದೇಶನ ಕೂಡ ಪಕ್ಷದೊಳಗಿನ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕ ಆಗಿರಲಿಲ್ಲ. ಅಲ್ಲದೆ, ಪಕ್ಷದಲ್ಲಿ ಅತ್ಯಂತ ಜನಪ್ರಿಯ ನಾಯಕಿ ಎನಿಸಿರಲಿಲ್ಲ
- ಜೋ ಬೈಡನ್ ಆಡಳಿತದ ಛಾಯೆಯಿಂದ ಹೊರಬರಲು ಕಮಲಾಗೆ ಸಾಧ್ಯವಾಗಲಿಲ್ಲ. ಬೈಡನ್ ಆಡಳಿತಕ್ಕೆ ಜನಪ್ರಿಯತೆ ಇರಲಿಲ್ಲ.
- ಮತದಾರರು ಅಕ್ರಮ ವಲಸೆಯ ಬಗ್ಗೆ ಕಳವಳ ಹೊಂದಿದ್ದರು. ಹ್ಯಾರಿಸ್ ಅಕ್ರಮ ವಲಸಿಗರ ಪರವಿದ್ದಾರೆ. ಅಕ್ರಮ ವಲಸೆ ತಡೆಯುವಲ್ಲಿ ಬೈಡನ್ ಆಡಳಿತ ವಿಫಲವಾಗುವಲ್ಲಿ ಕಮಲಾ ಕೂಡ ಕಾರಣವೆಂದು ಟ್ರಂಪ್ ಮಾಡಿದ ಟೀಕೆ ಮತದಾರರ ಮನಸ್ಸಿನಲ್ಲಿ ನಾಟಿತು
- ಅಮೆರಿಕದ ಜನರು ಇನ್ನೂ ಮಹಿಳೆಯನ್ನು ಅಧ್ಯಕ್ಷೆಯಾಗಿ ಸ್ವೀಕರಿಸಲು ಸಿದ್ಧರಿಲ್ಲ. ಅದರಲ್ಲೂ ತಮ್ಮ ಅಧ್ಯಕ್ಷರಾಗಿ ಮತ್ತು ವಿಶ್ವದ ಅತ್ಯಂತ ಶಕ್ತಿಶಾಲಿ ಮಿಲಿಟರಿಯ ಮುಖ್ಯಸ್ಥೆಯಾಗಿ ಕಪ್ಪು ವರ್ಣೀಯ ಮಹಿಳೆಯನ್ನು ಒಪ್ಪಿಕೊಳ್ಳುವ ಮನಃಸ್ಥಿತಿಯಲ್ಲಿ ಇದ್ದಂತಿಲ್ಲ

ರಣಜಿ ಕ್ರಿಕೆಟ್: ಕರ್ನಾಟಕ ತಂಡಕ್ಕೆ ಅಭಿಲಾಷ್ ಶೆಟ್ಟಿ ಪದಾರ್ಪಣೆ, ಉತ್ತಮ ಮೊತ್ತದತ್ತ ಬಂಗಾಳ

ಅನುಸ್ಟುಪ್ ಮಜುಂದಾರ್ ಶತಕ



ಕರ್ನಾಟಕ ತಂಡದ ಬೌಲರ್ ವಿ. ಕೌಶಿಕ್
ಪ್ರಜಾವಾಣಿ ಚಿತ್ರಗಳು/ಎಸ್‌.ಕೆ. ದಿನೇಶ್

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಇಡೀ ದಿನ ಕರ್ನಾಟಕ ತಂಡಕ್ಕೆ ಅನುಭವಿ ಬೌಲರ್‌ಗಳ ಕೊರತೆಯ ನಡುವೆ ಒಂದಿಷ್ಟು ಸಮಾಧಾನ ತಂದಿದ್ದು ವಾಸುಕಿ ಕೌಶಿಕ್ ಅವರು. ಆದರೆ ಇನ್ನೊಂದು ತುದಿಯಿಂದ ಯುವ ಬೌಲರ್‌ಗಳ ಎಸೆತಗಳನ್ನು ಲೀಲಾಜಾಲವಾಗಿ ಎದುರಿಸಿದ ಬಂಗಾಳ ತಂಡದ ನಾಯಕ ಅನುಸ್ಟುಪ್ ಮಜುಂದಾರ್ ಶತಕ ಸಂಭ್ರಮ ಆಚರಿಸಿದರು.

ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಸಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲಿಯೇ ಕೌಶಿಕ್ ಅವರು ಶುವಾಂ ಡೇ ಅವರ ವಿಕೆಟ್ ಗಳಿಸಿದರು. ಮನೀಷ್ ಪಾಂಡೆ ಪಡೆದ ಕ್ಯಾಚ್‌ಗೆ ಅವರು ನಿರ್ಗಮಿಸಿದರು. ಇದರಿಂದಾಗಿ ಉತ್ತಮ ಆರಂಭದ ನಿರೀಕ್ಷೆ ಆತಿಥೇಯರ ಬಳಗದಲ್ಲಿ ಗರಿಗೆದರಿತು.

ಆದರೆ 16ನೇ ಓವರ್‌ನವರೆಗೂ ರಾಜ್ಯದ ಬೌಲರ್‌ಗಳಿಗೆ ವಿಕೆಟ್ ಒಲಿಯಲಿಲ್ಲ. ಸುದೀಪ್ ಚಟರ್ಜಿ ಮತ್ತು ಸುದೀಪ್ ಕುಮಾರ್ ಘರಾಮಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 21 ರನ್ ಸೇರಿಸಲು 14.5 ಓವರ್ ಆಡಿದರು. ಕೌಶಿಕ್ ಬೌಲಿಂಗ್‌ನಲ್ಲಿ ನಿಕಿನ್ ಜೋಸ್ ಪಡೆದ ಆಕರ್ಷಕ ಕ್ಯಾಚ್‌ಗೆ ಸುದೀಪ್ ಕುಮಾರ್ ಔಟಾದರು. ಇದರೊಂದಿಗೆ ಜೊತೆಯಾಟ ಮುರಿಯಿತು. ಆದರೆ ಕ್ರೀಸ್‌ಗೆ ಬಂದ ನಾಯಕ ಮಜುಂದಾರ್ (101; 164ಎಸೆತ) ಅವರು ಎರಡು ಜೊತೆಯಾಟಗಳನ್ನು ಕಟ್ಟಿದರು. ಅದರಿಂದಾಗಿ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 78 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 249 ರನ್‌ಗಳನ್ನು ಗಳಿಸಲು ಸಾಧ್ಯವಾಯಿತು. ಮಂದಬೆಳಕಿನಿಂದಾಗಿ ಆಟವನ್ನು ಸ್ಥಗಿತಗೊಳಿಸಲಾಯಿತು. ಶಹಬಾಜ್ ಅಹಮದ್ (ಬ್ಯಾಟಿಂಗ್ 54; 103ಎ) ಮತ್ತು ವೃದ್ಧಿಮಾನ್ ಸಹಾ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ.


ಬಂಗಾಳ ತಂಡದ ಅನುಸ್ಟುಪ್ ಮಜುಂದಾರ್ ಶತಕ ಸಂಭ್ರಮ

ನೂರರ ಜೊತೆಯಾಟ

ಘರಾಮಿ ಔಟಾದ ನಂತರ ಕ್ರೀಸ್‌ಗೆ ಬಂದ ಅನುಸ್ಟುಪ್ ಅವರು ವೇಗವಾಗಿ ರನ್ ಗಳಿಸಿದರು. ಇನ್ನೊಂದೆಡೆ ಕ್ರೀಸ್‌ನಲ್ಲಿದ್ದ ಚಟರ್ಜಿ ಮಾತ್ರ ತಾಳ್ಮೆಯ ಬ್ಯಾಟಿಂಗ್ ಮಾಡಿದರು. ಊಟದ ವಿರಾಮಕ್ಕೆ (2ಕ್ಕೆ86) ಇಬ್ಬರು ತಲಾ 37 ರನ್ ಗಳಿಸಿದ್ದರು.

ವಿರಾಮದ ನಂತರವೂ ಇವರಿಬ್ಬರ ಜೊತೆಯಾಟ ಮುಂದುವರಿಯಿತು. ಚಟರ್ಜಿ (55; 120ಎ, 4X5) ಅರ್ಧಶತಕ ಗಳಿಸಿದರು. 100 ರನ್ ಸೇರಿಸಿದ ಈ ಜೊತೆಯಾಟವನ್ನೂ ಮಧ್ಯಮವೇಗಿ ಕೌಶಿಕ್ ಮುರಿದರು. ವಿಕೆಟ್‌ಕೀಪರ್ ಸುಜಯ್ ಸತೇರಿ ಪಡೆದ ಕ್ಯಾಚ್‌ಗೆ ಚಟರ್ಜಿ ಆಟಕ್ಕೆ ತೆರೆ ಬಿತ್ತು.

ಆದರೆ ಅನುಸ್ಟುಪ್ ತಮ್ಮ ಆಟ ಮುಂದುವರಿಸಿದರು. ಅವರಿಗೆ ಶಹಬಾಜ್ ಜೊತೆಗೂಡಿದರು. ಅನುಸ್ಟುಪ್ 124 ನಿಮಿಷದಲ್ಲಿ ಶತಕದ ಗಡಿ ಮುಟ್ಟಿದರು. ಅದಕ್ಕಾಗಿ 157 ಎಸೆತ ಎದುರಿಸಿದರು. 16 ಬೌಂಡರಿಗಳನ್ನು ಚಚ್ಚಿದರು.

ಇದರಿಂದಾಗಿ ಬೌಲರ್‌ಗಳು ಪರದಾಡುವಂತಾಯಿತು. ಅನುಸ್ಟುಪ್ ಮತ್ತು ಶಹಬಾಜ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು.

ಚಹಾ ವಿರಾಮದ ನಂತರದ ಅವಧಿ ಯಲ್ಲಿ ಅನುಸ್ಟುಪ್ ಆಟಕ್ಕೆ ಕಡಿವಾಣ ಹಾಕುವಲ್ಲಿ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಯಶಸ್ವಿಯಾದರು. ಅನುಭವಿ ಸ್ಪಿನ್ನರ್ ಬೀಸಿದ ಎಲ್‌ಬಿಡಬ್ಲ್ಯು ಜಾಲದಲ್ಲಿ ಅನುಸ್ಟುಪ್ ಬಂಧಿಯಾದರು. ಅಸಮಾಧಾನದಿಂದಲೇ ಹೊರ ನಡೆದರು.

ಕ್ರೀಸ್‌ನಲ್ಲಿದ್ದ ಶಹಬಾಜ್ ಇನಿಂಗ್ಸ್ ಕಟ್ಟುವ ಹೊಣೆ ಹೊತ್ತರು. ಅವಿಲಿನ್ ಘೋಷ್ (22 ರನ್) ಜೊತೆಗೆ ಇನಿಂಗ್ಸ್ ಬೆಳೆಸಿದರು. ಘೋಷ್ 2 ಸಿಕ್ಸರ್ ಮತ್ತು 1 ಬೌಂಡರಿ ಕೂಡ ಗಳಿಸಿದರು.

ಈ ಪಂದ್ಯದ ಮೂಲಕ ಪದಾರ್ಪಣೆ ಮಾಡಿದ ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಅವರು ಘೋಷ್ ಅವರನ್ನು ಔಟ್ ಮಾಡಿ ತಮ್ಮ ಚೊಚ್ಚಲ ವಿಕೆಟ್ ಗಳಿಸಿದರು.

ಸ್ಕೋರ್ ಕಾರ್ಡ್

ಬಂಗಾಳ
5ಕ್ಕೆ249 (78 ಓವರ್‌ಗಳಲ್ಲಿ)
ಶಿವಾಂ ಸಿ ಪಾಂಡೆ ಬಿ ಕೌಶಿಕ್ 0 (3ಎ)
ಚಟರ್ಜಿ ಸಿ ಸತೇರಿ ಬಿ ಕೌಶಿಕ್ 55 (120ಎ, 4X5)
ಸುದೀಪ್‌ಕುಮಾರ್ ಸಿ ನಿಕಿನ್ ಬಿ ಕೌಶಿಕ್ 5 (45ಎ)
ಅನುಸ್ಟುಪ್ ಎಲ್‌ಬಿಡಬ್ಲ್ಯು ಬಿ ಶ್ರೇಯಸ್ 101 (164ಎ, 4X16)
ಶಹಬಾಜ್ ಔಟಾಗದೆ 54 (103ಎ, 4X6)
ಘೋಷ್ ಸಿ ಮಯಂಕ್ ಬಿ ಅಭಿಲಾಷ್ 22 (27ಎ, 4X1, 6X2)
ಸಹಾ ಔಟಾಗದೆ 6 (7ಎ, 4X1)
ಇತರೆ: 6 (ಬೈ 2, ಲೆಗ್‌ಬೈ 2, ವೈಡ್ 1, ನೋಬಾಲ್ 1)
ವಿಕೆಟ್ ಪತನ: 1–0 (ಶಿವಾಂ ಡೇ; 0.3), 2–21 (ಸುದೀಪ್‌ಕುಮಾರ್ ಘರಾಮಿ; 15.2), 3–121 (ಸುದೀಪ್ ಚಟರ್ಜಿ; 42.1), 4–201 (ಅನುಸ್ಟುಪ್ ಮಜುಂದಾರ್;67.4), 5–242 (ಅವಿಲಿನ್ ಘೋಷ್; 76.2)
ಬೌಲಿಂಗ್
ವಿ. ಕೌಶಿಕ್ 18–9–29–3, ಅಭಿಲಾಷ್ ಶೆಟ್ಟಿ 15–4–52–1, ವಿದ್ಯಾಧರ ಪಾಟೀಲ 14–2–55–0, ಶ್ರೇಯಸ್ ಗೋಪಾಲ್ 19–1–66–1, ಹಾರ್ದಿಕ್ ರಾಜ್ 12–1–43–0

ಆಸ್ಟ್ರೇಲಿಯಾ ಎ ವಿರುದ್ಧ ‘ಟೆಸ್ಟ್’ ಇಂದಿನಿಂದ

ರಾಹುಲ್ ಆಟದತ್ತ ಚಿತ್ತ

ಮೆಲ್ಬರ್ನ್ (ಪಿಟಿಐ): ಭಾರತ ಎ ತಂಡ, ಗುರುವಾರ ಇಲ್ಲಿ ಆರಂಭವಾಗುವ ನಾಲ್ಕು ದಿನಗಳ ಎರಡನೇ ಕ್ರಿಕೆಟ್ ‘ಟೆಸ್ಟ್’ ಪಂದ್ಯದಲ್ಲಿ ಆಸ್ಟ್ರೇಲಿಯಾ ಎ ತಂಡವನ್ನು ಎದುರಿಸಲಿದ್ದು, ಅನುಭವಿ ಕೆ.ಎಲ್. ರಾಹುಲ್ ಅವರಿಗೆ ತಮ್ಮ ಬ್ಯಾಟಿಂಗ್ ಸಾಮರ್ಥ್ಯ ತೋರಲು ಉತ್ತಮ ಅವಕಾಶ ಒದಗಿದೆ.

ಈ ಪಂದ್ಯದಲ್ಲಿ ಕನ್ನಡಿಗ ಆಟಗಾರನ ಫಾರ್ಮ್ ಮೇಲೆ ಚಿತ್ತ ನೆಟ್ಟಿದೆ. ತಂಡದ ಚಿಂತಕರ ಚಾವಡಿಯ ಜೊತೆ ಸಮಾಲೋಚನೆ ನಡೆಸಿದ ಆಯ್ಕೆಗಾರರು ರಾಹುಲ್ ಮತ್ತು ರಿಸರ್ವ್ ವಿಕೆಟ್ ಕೀಪರ್ ಧ್ರುವ್ ಜುರೇಲ್ ಅವರನ್ನು ಭಾರತ ‘ಎ’ ತಂಡದ ಎರಡನೇ ಟೆಸ್ಟ್ ಪಂದ್ಯಕ್ಕೆ ಕಳುಹಿಸಿದ್ದಾರೆ. ರಾಹುಲ್ ಅವರನ್ನು ತವರಿನಲ್ಲಿ ನಡೆದ ನ್ಯೂಜಿಲೆಂಡ್ ಟೆಸ್ಟ್ ಸರಣಿಯ ಮೊದಲ ಪಂದ್ಯದ ನಂತರ ತಂಡದಿಂದ ಕೈಬಿಡಲಾಗಿತ್ತು.

ಆಸ್ಟ್ರೇಲಿಯಾ ತಂಡದ ಮೀಸಲು ವೇಗಿಗಳಲ್ಲಿ ಒಬ್ಬರಾದ ಸ್ಕಾಟ್ ಬೋಲೆಂಡ್ ಅವರ ದಾಳಿಯೆದುರು ಅಭಿಮನ್ಯು ಈಶ್ವರನ್, ಋತುರಾಜ್ ಗಾಯಕವಾಡ್, ಬಿ.ಸಾಯಿ ಸುದರ್ಶನ್ ಮತ್ತು ದೇವದತ್ತ ಪಡಿಕ್ಕಲ್ ಅಂಥ ಆಟಗಾರರು ಹೇಗೆ ಆಡುತ್ತಾರೆ ಎಂಬುದು ಕುತೂಹಲಕರ.


ಕೆ.ಎಲ್‌.ರಾಹುಲ್

‘ಎ’ ತಂಡದ ಆಟಗಾರರಲ್ಲಿ ರಾಹುಲ್ ಅವರಿಗೆ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯಲ್ಲಿ ಆಡುವ ಸಾಧ್ಯತೆ ಹೆಚ್ಚು ಇರುವುದರಿಂದ ಅವರ ಪ್ರದರ್ಶನದ ಮೇಲೆ ಆಯ್ಕೆಗಾರರ ಗಮನವಿದೆ. 22ರಿಂದ ಪರ್ತ್‌ನಲ್ಲಿ ಭಾರತ– ಆಸ್ಟ್ರೇಲಿಯಾ ಮಧ್ಯೆ ಮೊದಲ ಟೆಸ್ಟ್ ಪಂದ್ಯ ನಡೆಯಲಿದೆ.

ಮೆಲ್ಬರ್ನ್‌ನಲ್ಲಿ ಬುಧವಾರ ತಾಲೀಮಿನ ವೇಳೆ ರಾಹುಲ್ ಉತ್ತಮ ಲಯಲ್ಲಿದ್ದಂತೆ ಕಂಡರು. ಈಶ್ವರನ್ ಮತ್ತು ಋತುರಾಜ್ ಇನಿಂಗ್ಸ್ ಆರಂಭಿಸುವ ನಿರೀಕ್ಷೆಯಿರುವ ಕಾರಣ, ರಾಹುಲ್ ಐದನೇ ಅಥವಾ ಆರನೇ ಕ್ರಮಾಂಕದಲ್ಲಿ ಆಡುವ ಸಾಧ್ಯತೆಯಿದೆ. ಭಾರತ ತಂಡಕ್ಕೆ ಆಯ್ಕೆಯಾದರೂ ಅವರು ಇದೇ ಕ್ರಮಾಂಕದಲ್ಲಿ ಆಡುವ ಸಾಧ್ಯತೆ ಹೆಚ್ಚು.

ಮೊದಲ ‘ಟೆಸ್ಟ್’ನಲ್ಲಿ ಆಸ್ಟ್ರೇಲಿಯಾ ‘ಎ’ ಏಳು ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು. ರಾಹುಲ್ ಅವರು ಬಾಬಾ ಇಂದ್ರಜಿತ್ ಸ್ಥಾನದಲ್ಲಿ ಆಡಲಿದ್ದಾರೆ. ಇಂದ್ರಜಿತ್ ಮೊದಲ ಪಂದ್ಯದಲ್ಲಿ 9 ಮತ್ತು 6 ರನ್ ಗಳಿಸಿದ್ದರು. ಜುರೆಲ್ ಅವರು ಇಶಾನ್ ಕಿಶನ್ ಸ್ಥಾನದಲ್ಲಿ ಅವಕಾಶ ಪಡೆಯಲಿದ್ದಾರೆ. ಮೊದಲ ಪಂದ್ಯದ ಕೊನೆಯ ದಿನ ಚೆಂಡು ಬದಲಾವಣೆ ಮಾಡಿದ್ದ ಪ್ರಕರಣದಲ್ಲಿ ಇಶಾನ್ ಅಂಪೈರ್ ಜೊತೆ ವಾಗ್ವಾದದಲ್ಲಿ ತೊಡಗಿದ್ದರು.

ನವದೀಪ್ ಸೈನಿ ಬದಲು ಎಡಗೈ ವೇಗಿ ಖಲೀಲ್ ಅಹ್ಮದ್ ಮತ್ತು ಮಾನವ್ ಸುತಾರ್ ಬದಲು ತನುಷ್ ಕೋಟ್ಯಾನ್ ಅವಕಾಶ ಪಡೆಯಲಿದ್ದಾರೆ.

ಕಿರಣ್‌ಗೆ ಜಯ

ಇಕ್ಸಾನ್ ಸಿಟಿ (ಕೊರಿಯಾ), (ಪಿಟಿಐ): ಭಾರತದ ಕಿರಣ್ ಜಾರ್ಜ್ ದಿಟ್ಟ ಆಟವಾಡಿ ಮೂರು ಗೇಮ್‌ಗಳ ಪಂದ್ಯ ಗೆದ್ದು ಕೊರಿಯಾ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.

24 ವರ್ಷ ವಯಸ್ಸಿನ ಕಿರಣ್ ಬುಧವಾರ 57 ನಿಮಿಷಗಳವರೆಗೆ ಬೆಳೆದ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿ 15–21, 21–15, 21–15ರಿಂದ ವಿಯೆಟ್ನಾಮಿನ ಕುವಾನ್ ಲಿನ್ ಕುವೊ ಅವರನ್ನು ಹಿಮ್ಮೆಟ್ಟಿಸಿದರು.

ವಿಶ್ವ ಕ್ರಮಾಂಕದಲ್ಲಿ 44ನೇ ಸ್ಥಾನದಲ್ಲಿರುವ ಕಿರಣ್, ಈ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಭಾರತದ ಏಕೈಕ ಆಟಗಾರರಾಗಿದ್ದು, 2ನೇ ಸುತ್ತಿನಲ್ಲಿ ಚೀನಾ ತೈಪಿಯ ಚಿ ಯು ಜೆನ್ ಅವರನ್ನು ಎದುರಿಸಲಿದ್ದಾರೆ.

ಕೋಚ್‌ಗೆ ಭಾವನಾತ್ಮಕ ವಿದಾಯ ಹೇಳಿದ ನೀರಜ್

ನವದೆಹಲಿ (ಪಿಟಿಐ): ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ತಮ್ಮ ಜರ್ಮನಿಯ ಕೋಚ್ ಕ್ಲಾಸ್ ಬರ್ಟೋನೀಟ್ಜ್ ಅವರಿಗೆ ಬುಧವಾರ ಭಾವನಾತ್ಮಕ ವಿದಾಯ ಹೇಳಿದರು. ಕೌಟುಂಬಿಕ ಬದ್ಧತೆಯ ಕಾರಣ ನೀಡಿ ಬರ್ಟೋನೀಟ್ಜ್ ಅವರು ಐದು ವರ್ಷಗಳ ಒಪ್ಪಂದ ಕೊನೆಗೊಳಿಸಿದ್ದಾರೆ.

ನೀರಜ್ ಅವರು ಟೋಕಿಯೊ ಒಲಿಂಪಿಕ್ಸ್ ಚಿನ್ನ, ಈ ವರ್ಷ ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ಸೇರಿದಂತೆ ಹಲವು ಪದಕಗಳನ್ನು ಗೆಲ್ಲುವಲ್ಲಿ 75 ವರ್ಷ ವಯಸ್ಸಿನ ಕೋಚ್ ಅವರು ಮಾರ್ಗದರ್ಶನ ನೀಡಿದ್ದರು.

‘ಎಲ್ಲಿಂದ ಆರಂಭಿಸಬೇಕೆಂದು ಗೊತ್ತಿಲ್ಲದೇ ಇದನ್ನು ಬರೆದಿದ್ದೇನೆ. ನನಗೆ ನೀವು ಮಾರ್ಗದರ್ಶಕನಿಗಿಂತ ಹೆಚ್ಚಿನ ಸ್ಥಾನದಲ್ಲಿದ್ದವರು. ನೀವು ಕಲಿಸಿದ ಎಲ್ಲವೂ ಅಥ್ಲೀಟ್ ಮತ್ತು ವ್ಯಕ್ತಿಯಾಗಿ ನನಗೆ ನೆರವಾಗಿದೆ. ಪ್ರತಿ ಸ್ಪರ್ಧೆಗಳಲ್ಲಿ ನಾನು ಮಾನಸಿಕ ಮತ್ತು ದೈಹಿಕವಾಗಿ ಸಜ್ಜಾಗುವಂತೆ ನೋಡಿಕೊಂಡಿದ್ದೀರಿ’ ಎಂದು ಚೋಪ್ರಾ ಎಕ್ಸ್‌ನಲ್ಲಿ ಬರೆದಿದ್ದಾರೆ.

‘ನಿಮ್ಮ ನಗು ಮತ್ತು ತಮಾಷೆಯ ಮಾತುಗಳು ಮನಸ್ಸಿನಿಂದ ಎಂದಿಗೂ ಮರೆಯಾಗುವುದಿಲ್ಲ’ ಎಂದು ಭಾವನಾತ್ಮಕವಾಗಿ ಬರೆದಿದ್ದಾರೆ.

ಐಪಿಎಲ್ ಮೆಗಾ ಬಿಡ್‌ಗೆ ಡ್ರಾಕಾ, ನೇತ್ರಾವಲ್ಕರ್

ಸೌದಿ ಅರೇಬಿಯಾದ ಜೆದ್ದಾದಲ್ಲಿ 24, 25ರಂದು ಹರಾಜು • ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಸ್ಟೋಕ್ಸ್ ಹೆಸರಿಲ್ಲ

ಮುಂಬೈ (ಪಿಟಿಐ): ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರ ಹೆಸರು ಈ ಬಾರಿಯ ಐಪಿಎಲ್ ಬಿಡ್ ಆಗಲಿರುವ ಆಟಗಾರರ ಪಟ್ಟಿಯಲ್ಲಿ ಕಾಣಿಸಿಲ್ಲ. ಆದರೆ ಅವರ ಮಾಜಿ ಸಹೋದ್ಯೋಗಿ ಜೇಮ್ಸ್ ಆ್ಯಂಡರ್ಸನ್, ಅಮೆರಿಕದ ವೇಗದ ಬೌಲರ್ ಸೌರಭ್ ನೇತ್ರಾವಲ್ಕರ್, ಇಟಲಿಯ ವೇಗಿ ಬೌಲರ್ ಥಾಮಸ್ ಡ್ರಾಕಾ ಅವರು ಹರಾಜಿಗೆ ಲಭ್ಯವಿರುವ 1,574 ಆಟಗಾರರ ಪಟ್ಟಿಯಲ್ಲಿದ್ದಾರೆ.

ಸೌದಿ ಅರೇಬಿಯಾದ ಜೆದ್ದಾದಲ್ಲಿ ಇದೇ ತಿಂಗಳ 24 ಮತ್ತು 25ರಂದು ಮೆಗಾ ಹರಾಜು ನಡೆಯಲಿದೆ.

ಫ್ರಾಂಚೈಸಿಗಳು ತಮ್ಮ ಕಡೆಯಿಂದ ಅನಿಸಿಕೆಗಳನ್ನು ಕೊಟ್ಟ ನಂತರ, ಈ ಪಟ್ಟಿಯಲ್ಲಿರುವ ಆಟಗಾರರ ಸಂಖ್ಯೆ ಕಡಿತಗೊಳ್ಳಲಿದೆ. ಪಟ್ಟಿಯಲ್ಲಿ ಭಾರತ ತಂಡದಲ್ಲಿರುವ ಪ್ರಮುಖರಾದ ರಿಷಭ್ ಪಂತ್, ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್,


ಸೌರಭ್ ನೇತ್ರಾವಲ್ಕರ್

ಆರ್.ಅಶ್ವಿನ್ ಮತ್ತು ಯಜುವೇಂದ್ರ ಚಾಹಲ್ ಮೊದಲಾದವರು ಇದ್ದಾರೆ. ಈ ಐದೂ ಮಂದಿ ₹2 ಕೋಟಿ ಮೂಲಬೆಲೆಯನ್ನು ಹೊಂದಿದ್ದಾರೆ.

ಕಳೆದ ನವೆಂಬರ್‌ನಿಂದ ಗಾಯಾಳಾಗಿರುವ ವೇಗದ ಬೌಲರ್ ಮೊಹಮ್ಮದ್ ಶಮಿ ಅವರನ್ನು ಗುಜರಾತ್ ಜೈಂಟ್ಸ್ ತಂಡದಿಂದ ಮುಕ್ತಗೊಳಿಸಿದ್ದು, ಅವರೂ ₹2ಕೋಟಿ ಮೂಲ ಬೆಲೆ ಹೊಂದಿದ್ದಾರೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಸಹ ಇಷ್ಟೇ ಮೌಲ್ಯ ಹೊಂದಿದ್ದಾರೆ.

ಗರಿಷ್ಠ ₹2 ಕೋಟಿ ಮೂಲ ಬೆಲೆ ಹೊಂದಿರುವ ಆಟಗಾರರಲ್ಲಿ ಖಲೀಲ್ ಅಹ್ಮದ್, ಮುಕೇಶ್ ಕುಮಾರ್, ವೆಂಕಟೇಶ ಅಯ್ಯರ್, ಆವೇಶ್ ಖಾನ್, ದೀಪಕ್ ಚಾಹರ್, ಇಶಾನ್ ಕಿಶನ್ ಮತ್ತು ಭುವನೇಶ್ವರ ಕುಮಾರ್ ಇದ್ದಾರೆ.

ಈ ಪಟ್ಟಿಯಲ್ಲಿ ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ದೇವದತ್ತ ಪಡಿಕ್ಕಲ್, ಕೃಣಾಲ್ ಪಾಂಡ್ಯ, ಹರ್ಷಲ್ ಪಟೇಲ್, ಪ್ರಸಿದ್ಧ ಕೃಷ್ಣ, ಟಿ.ನಟರಾಜನ್, ವಾಷಿಂಗ್ಟನ್ ಸುಂದರ್ ಮತ್ತು ಉಮೇಶ್ ಯಾದವ್ ಅವರೂ ಇದ್ದಾರೆ.

ಈ ಹಿಂದಿನ ಐಪಿಎಲ್ ಹರಾಜಿನಲ್ಲಿ ‘ಅನ್‌ಸೋಲ್ಡ್’ ಆಗಿದ್ದ ಸರ್ಫರಾಜ್ ಖಾನ್ ಮತ್ತು ಪೃಥ್ವಿ ಶಾ ಇಬ್ಬರೂ ತಮ್ಮನ್ನು ₹75 ಲಕ್ಷ ಮೂಲಬೆಲೆಗೆ ನೋಂದಾಯಿಸಿಕೊಂಡಿದ್ದಾರೆ.

ಕಾರ್ಯಭಾರ ಒತ್ತಡದ ಭಾಗವಾಗಿ ಮತ್ತು ಫಿಟ್ನೆಸ್ ಕಾಪಾಡಿಕೊಳ್ಳಲು ಸ್ಟೋಕ್ಸ್ ಅವರು 2025ರ ಆವೃತ್ತಿಯಿಂದಲೂ ಹೊರಗುಳಿದಿದ್ದಾರೆ.

ಜಿಮ್ಮಿ ಆ್ಯಂಡರ್ಸನ್‌ಗೆ ಮೊದಲ ಯತ್ನ

42 ವರ್ಷ ವಯಸ್ಸಿನ ಆ್ಯಂಡರ್ಸನ್ ಈ ವರ್ಷದ ಆರಂಭದಲ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದು ಈ ಬಾರಿ ಬಿಡ್‌ಗೊಳಗಾವ ಆಟಗಾರರ ಯಾದಿಯಲ್ಲಿದ್ದಾರೆ. ಅವರು ಕೊನೆಯ ಬಾರಿ ಟಿ20 ಆಡಿದ್ದು 2014ರಲ್ಲಿ. ಹಿಂದೆಂದೂ ಅವರು ಫ್ರಾಂಚೈಸಿ ಟಿ20 ಲೀಗ್‌ನಲ್ಲಿ ಆಡಿಲ್ಲ. ಅವರ ಮೂಲಬೆಲೆ ₹1.25 ಕೋಟಿ.

ಅಮೆರಿಕ ತಂಡದ ಪರ ಟಿ20 ವಿಶ್ವಕಪ್‌ನಲ್ಲಿ ಮಿಂಚಿದ್ದ ಭಾರತ ಸಂಜಾತ ಸೌರಭ್ ನೇತ್ರಾವಲ್ಕರ್ ಅವರೂ ಪಟ್ಟಿಯಲ್ಲಿದ್ದಾರೆ. ಒರಾಕಲ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅವರ ಮೂಲ ಬೆಲೆ ₹30 ಲಕ್ಷ.

ಕಳೆದ ವರ್ಷ ಅತಿ ಹೆಚ್ಚು ಮೌಲ್ಯ (₹24.50 ಕೋಟಿ) ಪಡೆದಿದ್ದ ಮಿಚೆಲ್ ಸ್ಟಾರ್ಕ್ ಅವರು ₹2 ಕೋಟಿ ಮೂಲಬೆಲೆ ಹೊಂದಿದ್ದಾರೆ. ಹೋದ ಸಲ ಅವರು ಕೋಲ್ಕತ್ತ ತಂಡದಲ್ಲಿದ್ದರು. ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್ ಕೂಡ ಇದೇ ಮೂಲ ಬೆಲೆ ಹೊಂದಿದ್ದಾರೆ.

ಹರಾಜಿಗೆ ಮೊದಲ ಸಲ ಇಟಲಿ ಬೌಲರ್!

ಮಧ್ಯಮ ವೇಗಿ ಥಾಮಸ್ ಡ್ರಾಕಾ ಅವರು ಐಪಿಎಲ್ ಬಿಡ್‌ಗೆ ನೋಂದಾಯಿಸಿಕೊಂಡ ಇಟಲಿಯ ಮೊದಲ ಕ್ರಿಕೆಟಿಗ ಎಂಬ ಗೌರವಕ್ಕೆ ಪಾತ್ರರಾದರು. ಈ ವರ್ಷದ ಜೂನ್‌ನಲ್ಲಿ ಪದಾರ್ಪಣೆ ಮಾಡಿದ ನಂತರ 24 ವರ್ಷ ವಯಸ್ಸಿನ ಈ ವೇಗದ ಬೌಲರ್ ನಾಲ್ಕು ಟಿ20 ಪಂದ್ಯಗಳನ್ನು ಆಡಿದ್ದಾರೆ.

ಕೆನಡಾದಲ್ಲಿ ನಡೆದ ಗ್ಲೋಬಲ್ ಟಿ20 ಟೂರ್ನಿಯಲ್ಲಿ ಅವರ ಬೌಲಿಂಗ್ ಗಮನ ಸೆಳೆದಿತ್ತು. 10.63 ಸರಾಸರಿಯಲ್ಲಿ 11 ವಿಕೆಟ್‌ಗಳೊಡನೆ ಜಂಟಿಯಾಗಿ ಎರಡನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿದ್ದರು. 6.88ರ ಇಕಾನಮಿ ಹೊಂದಿದ್ದರು. ಡ್ರಾಕಾ ₹30 ಲಕ್ಷ ಮೂಲ ಬೆಲೆ ಹೊಂದಿದ್ದಾರೆ.

ಫ್ರ್ಯಾಂಚೈಸಿಗಳ ಪೈಕಿ ಪಂಜಾಬ್ ಕಿಂಗ್ಸ್ ₹120 ಕೋಟಿಯೊಡನೆ ಖರೀದಿಗೆ ಅತಿ ಹೆಚ್ಚು ಮೊತ್ತ ಹೊಂದಿದೆ. ಆರ್‌ಸಿಬಿ ಬಳಿ ₹83 ಕೋಟಿ ಮೊತ್ತ ಉಳಿದಿದೆ. ಡೆಲ್ಲಿ ಕ್ಯಾಪಿಟಲ್ಸ್ (₹73 ಕೋಟಿ) ನಂತರದ ಸ್ಥಾನದಲ್ಲಿದೆ.

ಐಸಿಸಿ ಟೆಸ್ಟ್ ರ‍್ಯಾಂಕಿಂಗ್

6ನೇ ಸ್ಥಾನಕ್ಕೇರಿದ ಪಂತ್

ದುಬೈ (ಪಿಟಿಐ): ನ್ಯೂಜಿಲೆಂಡ್ ವಿರುದ್ಧ ಮುಂಬೈನಲ್ಲಿ ಕಳೆದ ವಾರ ನಡೆದ ಟೆಸ್ಟ್ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ ಕಾರಣ ಭಾರತದ ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರು ಐಸಿಸಿ ಪುರುಷರ ಟೆಸ್ಟ್ ಬ್ಯಾಟರ್‌ಗಳ ಕ್ರಮಾಂಕಪಟ್ಟಿಯಲ್ಲಿ ಐದು ಸ್ಥಾನ ಬಡ್ತಿ ಪಡೆದು ಆರನೇ ಸ್ಥಾನಕ್ಕೆ ಏರಿದ್ದಾರೆ.

ಆ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಎಡಗೈ ಬ್ಯಾಟರ್ ಪಂತ್ ಅರ್ಧ ಶತಕ ಗಳಿಸಿದ್ದರು. ಅವರು ತಮ್ಮ ಜೀವನಶ್ರೇಷ್ಠ ಐದನೇ ಸ್ಥಾನ ತಲುಪುವ ಸನಿಹ ಬಂದಿದ್ದಾರೆ. 2022ರ ಜುಲೈನಲ್ಲಿ ಈ ಆಕ್ರಮಣಕಾರಿ ಆಟಗಾರ ಐದನೇ ಸ್ಥಾನಕ್ಕೇರಿದ್ದರು.

ಯುವ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ನಾಲ್ಕನೇ ಸ್ಥಾನದಲ್ಲಿದ್ದಾರೆ. ಸರಣಿಯಲ್ಲಿ ನ್ಯೂಜಿಲೆಂಡ್ ಪರ ಉತ್ತಮ ಪ್ರದರ್ಶನ ನೀಡಿದ ಡೇರಿಲ್ ಮಿಚೆಲ್‌ಗೂ ಬಡ್ತಿ ದೊರಕಿದ್ದು, ಅಗ್ರ 10ರ ಪಟ್ಟಿಯ ಫಲಾನುಭವಿಯಾಗಿದ್ದಾರೆ.

ಎಂಟು ಸ್ಥಾನ ಜಿಗಿತ ಕಂಡಿರುವ ಮಿಚೆಲ್ ಈಗ ಏಳನೇ ಸ್ಥಾನದಲ್ಲಿ ನೆಲೆಸಿದ್ದಾರೆ. ಅವರು ಮುಂಬೈ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 82 ರನ್ ಹೊಡೆದಿದ್ದರು.


ಇಂಗ್ಲೆಂಡ್‌ನ ಜೋ ರೂಟ್ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್, ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್, ಜೈಸ್ವಾಲ್ ಎರಡರಿಂದ ನಾಲ್ಕರವರೆಗಿನ ಸ್ಥಾನಗಳನ್ನು ಪಡೆದಿದ್ದಾರೆ.

ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ರವೀಂದ್ರ ಜಡೇಜ ಅವರು ಎರಡು ಸ್ಥಾನ ಬಡ್ತಿ ಪಡೆದು ಆರನೇ ಕ್ರಮಾಂಕಕ್ಕೆ ಏರಿದ್ದಾರೆ. ಅವರು ಕೊನೆಯ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಐದು ವಿಕೆಟ್‌ಗಳ ಗೊಂಚಲು ಪಡೆದಿದ್ದರು.

ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ, ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್, ಜಸ್‌ಪ್ರೀತ್ ಬೂಮ್ರಾ, ಪ್ಯಾಟ್ ಕಮಿನ್ಸ್ ಮತ್ತು ರವಿಚಂದ್ರನ್ ಅಶ್ವಿನ್ ಕ್ರಮವಾಗಿ ಮೊದಲ ಐದು ಸ್ಥಾನಗಳಲ್ಲಿದ್ದಾರೆ.

ಮೂವರು ಪ್ರತಿಭೆಗಳಿಗೆ ಅವಕಾಶ ಸಿಗಲಿ: ಕುಂಬ್ಳೆ

ಮುಂಬೈ (ಪಿಟಿಐ): ಯಶ್ ದಯಾಳ್, ವೈಶಾಖ ವಿಜಯಕುಮಾರ್ ಮತ್ತು ರಮಣದೀಪ್ ಸಿಂಗ್ ಅವರು ದೇಶಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಅವರ ಕಠಿಣ ಶ್ರಮವನ್ನು ಗುರುತಿಸಿ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಉತ್ತಮ ಅವಕಾಶಗಳನ್ನು ನೀಡಬೇಕು ಎಂದು ಕ್ರಿಕೆಟಿಗ ಅನಿಲ್ ಕುಂಬ್ಳೆ ಹೇಳಿದ್ದಾರೆ.


ವೈಶಾಖ

ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ಯುವ ತಂಡವು ಇದೇ ಶುಕ್ರವಾರದಿಂದ ದಕ್ಷಿಣ ಆಫ್ರಿಕಾದಲ್ಲಿ ನಾಲ್ಕು ಟಿ20 ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಈ ಬಳಗಕ್ಕೆ ವಿವಿಎಸ್ ಲಕ್ಷ್ಮಣ್ ಅವರು ಹಂಗಾಮಿ ಕೋಚ್ ಆಗಿದ್ದಾರೆ.

‘ಈ ಮೂವರು ಪ್ರತಿಭಾನ್ವಿತರಿಗೆ ತಮ್ಮ ಸಾಮರ್ಥ್ಯಕ್ಕೆ ತಕ್ಕ ಅವಕಾಶವನ್ನು ಭಾರತ ತಂಡವು ನೀಡುವ ವಿಶ್ವಾಸ ನನಗಿದೆ. ಏಕೆಂದರೆ ಅವರೆಲ್ಲರೂ ದೇಶಿ ಕ್ರಿಕೆಟ್‌ನಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ’ ಎಂದು ಕುಂಬ್ಳೆ ಅವರು ಜಿಯೊ ಸಿನೆಮಾದ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

‘ಐಪಿಎಲ್ ಟೂರ್ನಿಯ ಪಂದ್ಯವೊಂದರಲ್ಲಿ ಯಶ್ ದಯಾಳ್ ಅವರ ಒಂದೇ ಓವರ್‌ನಲ್ಲಿ ರಿಂಕು ಸಿಂಗ್ ಐದು ಸಿಕ್ಸರ್ ಸಿಡಿಸಿದ್ದರು. ಅದರ ನಂತರವೂ ಯಶ್ ಅವರು ಲಯಕ್ಕೆ ಮರಳಿದರು. ಇದು ಅವರ ಛಲ ಮತ್ತು ಗಟ್ಟಿತನವನ್ನು ತೋರಿಸುತ್ತದೆ. ಅವರಿಂದ ಉತ್ತಮವಾದದ್ದನ್ನು ನಿರೀಕ್ಷಿಸಬಹುದು’ ಎಂದು ಕುಂಬ್ಳೆ ಹೇಳಿದ್ದಾರೆ.

‘ವೈಶಾಖ ನಿಜಕ್ಕೂ ಉತ್ತಮ ಆಟಗಾರ. ದೇಶಿ ಟೂರ್ನಿಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದಲ್ಲಿ ಅವರಿಗೆ ಹೆಚ್ಚು ಅವಕಾಶಗಳು ಸಿಗದಿರುವುದು ದುರದೃಷ್ಟಕರ. ಅವರನ್ನು ತಂಡವು ರಿಟೇನ್ ಮಾಡದೇ ಇರುವುದು ಕೂಡ ನನಗೆ ಅಚ್ಚರಿ ಮೂಡಿಸಿದೆ. ರಮಣದೀಪ್ ಸಿಂಗ್ ಅವರು ಐಪಿಎಲ್‌ನಲ್ಲಿ ಉತ್ತಮ ಬ್ಯಾಟರ್. ಒಂದು ಓವರ್‌ನಲ್ಲಿ ಮೂರ್ನಾಲ್ಕು ಎಸೆತಗಳನ್ನು ದಿಟ್ಟವಾಗಿ ಹೊಡೆಯುವ ಸಾಮರ್ಥ್ಯವಿರುವ ಆಟಗಾರ’ ಎಂದು ಕುಂಬ್ಳೆ ಹೇಳಿದ್ದಾರೆ.

ಅರೋನಿಯನ್ ಜೊತೆ ಅರ್ಜುನ್ ಡ್ರಾ

ಚೆನ್ನೈ (ಪಿಟಿಐ): ಭಾರತದ ಅರ್ಜುನ್ ಇರಿಗೇಶಿ, ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಬುಧವಾರ ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಲೆವೊನ್ ಅರೋನಿಯನ್ ಜೊತೆ ಡ್ರಾ ಮಾಡಿಕೊಳ್ಳುವ ಮೂಲಕ ಉತ್ತಮ ಆರಂಭ ಮುಂದುವರಿಸಿದರು.

ಅವರು ಮೊದಲ ಸುತ್ತಿನಲ್ಲಿ ಸ್ವದೇಶದ ವಿದಿತ್ ಗುಜರಾತಿ ಅವರನ್ನು ಸೋಲಿಸಿದ್ದರು. ಭಾರತದ ಇನ್ನೊಬ್ಬ ಜಿಎಂ ಅರವಿಂದ ಚಿದಂಬರಮ್ ಇನ್ನೊಂದು ಪಂದ್ಯದಲ್ಲಿ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ಡ್ರಾ ಮಾಡಿಕೊಂಡರು.

ಇರಾನ್‌ನ ಅಮಿನ್ ತಬಾತಬೇಯಿ, ಸರ್ಬಿಯಾದ ಅಲೆಕ್ಸಿ ಸರನಾ ಮೇಲೆ ಗೆಲುವು ಪಡೆದರು. ಪರ್ಹಾಮ್ ಮಘಸೂಡ್ಲೂ, ವಿದಿತ್ ಅವರನ್ನು ಮಣಿಸಿದರು. ಇರಾನ್‌ನ ಪರ್ಹಾಮ್‌ಗೆ ಇದು ಮೊದಲ ಜಯ. ಮೊದಲ ಸುತ್ತಿನಲ್ಲಿ ಲಗ್ರಾವ್ ಎದುರು ಸೋತಿದ್ದರು.

ಚೆಸ್ ಉಚಿತ ತರಬೇತಿ

ಶಿವಮೊಗ್ಗ: ನಗರದ ಯಾದವ್ ಸ್ಕೂಲ್ ಆಫ್ ಚೆಸ್ ವತಿಯಿಂದ ನವೆಂಬರ್ 11 ರಿಂದ ಪ್ರತಿ ಸೋಮವಾರ– ಮಂಗಳ ವಾರಗಳಂದು ರಾತ್ರಿ 7.30ರಿಂದ 8.30ರವರೆಗೆ ಒಟ್ಟು 10 ದಿನಗಳವರೆಗೆ ಉಚಿತವಾಗಿ ಚೆಸ್ ತರಬೇತಿ ನೀಡಲಾಗುವುದು.

ಮಾಹಿತಿಗೆ ಪ್ರಾಣೇಶ್ ಯಾದವ್ (ಮೊ: 9242401702/ 08182 489179) ಸಂಪರ್ಕಿಸಬಹುದು.

ಪ್ರೊ ಕಬಡ್ಡಿ: ದೇವಾಂಕ್ ಹೋರಾಟಕ್ಕೆ ಸಿಗದ ಫಲ, ಪೈರೇಟ್ಸ್ ಪರಾಜಯ

ಅಜಿತ್ ಮಿಂಚು, ಮುಂಬಾಗೆ ಜಯ

ಹೈದರಾಬಾದ್: ಜಿದ್ದಾಜಿದ್ದಿಯ ಪಂದ್ಯದ ಕೊನೆಯ ಕ್ಷಣಗಳನ್ನು ಸಮರ್ಥವಾಗಿ ನಿಭಾಯಿಸಿದ ಯು-ಮುಂಬಾ ತಂಡ ಎರಡು ಅಂಕಗಳಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿ, ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ನಾಲ್ಕನೇ ಜಯ ದಾಖಲಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮೊದಲ ಪಂದ್ಯದಲ್ಲಿ ಮುಂಬಾ ತಂಡವು 42-40 ಅಂಕಗಳಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು. ಪ್ರಬಲ ಪೈಪೋಟಿ ನೀಡಿದ ಪಟ್ನಾ ಹ್ಯಾಟ್ರಿಕ್ ಗೆಲುವಿನ ಅವಕಾಶವನ್ನು ಕಳೆದುಕೊಂಡಿತು. ವಿರಾಮದ ವೇಳೆ ಮುಂಬಾ 24–21ರಲ್ಲಿ ಮುಂದಿತ್ತು.

ಪಂದ್ಯದ ಕೊನೆಯ ನಿಮಿಷದಲ್ಲಿ ಪಟ್ನಾ ತಂಡವನ್ನು ಆಲೌಟ್ ಮಾಡಿದ್ದು, ಮುಂಬಾ ಗೆಲುವಿಗೆ ಸಹಕಾರಿಯಾಯಿತು. ಅದುವರೆಗೂ ಪಟ್ನಾ ಮೇಲುಗೈ ಸಾಧಿಸಿ ಗೆಲುವಿನ ಅಂಚಿನಲ್ಲಿತ್ತು. ಆದರೆ ಅಂತಿಮ ಕ್ಷಣದ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗಲಿಲ್ಲ.

ಪಟ್ನಾ ಪರ ರೇಡರ್ ದೇವಾಂಕ್ (15 ಅಂಕ), ಲೆಫ್ಟ್ ರೇಡರ್ ಆಯಾನ್ (8 ಅಂಕ) ಮಿಂಚಿದರೆ, ಯು ಮುಂಬಾ ಪರ ಅಜಿತ್ ಚವಾಣ್ (19 ಅಂಕ) ಏಕಾಂಗಿಯಾಗಿ ಹೋರಾಟ ನಡೆಸಿ ಗೆಲುವಿನ ರೂವಾರಿಯೆನಿಸಿದರು. ಐದು ಅಂಕ ಗಳಿಸಿದ ಮಂಜೀತ್ ಗೆಲುವಿಗೆ ಕೊಡುಗೆ ನೀಡಿದರು.


ಪಟ್ನಾ ಪೈರೇಟ್ಸ್ ರೇಡರ್‌ನನ್ನು ಹಿಡಿಯಲು ಯು ಮುಂಬಾ ಆಟಗಾರರು ಪ್ರಯತ್ನಿಸಿದ್ದು ಹೀಗೆ...

ಮೊದಲಾರ್ಧದ ಜಿದ್ದಾಜಿದ್ದಿನ ಹೋರಾಟದ ನಂತರ ಎರಡೂ ತಂಡಗಳು ಮುನ್ನಡೆಯ ಹಂಬಲದೊಂದಿಗೆ ದ್ವಿತೀಯಾರ್ಧ ಆರಂಭಿಸಿದವು. 20 ರಿಂದ 25 ನಿಮಿಷಗಳ ಅವಧಿಯಲ್ಲಿ ಉಭಯ ತಂಡಗಳು ಹಿಂದಿನ ಮೊತ್ತಕ್ಕೆ ತಲಾ ಮೂರು ಅಂಕಗಳನ್ನು ಸೇರಿಸಿದವು. ಈ ವೇಳೆ ರೇಡಿಂಗ್‌ನಲ್ಲಿ ಅಬ್ಬರಿಸಿದ ಪಟ್ನಾ ತನ್ನ ಹಿನ್ನಡೆಯನ್ನು 26-27ಕ್ಕೆ ತಗ್ಗಿಸಿ ಹೋರಾಟ ನೀಡಿತು. ಹೊಂದಾಣಿಕೆ ಹಾಗೂ ಕೌಶಲದ ಆಟವಾಡಿದ ಪಟ್ನಾ 30 ನಿಮಿಷಗಳ ಆಟದ ಅಂತ್ಯಕ್ಕೆ 30-28ರಲ್ಲಿ ಪುಟಿದೆದ್ದಿತು.

ಅಜಿತ್ ಚವಾಣ್ ಅವರ ಮಿಂಚಿನ ರೇಡಿಂಗ್ ಬಲದಿಂದ ಮಾಜಿ ಚಾಂಪಿಯನ್ ಯು ಮುಂಬಾ ತಂಡ ಪಂದ್ಯದ ಮೊದಲಾರ್ಧದ ಮುಕ್ತಾಯಕ್ಕೆ 24-21ರಲ್ಲಿ ಪಟ್ನಾ ಪೈರೇಟ್ಸ್ ವಿರುದ್ಧ ಮುನ್ನಡೆ ಸಾಧಿಸುವಲ್ಲಿ ಯಶ ಕಂಡಿತ್ತು.

ಮುಂಬಾ ತಂಡದ ನಾಯಕ ಹಾಗೂ ಡಿಫೆಂಡರ್, ಎರಡು ಅಂಕ ಕಲೆಹಾಕುವ ಮೂಲಕ ಲೀಗ್‌ನಲ್ಲಿ ಒಟ್ಟಾರೆ 350 ಟ್ಯಾಕಲ್ ಪಾಯಿಂಟ್ಸ್ ಕಲೆಹಾಕಿದ ಮೈಲಿಗಲ್ಲು ಸ್ಥಾಪಿಸಿದರು.

ಟೈಟನ್ಸ್‌ಗೆ ರೋಚಕ ಜಯ: ಅನುಭವಿ ಪವನ್ ಸೆಹ್ರಾವತ್ ಅಮೋಘ ರೇಡಿಂಗ್ ನೆರವಿನಿಂದ ತೆಲುಗು ಟೈಟನ್ಸ್ ತಂಡ 35–34 ಅಂಕಗಳಿಂದ ತಮಿಳ್ ತಲೈವಾಸ್ ವಿರುದ್ಧ ರೋಚಕ ಜಯ ಪಡೆಯಿತು. ಇದು ಲೀಗ್‌ನಲ್ಲಿ ತೆಲುಗು ಟೈಟನ್ಸ್‌ಗೆ ನಾಲ್ಕನೇ ಗೆಲುವು.

ಮೊದಲಾರ್ಧದಲ್ಲಿ ತೆಲುಗು ಟೈಟನ್ಸ್ 20–17 ಅಂಕಗಳಿಂದ ಮುನ್ನಡೆ ಪಡೆದಿತ್ತು. ತೆಲುಗು ಟೈಟನ್ಸ್ ಗೆಲುವಿನಲ್ಲಿ ಪವನ್ ಸೆಹ್ರಾವತ್ (12 ಅಂಕ), ಆಶೀಶ್ ನರ್ವಾಲ್ (9 ಅಂಕ) ಪ್ರಮುಖ ಪಾತ್ರ-ವಹಿಸಿದರು.

ತಮಿಳ್ ತಲೈವಾಸ್ ಪರ ರೇಡರ್ ಸಚಿನ್ (17 ಅಂಕ) ಗಳಿಸಿ ಉತ್ತಮ ಪ್ರದರ್ಶನ ನೀಡಿದರು.

ಗುರುವಾರದ ಪಂದ್ಯಗಳು: ಬೆಂಗಾಲ್ ವಾರಿಯರ್ಸ್– ದಬಾಂಗ್ ಡೆಲ್ಲಿ (ರಾತ್ರಿ 8.00), ಹರಿಯಾಣ ಸ್ಟೀಲರ್ಸ್– ಗುಜರಾತ್ ಜೈಂಟ್ಸ್ (ರಾತ್ರಿ 9.00)

ಆರ್‌ಸಿಬಿ ಕ್ರಮ ‘ಸುಂದರ’ ಎಂದ ಮ್ಯಾಕ್ಸ್‌ವೆಲ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತಮ್ಮನ್ನು ಉಳಿಸಿಕೊಳ್ಳದೇ ಇರುವ ಕ್ರಮವನ್ನು ‘ಸುಂದರ’ ಎಂದು ಬಣ್ಣಿಸಿದ್ದಾರೆ.

ಆರ್‌ಸಿಬಿ ವಿರಾಟ್ ಕೊಹ್ಲಿ, ಯಶ್ ದಯಾಳ್ ಮತ್ತು ರಜತ್ ಪಾಟೀದಾರ್ ಅವರನ್ನು ಮಾತ್ರ ಉಳಿಸಿಕೊಂಡಿದೆ. ಮ್ಯಾಕ್ಸ್‌ವೆಲ್ ಸೇರಿದಂತೆ ಉಳಿದೆಲ್ಲ ಆಟಗಾರರನ್ನು ಬಿಡುಗಡೆ ಮಾಡಿದೆ. ಮ್ಯಾಕ್ಸ್‌ವೆಲ್ ಅವರು 2021ರಿಂದ ಆರ್‌ಸಿಬಿಯಲ್ಲಿದ್ದರು. ಮಧ್ಯಮ ಕ್ರಮಾಂಕದಲ್ಲಿ ತಮ್ಮ ಅಬ್ಬರದ ಆಟದ ಮೂಲಕ ಗಮನ ಸೆಳೆದಿದ್ದರು.

‘ನನಗೆ ಆರ್‌ಸಿಬಿಯ ಮೊ ಬೊಬಾಟ ಮತ್ತು ಆ್ಯಂಡಿ ಫ್ಲವರ್ ಅವರಿಂದ ಫೋನ್ ಕರೆ ಬಂದಿತು. ಆ ಝೂಮ್ ಕರೆಯಲ್ಲಿ ಅವರಿಬ್ಬರೂ ನನ್ನ ಜೊತೆ ಮಾತನಾಡಿದರು. ನನ್ನನ್ನು ತಂಡದಲ್ಲಿ ಉಳಿಸಿಕೊಳ್ಳದಿರುವ ಕಾರಣಗಳನ್ನು ತುಂಬಾ ಚೆನ್ನಾಗಿ ವಿವರಿಸಿದರು. ಅವರ ವಿವರಣೆ ನಿಜಕ್ಕೂ ಸುಂದರವಾಗಿತ್ತು. ಆಮೇಲೆ ನಾವು ಕ್ರಿಕೆಟ್ ಬಗ್ಗೆಯೇ ಅರ್ಧಗಂಟೆ ಮಾತನಾಡಿದೆವು. ಅವರ ಯೋಜನೆ ಮತ್ತು ಭವಿಷ್ಯದ ಚಿಂತನೆಗಳ ಕುರಿತೂ ವಿವರಿಸಿದರು’ ಎಂದು ಮ್ಯಾಕ್ಸ್‌ವೆಲ್ ಅವರು ಇಎಸ್‌ಪಿಎನ್ ಕ್ರಿಕ್‌ಇನ್ಫೋ ವೆಬ್‌ಸೈಟ್‌ನ ಅರೌಂಡ್ ದ ವಿಕೆಟ್ ಶೋನಲ್ಲಿ ಹೇಳಿದ್ದಾರೆ.